ರಂಗಸಂಪನ್ನರು ಮಾಲಿಕೆ : ೧೪

# ಜಿ. ಎನ್. ಅಂಜಲಿದೇವಿ

**ವಾಣಿಶ್ರೀ ಎಸ್. ಪಾಟೀಲ**

ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ
ಬೆಂಗಳೂರು - ೫೬೦ ೦೦೨

**G. N. ANJALIDEVI** : A Monograph in Kannada by Vanishri S. Patil
Lecturer in Kannada, C. M. S. Degree Collage, Karatagi Dist. Koppal
Published by
B.T.Muni Rajaiah
Registrar, Karnataka Nataka Academy
Ravindra Kalakshetra, J.C.Road, Bangalore - 560 002

Chief Editor : C.G.Krishnaswamy
Editors : Dr.Siddhaling Pattanshetti
K.V.Nagaraja Murthy,
T. Raghu, Hooli Shekhar
First Impression : March, 2001
Pages : 74
Cover Design : Krishna Raichur
© Author
Printed by
Manohar Printing Press, Market, Dharwad - 580 001
Ph : 0836-790030
Price : Rs 30/-

ಜಿ. ಎನ್. ಅಂಜಲಿದೇವಿ : ರಂಗಸಂಪನ್ನರ ಕಿರು ಜೀವನಚರಿತ್ರೆ

ಲೇಖಕರು : ವಾಣಿಶ್ರೀ ಎಸ್. ಪಾಟೀಲ

ಪ್ರಕಾಶನ : ಬಿ. ಟಿ. ಮುನಿರಾಜಯ್ಯ
ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು – ೫೬೦ ೦೨

ಪ್ರಧಾನ ಸಂಪಾದಕರು : ಸಿ. ಜಿ. ಕೃಷ್ಣಸ್ವಾಮಿ
ಸಂಪಾದಕರು : ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ
ಕೆ. ವಿ. ನಾಗರಾಜಮೂರ್ತಿ,
ಟಿ. ರಘು, ಹೂಲಿ ಶೇಖರ್
ಪ್ರಥಮ ಮುದ್ರಣ : ಮಾರ್ಚ್, ೨೦೦೧
ಮುದ್ರಣ : ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್
ಧಾರವಾಡ - ೫೮೦ ೦೦೧
ಬೆಲೆ : ರೂ. ೩೦/-

# ಮೊದಲ ಮಾತು

ಕರ್ನಾಟಕ ನಾಟಕ ಅಕಾಡೆಮಿಯು ವರ್ಷದುದ್ದಕ್ಕೂ ನಾಡಿನಾದ್ಯಂತ ಹಾಗೂ ನಾಡಿನ ಹೊರಗಡೆ ರಂಗಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಕನ್ನಡದ ನಾಟಕ ಕ್ಷೇತ್ರವನ್ನು ನಿರಂತರ ವಿಸ್ತರಿಸುತ್ತ ಬಂದಿದೆ. ಇಂಥ ಕಾವ್ಯಗಳ ಜೊತೆಗೆ ನಾಟಕ ಕೃತಿ, ರಂಗ ವಿಮರ್ಶೆ, ರಂಗಕರ್ಮಿಗಳ ಪರಿಚಯ ಇತ್ಯಾದಿ ಕುರಿತ ಕೃತಿಗಳನ್ನೂ ಆಗಾಗ ಪ್ರಕಟಿಸಿದೆ.

ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರು ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಎಲ್ಲ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯ ವ್ಯಕ್ತಿಗಳ ಬದುಕಿನ ಪರಿಚಯವು ಅವರು ಗತಿಸಿದ ನಂತರ ನಿಧಾನವಾಗಿ ಇತಿಹಾಸದ ಹಿನ್ನೆಲೆಗೆ ಸಿಲುಕುತ್ತ ಹೋಗುತ್ತದೆ. ಅಂಥವರೆಲ್ಲರ ಬದುಕಿನ ಚರಿತ್ರೆಗಳು ಸುಸಂಘಟಿತವಾಗಿ ನಿರೂಪಿತಗೊಳ್ಳಬೇಕು, ಬರೆಯಲ್ಪಡಬೇಕು. ಹಾಗೆಯೇ ಈಗ ನಮ್ಮೊಡನಿರುವ ಮಹತ್ವದ ಸಾಧನೆಗೈದಿರುವ ನಟರು, ನಾಟಕಕಾರರು, ನಿರ್ದೇಶಕರು, ಹಿನ್ನೆಲೆ ರಂಗಕರ್ಮಿಗಳು ಮುಂತಾದ ರಂಗಸಂಪನ್ನ ವ್ಯಕ್ತಿಗಳನ್ನು ಕುರಿತು ಆದಷ್ಟು ಬೇಗನೆ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರ ನೆಮ್ಮದಿಯ, ಕೀರ್ತಿಯ ಬದುಕಿಗೆ ಇನ್ನಷ್ಟು ಹೆಚ್ಚಿನ ಸುಖವನ್ನು ಕೊಡಲೆತ್ನಿಸಬೇಕೆಂದು ನಿರ್ಧರಿಸಿ, ನಾಟಕ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ.

ಈ ನಿಟ್ಟಿನಲ್ಲಿ ಈಗಾಗಲೇ ೧, ಎಚ್. ಎನ್. ಹೂಗಾರ, ೨. ಬಿ. ವಿ. ಕಾರಂತ, ೩. ಮಾಸ್ಟರ್ ಹಿರಣ್ಣಯ್ಯ, ೪. ಆರ್. ನಾಗರತ್ನಮ್ಮ, ೫. ಎಚ್. ಕೆ. ಯೋಗಾನರಸಿಂಹ, ೬. ಬಿ. ಎನ್. ನಾಣಿ, ೭. ಚಿಂದೋಡಿ ಲೀಲಾ, ೮. ಆರ್. ನಾಗೇಶ್, ೯. ಎಂ. ಎಸ್. ಸತ್ಯು, ೧. ಪಿ. ಬಿ. ಧುತ್ತರಗಿ, ೧೧. ಹುನಗುಂದ ಬಾಬಣ್ಣ, ೧೨. ಶ್ರೀನಿವಾಸ ತಾವರಗಿರಿ, ೧೩. ಬಿ. ಆರ್. ಅರಿಷಿಣಗೋಡಿ, ೧೪. ಸುಭದ್ರಮ್ಮ ಮನ್ಸೂರು, ೧೫. ಡಿ. ದುರ್ಗಾದಾಸ, ೧೬, ರಾಜಾನಂದ. ೧೭. ಪ್ರಸನ್ನ, ೧೮. ಕೆ. ಎನ್. ಟೇಲರ್, ೧೯. ಎಂ. ವಿ. ವಾಸುದೇವರಾವ್. ೨೦. ಗಜಾನನ ಮಹಾಲೆ, ೨೧. ಎಚ್. ಟಿ. ಅರಸು, ೨೨. ಕೆ. ಅಮಿನ ಪೇಂಟರ್ ೨೩. ಹೆಚ್. ಜಿ. ಸೋಮಶೇಖರ ರಾವ್ ಅವರನ್ನು ಕುರಿತು ಪುಸ್ತಿಕೆಗಳು ಪ್ರಕಟಗೊಂಡಿವೆ.

ನಾಟಕ ಅಕಾಡೆಮಿಯ ಸದಸ್ಯರಾದ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಕೆ. ವಿ. ನಾಗರಾಜಮೂರ್ತಿ ಟಿ. ರಘು ಹಾಗೂ ಹೂಲಿ ಶೇಖರ್ ಅವರು ಸಮಿತಿಯು ಈ ಪುಸ್ತಿಕೆಗಳನ್ನು ಚೆನ್ನಾಗಿ ಸಂಪಾದಿಸಿ ಹೊರತರುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಅವರಿಗೆ ನಾಟಕ ಅಕಾಡೆಮಿಯ ಹಾಗೂ ವೈಯಕ್ತಿಕವಾಗಿ ನನ್ನ ಪರವಾಗಿ ಗೌರವ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಪುಸ್ತಿಕೆಗಳ ಪ್ರಕಟಣೆಗೆ ಒಮ್ಮತದಿಂದ ನಿರ್ಧರಿಸಿದ ಹಾಗೂ ಪ್ರಕಟಣೆಗೆ ಪೂರ್ವದಲ್ಲಿಯೇ ಕೆಲವು ಪುಸ್ತಕಗಳನ್ನು ಮಾರಾಟ ಮಾಡಲು ನೆರವಾದ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕೃತಿ ರಚಿಸಿ ಕೊಟ್ಟ ಲೇಖಕರಿಗೆ, ಮುಖಪುಟ ಕಲಾವಿದರಿಗೆ ಹಾಗೂ ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

ಸಿ. ಜಿ. ಕೃಷ್ಣಸ್ವಾಮಿ<br>
ಅಧ್ಯಕ್ಷರು<br>
ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

.

# ಸಂಪಾದಕರ ಮಾತು

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ರಂಗಭೂಮಿಯು ವ್ಯಕ್ತಿಗಳ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸಿ ಅವರ ಭಾವೋದ್ವೇಗ, ಭಾವೋನ್ಮಿಲನಗಳಿಗೆ ಅಭಿವ್ಯಕ್ತಿಯನ್ನು ನೀಡುವಂತೆ ಕಲಾ ಪ್ರಪಂಚದ ಉಳಿದ ಮಾಧ್ಯಮಗಳು ಮಾಡಲಾರವು. ಕರ್ನಾಟಕದ ಮೂಲೆಮೂಲೆಯಲ್ಲಿ ಜಾನಪದ ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಈ ದೃಷ್ಟಿಯಿಂದ ಹಲವಾರು ವರ್ಷಗಳಿಂದ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಪ್ರಯೋಗದಿಂದ ಪ್ರಯೋಗಕ್ಕೆ ಬದಲಾಗುತ್ತ ಬೆಳೆಯುತ್ತ, ಹೊಸಹೊಸದಾಗುತ್ತ ಸಾಗುವ ಸಜೀವ ರಂಗಕಲೆಯನ್ನು ದಾಖಲೆಯ ಕಟ್ಟುಪಾಡಿಗೆ ಸಿಲುಕಿಸುವುದು ಬಲು ಕಷ್ಟದ ಕೆಲಸ.

ಮೊದಲಿನಿಂದಲೂ ಇತಿಹಾಸವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮವರು ಯೋಚಿಸಿದ್ದೇ ಕಡಿಮೆ. ಹೀಗಾಗಿ ಅಸಂಖ್ಯ ರಂಗ ಕಲಾವಿದರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ ಕಾಲ ಕಳೆದಂತೆ ಮಸಕಾಗುತ್ತ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ, ಲಭ್ಯವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನಾಗಿ ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ಕರ್ನಾಟಕ ನಾಟಕ ಅಕಾಡೆಮಿಯ ಉತ್ಸಾಹಿ ಅಧ್ಯಕ್ಷರಾದ ಸಿ.ಜಿ. ಕೃಷ್ಣಸ್ವಾಮಿಯವರ ಒತ್ತಾಸೆ ಹಾಗೂ ಎಲ್ಲ ಸದಸ್ಯರ ಸಕ್ರಿಯ ಸಹಕಾರದ ಮೇರೆಗೆ ಈ ಸಲದ ಅಕಾಡೆಮಿ ಈ ಕಾರ್ಯದಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ನಮ್ಮೊಡನಿರುವ ರಂಗಕರ್ಮಿಗಳ ಬಗ್ಗೆ ರಂಗಸಂಪನ್ನರು ಎಂಬ ಮಾಲಿಕೆಯಲ್ಲಿ ಕಿರು ಜೀವನ ಚರಿತ್ರೆಯ ಕೆಲವು ಪುಸ್ತಿಕೆಗಳನ್ನು ಈಗಾಗಲೇ ಪ್ರಕಟಿಸಿದೆ.

ನಾಟಕ ಮೂಲತಃ ಪ್ರದರ್ಶಕ ಕಲೆಯಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಾಹಿತ್ಯ, ಬರವಣಿಗೆ, ವಸ್ತುಸಂಗ್ರಹಣೆ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ, ನೆನಪು ಸಂಗ್ರಹ ಮುಂತಾದ ರೀತಿಯಲ್ಲಿ ದಾಖಲಿಸುವ ಪ್ರಯತ್ನ ಆಗಬೇಕಾಗಿದೆ. ನಮ್ಮ ರಂಗಭೂಮಿಯ ನಟರು, ನಾಟಕಕಾರರು, ನಿರ್ದೇಶಕರು, ರಂಗಸಂಗೀತಗಾರರು. ಹಿನ್ನೆಲೆ ರಂಗಕರ್ಮಿಗಳು ಮುಂತಾದವರು ಮಾಡಿದ ಐತಿಹಾಸಿಕ ಕೆಲಸಗಳು ಜೀವಂತವಾಗಿ ಆಸಕ್ತ ಓದುಗರಿಗೆ, ಚರಿತ್ರೆಕಾರರಿಗೆ ಲಭಿಸುವಂತಾಗಬೇಕು. ಆಗ ಕತ್ತಲೆಗೆ ಸಂದ ನಾಟಕ ಸಾಹಿತ್ಯ ಹಾಗೂ ಪ್ರಯೋಗಗಳ ಎಷ್ಟೋ ಪುಟಗಳು ಮತ್ತೆ ಬೆಳಕಿಗೆ ಬರುವುದರಲ್ಲಿ ಸಂಶಯವಿಲ. ಈಗ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ರಂಗಸಂಪನ್ನ ಕಲಾವಿದರ ಬಗ್ಗೆ ಕೇವಲ ದಿಕ್ಸೂಚಿಯಂತಿವೆ. ಅವರನ್ನು ಕುರಿತು ಇನ್ನೂ ಎಷ್ಟೋ ವಿಷಯಗಳು, ವಿವರಣೆಗಳು ಹೊರಬರಬೇಕು, ಪ್ರಕಟಗೊಳ್ಳಬೇಕು. ಅಂಥ ಕಾರ್ಯಕ್ಕೆ ಈಗಿನ ಈ ಪ್ರಕಟಣೆಗಳು ನಾಂದಿ ಹಾಗೂ ಪ್ರೇರಕ ರಚನೆಗಳು ಎಂಬುದನ್ನು ಮರೆಯಲಾಗದು. ಇಲ್ಲಿ ನಮೂದಿಸಲಾದ ವಿವರಗಳಿಗೆ ಹಾಗೂ ವ್ಯಕ್ತವಾದ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇದು ಶ್ರೀಮತಿ ಜಿ. ಎನ್. ಅಂಜಲಿದೇವಿಯವರನ್ನು ಕುರಿತು ಶ್ರೀಮತಿ ವಾಣಿಶ್ರೀ ಎಸ್. ಪಾಟೀಲ ಅವರು ಬರೆದ ಪುಸ್ತಕ. ಪ್ರಸಿದ್ಧ ನಾಯಕ, ಗಾಯಕ ನೀಲಕಂಠಪ್ಪನನ್ನು ವರಿಸಿ, ಅವರಿಗೆ ಸರಿದೊರೆಯಾಗಿ ರಂಗಭೂಮಿಯನ್ನು ಬೆಳಗಿದ ಅಂಜಲಿದೇವಿಯ ಸಮಗ್ರ ಬದುಕೇ ರಂಗಭೂಮಿಯ ವಿಸ್ತ್ರತ ಚರಿತ್ರೆಯಂತಿದೆ. ತಮ್ಮ ಆರನೆಯ ವಯಸ್ಸಿನಲ್ಲಿಯೇ ಬಾಲನಟಿಯಾಗಿ ರಂಗವೇರಿದ ಅಂಜಲಿದೇವಿಯವರದು ನಿರಂತರ ರಂಗಾರಾಧನೆ. 'ರಕ್ತರಾತ್ರಿ'ಯ ದೌಪದಿ, 'ಸಂಗೊಳ್ಳಿ ರಾಯಣ್ಣ'ದ ರಾಣಿ ಚೆನ್ನಮ್ಮ, 'ಜಗಜ್ಯೋತಿ ಬಸವೇಶ್ವರ'ದ ನೀಲಾಂಬಿಕೆ, 'ರೇಣುಕಾ ಎಲ್ಲಮ್ಮ'ದ ರೇಣುಕೆ, 'ಹೇಮರೆಡ್ಡಿ ಮಲ್ಲಮ್ಮ'ದ ಮಲ್ಲಮ್ಮ; ಭೀಮಾಂಬಿಕೆ, ಚಿತ್ರಾಂಗದೆ ಹೀಗೆ ಅಸಂಖ್ಯ ನಾಟಕಗಳ ಪ್ರಮುಖ ಪಾತ್ರಗಳೇ ತಾವಾಗಿ ಅಭಿನಯ ಕೌಶಲ್ಯ ಮೆರೆದ ಅಂಜಲಿದೇವಿಯವರು ಶಾರದಾ ನಾಟ್ಯ ಸಂಘ, ಗೋಕಾಕ ಕಂಪನಿ, ಭಾರತಿ ನಾಟ್ಯ ಸಂಘ, ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ, ಓಬಳೇಶ್ವರ ಕಂಪನಿ, ಇಟಗಿ ಭೀಮಾಂಬಿಕಾ ನಾಟ್ಯ ಸಂಘ ಮುಂತಾದವುಗಳಿಗೆ ತಮ್ಮ ಅಭಿನಯ ಸೇವೆ ನೀಡಿ ಪ್ರಖ್ಯಾತರಾಗಿದ್ದಾರೆ. ನಾಯಕಿ, ಖಳನಾಯಕಿ, ಪೋಷಕನಟಿ, ಹಾಸ್ಯನಟಿ ಎಲ್ಲ ಬಗೆಯ ಪಾತ್ರಗಳನ್ನು ಅವರು ನಿರ್ವಹಿಸಿದ್ದಾರೆ. ಕಂದಗಲ್ಲ ಹನಮಂತರಾಯರು, ನಲವಡಿ ಶ್ರೀಕಂಠಶಾಸ್ತ್ರಿಗಳು, ಎಚ್.ಎನ್. ಹೂಗಾರ, ಎಲಿವಾಳ ಸಿದ್ದಯ್ಯಸ್ವಾಮಿ ಮುಂತಾದವರ ಒಡನಾಟದಲ್ಲಿ ಬೆಳೆದ ಅಂಜಲಿದೇವಿಯವರನ್ನು ಕನ್ನಡ ರಂಗಭೂಮಿ ಸೂಕ್ತವಾಗಿ ಗೌರವಿಸಿದೆ.

ಈ ಮಾಲಿಕೆಯ ಪುಸ್ತಕಗಳನ್ನು ಸಕಾಲದಲ್ಲಿ ಬರೆದು ಕೊಟ್ಟ ಎಲ್ಲ ಲೇಖಕರಿಗೆ ಹಾಗೂ ನಾಟಕ ಅಕಾಡೆಮಿಯ ಮೂಲಕ ಅವನ್ನು ಪ್ರಕಟಿಸುವಲ್ಲಿ ಎಲ್ಲ ರೀತಿಯಿಂದ ನೆರವಾದ ಆತ್ಮೀಯರಾದ ಸಿ. ಜಿ. ಕೆ. ಕೆ. ವಿ. ನಾಗರಾಜಮೂರ್ತಿ, ಹೂಲಿ ಶೇಖರ್, ಟಿ. ರಘು ಮತ್ತು ಬಿ. ಟಿ. ಮುನಿರಾಜಯ್ಯ ಹಾಗೂ ಮನೋಹರ ಮುದ್ರಣಾಲಯದ ರವಿ- ಚಂದ್ರು, ರಕ್ಷಾಪುಟದ ವಿನ್ಯಾಸ ಮಾಡಿಕೊಟ್ಟ ಕೃಷ್ಣ ರಾಯಚೂರು ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬೆಂಗಳೂರು — ಸಿದ್ಧಲಿಂಗ ಪಟ್ಟಣಶೆಟ್ಟಿ

೧೦-೨-೨೦೦೧ — ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


| | |
|---|---|
| ೧. ಪೀಠಿಕೆ | ೬ |
| ೨. ಆಕಾಶವಾಣಿಯಲ್ಲಿ ಅಂಜಲಿದೇವಿ | ೨೭ |
| ೩. ಮರೆಯದ ಘಟನೆಗಳು | ೨೭ |
| ೪. ರಂಗದ ಕುರಿತು ಅಂಜಲಿದೇವಿಯವರ ಅನಿಸಿಕೆಗಳು | ೫೭ |
| ೫. ನೆನಪಿನಂಗಳದಿಂದ | ೭೨ |
| ಅನುಬಂಧ | ೭೮ |

# ಪೀಠಿಕೆ

ಗಂಗಾವತಿ ರಾಜ್ಯ ಮಟ್ಟದಲ್ಲಿ ಹೆಸರುವಾಸಿಯಾದ ನಗರ. ತುಂಗಭದ್ರಾ ಎಡದಂಡೆ ಕಾಲುವೆಯನ್ನು ಹೊಂದಿರುವ ಸಮೃದ್ಧ ಭೂಮಿ, ಭತ್ತದ ಬೆಳೆಗೆ ಹೆಸರಾದ ತಾಲೂಕು, ಗಂಗಾ ಎಂದರೆ ನೀರು, ನೀರಿನಿಂದ ಆವೃತ್ತವಾದ ಕಾರಣ ಗಂಗಾವತಿಯೆಂದು ಹೆಸರಿಸಿರಬೇಕು. ಎಲ್ಲಾ ಕಾಲಕ್ಕೂ ನೀರಿಗೆ ಅಭಾವವಿರದ, ಥಳುಕುಬಳುಕಿನ, ಸದಾ ಒಂದಿಲ್ಲೊಂದು ಸುದ್ದಿಯಲ್ಲಿರುವ ನಗರ, ರಾಜಕೀಯವಾಗಿ ಒಬ್ಬ ಲೋಕಸಭಾ ಸದಸ್ಯ, ಒಬ್ಬ ಶಾಸಕ ಹಾಗೂ ಒಬ್ಬ ಮಂತ್ರಿಯನ್ನು ಒಂದೇ ಊರಲ್ಲಿ ಹೊಂದಿದ ನಗರ.

ಅನೇಕ ವೃತ್ತಿ ಕಂಪನಿಗಳಿಗೆ ಮರುಹುಟ್ಟು ನೀಡಿದ ರಂಗ ದಿಗ್ಗಜರಾದ ಎಲಿವಾಳ ಸಿದ್ದಯ್ಯಸ್ವಾಮಿ, 'ನಟರಾಜ ರತ್ನ' ಮೃಡದೇವ ಗವಾಯಿಗಳಂಥವರಿಗೆ ತವರೂರಾಗಿ ಅವರನ್ನು ಪೋಷಿಸಿ ಬೆಳೆಸಿದಂತಹ ನಗರ. ಇಂಥ ನಗರದ ಮುಖ್ಯ ರಸ್ತೆಯಲ್ಲಿ ನೀಲಕಂಠೇಶ್ವರ ಗುಡಿಯ ಮಗ್ಗುಲಿಗೆ ಶ್ರೀಮಂತ ಬಡಾವಣೆಯಲ್ಲಿ ವಾಸಿಸಿದ ಧೀಮಂತ, ಹೃದಯವಂತ ಕಲಾವಿದೆ ಜಿ.ಎನ್.ಅಂಜಲಿದೇವಿ; ಪತಿಯಿಂದ ಬಳುವಳಿಯಾಗಿದ್ದ ಗದುಗಿನ ಸ್ವಂತ ಮನೆಯನ್ನು ಮಾರಿ, ತನ್ನ ಮಗಳು ಕಲಾವಿದೆ ವಂದನಾಳ ಜೊತೆ ಬಾಡಿಗೆ ಮನೆಯಲ್ಲಿ ವಾಸಿಸಿದ್ದಾಳೆ. ಜಿ. ಎನ್. ಅಂಜಲಿದೇವಿ ಬರೀ ಒಬ್ಬ ಕಲಾವಿದೆಯಲ್ಲ, ಶ್ರೇಷ್ಠ ಹಾಡುಗಾರ್ತಿ, ಪ್ರತಿಭಾವಂತ ನಿರ್ದೇಶಕಿ - ಎಲ್ಲದಕ್ಕೂ ಹೆಚ್ಚಾಗಿ ಆರ್ಥಿಕವಾಗಿ ಬಡವಳಾದರೂ ಹೃದಯ ವೈಶಾಲ್ಯತೆಯ ಶ್ರೀಮಂತೆ. ಒಂದು ಕಾಲಕ್ಕೆ ಎಲ್ಲಾ ವರ್ಗದ ಅಭಿಮಾನಿಗಳ ಹೃದಯಮಂದಿರದಲ್ಲಿ ಶಾಶ್ವತ ಸ್ಥಾನ ಪಡೆದ ನಾಯಕಿ, ಗಾಯಕಿಯಾಗಿದ್ದರೂ ಕೂಡ ಸರಳತನ, ವಿನಯವಂತಿಕೆಯೇ ಮೈವೆತ್ತ ಸಾಕಾರಮೂರ್ತಿಯಾಗಿದ್ದಾರೆ. ಗಂಭೀರ ವ್ಯಕ್ತಿತ್ವದ ಈ ಶ್ರೇಷ್ಠ ನಟ ಮೃದು ಹೃದಯದ ಮಮತಾಮಯಿ ಕೂಡ.

ಮನೆಗೆ ಯಾರೇ ಅತಿಥಿಗಳು ಬರಲಿ, ಎದ್ದು ನಿಂತು ಎರಡೂ ಕರ ಜೋಡಿಸಿ, "ಬರ್ರೆಪಾ ಬರ್ರಿ, ಕುಳಿತುಕೊಳ್ರಿ, ನೀರು ಕುಡಿರಿ, ಚಹ ತಗೋತಿರೋ, ಕಾಫಿ ಕುಡೀತೀರೋ" ಎನ್ನುವರು. ಒಂದು ವೇಳೆ ರೊಟ್ಟಿ ಬಡಿಯುತ್ತ ಕುಳಿತಿದ್ದರೆ ಎರಡು ರೊಟ್ಟಿ ಹಿಡಿದೇ ಹೊರಬರುವ ಅನ್ನಪೂರ್ಣೆ ಸದಾ ಎಡೆಯೂರ ಸಿದ್ಧಲಿಂಗೇಶ್ವರನ, ಕಲಾದೇವರಾದ ಗದುಗಿನ ಗಾನಯೋಗಿ, ಶಿವಯೋಗಿ, ಪಂಡಿತ ಪಂಚಾಕ್ಷರ ಗವಾಯಿಗಳವರ, ಪಂಡಿತ ಪುಟ್ಟರಾಜ ಗವಾಯಿಗಳವರ ತಮ್ಮ ಮನೆದೇವರಾದ ಇಟಗಿ ಭೀಮಾಂಬಿಕೆಯ ನಾಮಸ್ಮರಣೆಯನ್ನು ಮಾಡುತ್ತ, ಎಲ್ಲವೂ ಅವರ ಕೃಪೆಯೆಂದು ನಿಟ್ಟುಸಿರುಬಿಡುತ್ತಾರೆ. ಜೀವನದಲ್ಲಿ ನಲಿವಿಗಿಂತ ನೋವನ್ನೇ ಹೆಚ್ಚಾಗಿ ಕಂಡುಂಡ ಅನುಭವಿ, ಅನುಭಾವಿ ಕೂಡ. ಹುಟ್ಟಿದ್ದು ಎಲ್ಲೋ, ಬೆಳೆದು ದೊಡ್ಡವಳಾಗಿ ಕಲಾಸೇವೆಗೈದದ್ದು ಕರ್ನಾಟಕದಾದ್ಯಂತ, ವಾಸಿಸಿದ್ದು ಗದಗ ಶಹರದಲ್ಲಿ. ಈಗ ನೆಲೆ ಕಂಡುಕೊಂಡಿದ್ದು ಗಂಗಾವತಿಯಲ್ಲಿ.

ತಮ್ಮ ಹಿಂದಿನ ರಂಗಾನುಭವ ಕುರಿತು ಹೇಳತೊಡಗಿದರೆ, ಆ ಲೋಕಕ್ಕೆ ನಮ್ಮನ್ನೂ ಕರದೊಯ್ದು ಬಿಡುತ್ತಾರೆ. ಕೇಳುತ್ತ ಹೋದಂತೆಲ್ಲಾ ರೋಮಾಂಚನ ವಾಗುತ್ತದೆ, `ಅಂಜಲಿದೇವಿ ಹೇಳುತ್ತಾರೆ "ರಂಗದಿಗ್ಗಜರಾದ ಎಲಿವಾಳ

ಸಿದ್ದಯ್ಯಸ್ವಾಮಿ, ಮೃಡದೇವ ಗವಾಯಿ, ಕಟವಟೆಪ್ಪ, ಕಂದಗಲ್ ಹನುಮಂತರಾಯರು, ಹೆಚ್.ಟಿ.ಮಹಾಂತೇಶ ಶಾಸ್ತ್ರಿಗಳು, ನಲವಡಿ ಶ್ರೀಕಂಠಶಾಸ್ತ್ರಿಗಳು, ಎಚ್.ಎನ್.ಹೂಗಾರ ಮುಂತಾದ ಕವಿಗಳ ಒಡನಾಟ ನೆನಸಿಕೊಂಡ್ರೆ ನಮ್ಮ ಬಾಳು ಧನ್ಯ ಅನ್ನಿಸ್ತಾದ. ನನ್ನಂತೆ ನನ್ನ ಮಗಳೂ ಹುಟ್ಟು ಕಲಾವಿದೆ. ಐದು ರೂಪಾಯಿ ಸಂಬಳದಿಂದ ಈ ರಂಗದಾಗ ದುಡಿದೀವಿ. ಆದರೂ ಏನೊಂದೂ ಸಿಗಲಿಲ್ಲ. ಇರಲಿಕ್ಕೊಂದು ಸ್ವಂತ ಸೂರಿಲ್ಲ. ಕೊನೆಗಾಲಕ್ಕ ನಾಟಕ ಅಕಾಡೆಮಿಯವರು ಪ್ರಶಸ್ತಿ ಕೊಟ್ರು." ಕಲಾವಿದರಿಗೆ ಇದಕ್ಕಿಂತಲೂ ಇನ್ನೇನು ಬೇಕ್ರಿ ಎಂದು ವಿನಯವಂತಿಕೆಯಿಂದ ಉಪಕಾರ ಸ್ಮರಿಸುವ ಅಂಜಲಿದೇವಿಯವರು ಹಿರಿಯ ಕಲಾವಿದರ ಗುಣಗಾನ ಮಾಡುತ್ತ, ಕಿರಿಯ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತ ತನ್ನ ಹೊಟ್ಟೆ ಹಸಿದಿದ್ದರೂ ಕೂಡ, ಇನ್ನೊಬ್ಬರ ಹೊಟ್ಟೆ ಹಸಿವೆಯ ಬಗ್ಗೆ ಸದಾ ಚಿಂತಿಸುವ ಮಾನವಪ್ರೇಮಿ, ಹಿರಿಯ ಕಲಾವಿದರೆನಿಸಿಕೊಂಡಂತಹ ಎಷ್ಟೋ ಜನ ಕಲಾವಿದೆಯರು, ಸಹನಟಿಯರ ಒಳ್ಳೆಯ ನಟನೆಯನ್ನು ಹೊಗಳುವುದಿಲ್ಲ. ಅವರ ಒಳ್ಳೆಯ ಕೇಶಾಲಂಕಾರ, ವರ್ಣಾಲಂಕಾರ, ವಸ್ತ್ರಾಲಂಕಾರವನ್ನು ಸಹಿಸದೆ ಒಳಗೊಳಗೇ ಅಸೂಯೆಪಡುತ್ತಾರೆ. ಅಂಜಲಿದೇವಿ ಮಾತ್ರ ಇದಕ್ಕೆ ಸಂಪೂರ್ಣ ತದ್ವಿರುದ್ಧ.

ನಾನು ಹಲವಾರು ಬಾರಿ ಅಂಜಲಿದೇವಿಯವರ ಮನೆಗೆ ತೆರಳಿ ಅವರನ್ನು ಸಂದರ್ಶಿಸಿದೆ. ಹಾಗೇ ಬರವಣಿಗೆಯೂ ಸಾಗಿತು. ಆದರೆ ಪ್ರತಿಬಾರಿ ಹೋದಾಗಲೂ ಅಂಜಲಿದೇವಿಯವರು ಕೆಲವು ದಾಖಲಾರ್ಹವಾದಂತಹ ವಿಷಯಗಳನ್ನು ಹೇಳುತ್ತಿದ್ದರು. ಒಂದರ್ಥದಲ್ಲಿ ಅಂಜಲಿದೇವಿಯವರು ನಡೆದಾಡುವ ಒಂದು ಶ್ರೇಷ್ಠ ರಂಗಶಾಲೆ ಎಂದರೆ ಅತಿಶಯೋಕ್ತಿಯಲ್ಲ. ಅಂತಹ ಕಲಾಕೇಂದ್ರದ ನವರಸ ಭಾವಗಳ ಸಂಗಮವೇ ಅಂಜಲಿದೇವಿಯಾಗಿದ್ದರೆಂದು ಸಂಗೀತ ನಿರ್ದೇಶಕರಾದ ಕೆ.ವಾದಿರಾಜ ಕಂಪ್ಲಿಯವರ ಅನಿಸಿಕೆ. ಅಂಜಲಿದೇವಿಯವರ ಒಡನಾಟವಿದ್ದ ಎಲ್ಲರ ಅನಿಸಿಕೆಯೂ ಕೂಡ ಇದೆ ಆಗಿರುತ್ತದೆ. ಶ್ರೇಷ್ಠ ಅಭಿನಯದ ಜೊತೆ ವಿನಯವಂತಿಕೆಯೂ ಕೂಡ ಇವರಲ್ಲಿ ಮೇಳೈಸಿ ಇವರನ್ನು ಬಹು ಎತ್ತರಕ್ಕೆ ಕೊಂಡೊಯ್ದಿದೆ.

ನಾಟಕ ಪ್ರಕಾರಗಳಾದ ದೊಡ್ಡಾಟ, ಸಣ್ಣಾಟ, ಬಯಲಾಟ, ದಪ್ಪಿನಾಟ, ರಾಧಾನಾಟ, ಯಕ್ಷಗಾನ, ಅದರಂತೆ ನಾಟಕದಲ್ಲೂ ಹಿಂದೆ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದರು. ಅದು ಸ್ತ್ರೀಯರು ನಾಚುವಂತೆ ಅಭಿನಯಿಸುತ್ತಿದ್ದರು. ಕಾಲ ಬದಲಾದಂತೆ ನಾಟಕದಲ್ಲಿ, ಬಯಲಾಟದಲ್ಲಿ ಸ್ತ್ರೀಯರು ಪಾತ್ರ ವಹಿಸತೊಡಗಿದರು. ಆದರೆ ಯಕ್ಷಗಾನ ಮಾತ್ರ ಆ ಪರಂಪರೆಯನ್ನು ಇನ್ನೂ ಮುಂದುವರಿಸಿಕೊಂಡು ಬಂದಿದೆ. ಆದಾಗ್ಯೂ ಯಕ್ಷಗಾನದ ಇತ್ತೀಚೆಗೆ ಸ್ತ್ರೀಯರೂ ಒಲವು ತೋರಿಸುತ್ತಿದ್ದಾರೆ. ಸ್ತ್ರೀ ಪಾತ್ರಗಳಿಗಾಗಿ ಅತ್ಯಂತ ಹೆಸರಾದವರೆಂದರೆ ನಮ್ಮ ಭಾಗದಲ್ಲಿ ಸವಾಯಿ ಗಂಧರ್ವರು, ಎಲಿವಾಳ ಸಿದ್ದಯ್ಯಸ್ವಾಮಿಗಳು, ಬಯಲಾಟದಲ್ಲಿ ಮುಷ್ಟಗಟ್ಟಿ ವೀರನಗೌಡ, ಕುರುಗೋಡು ವಾಮದೇವ, ಯರಂಗಳಿಗೆ ಶಿವಣ್ಣ, ಹಾಗೆ ಕೊಪ್ಪಳದ ಮುರಳಿ. ಈಗಲೂ ಅವರ ಅಭಿನಯ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಡಾ. ಪುಟ್ಟರಾಜ ಗವಾಯಿಗಳವರ ಕಂಪನಿಯಲ್ಲಿ ಈಗಲೂ ಪುರುಷರೇ ಸ್ತ್ರೀ ಪಾತ್ರಗಳನ್ನು ಮಾಡುತ್ತಾರೆ ಎಂಬುದು ಗಮನಾರ್ಹ. ಅದರಂತೆ ಸ್ತ್ರೀಯರೂ ಕೂಡ ತಂಡದ ಸಾರಥ್ಯ

ವಹಿಸಿದವರೂ ಇದ್ದಾರೆ. ನೂತನ ಸಂಗೀತ ನಾಟಕ ಮಂಡಳಿಯ ಸೋನುಬಾಯಿ ದೊಡ್ಮನಿ, ಕುಕನೂರ ಲಲಿತ ಕಲಾ ನಾಟ್ಯ ಸಂಘದ ರಹಮಾನವ ಕಲ್ಮನಿ, ಚಾಮುಂಡೇಶ್ವರಿ ನಾಟಕ ಸಭಾದ ಮಳವಳ್ಳಿ ಸುಂದರಮ್ಮ, ಉಮಾ ಮಹೇಶ್ವರ ನಾಟಕ ಸಂಘದ ಸುಲೋಚನಮ್ಮ, ಪಾಂಡುರಂಗ ನಾಟಕ ಸಂಘದ ಚಿತ್ರನಟಿ ಪಂಢರಿಬಾಯಿ, ಸ್ತ್ರೀ ನಾಟಕ ಮಂಡಳಿಯ ಕುಂದಾಪುರ ಸುಶೀಲಮ್ಮ, ವಸಂತ ಕಲಾಮಿತ್ರ ಮಂಡಳಿಯ ಆರೂರ ಸತ್ಯಭಾಮಾ, ಕೆ. ಬಿ. ಆರ್. ಡ್ರಾಮಾ ಕಂಪನಿಯ ಚಿಂದೋಡಿ ಲೀಲಾ, ಶಕ್ತಿಕಲಾ ನಾಟ್ಯಸಂಘ ಚಿತ್ರದುರ್ಗದ ಶ್ರೀಮತಿ ಸುಮತಿಶ್ರೀ, ಅದರಂತೆ ನಾಟಕ ಸಂಘದ ಸಂಚಾಲಕಿಯಾಗಿ, ಇಡೀ ನಾಟಕದ ಎಲ್ಲಾ ಪಾತ್ರಗಳಲ್ಲೂ ಸ್ತ್ರೀಯರನ್ನು ತೊಡಗಿಸಿ, ಪುರುಷ ಪಾತ್ರಗಳನ್ನೂ ಸ್ತ್ರೀಯರಿಂದ ಸಮರ್ಥವಾಗಿ ಮಾಡಿಸಿ, ಪುರುಷ ಪ್ರೇಕ್ಷಕರಿಂದ ಶಹಬಾಶ್‌ಗಿರಿ ಪಡೆದ ಸ್ತ್ರೀ ನಾಟಕ ಮಂಡಳಿಯ ಆರ್. ನಾಗರತ್ನಮ್ಮರವರಂತೆ, ಜಿ.ಎನ್. ಅಂಜಲಿದೇವಿಯವರೂ ಕೂಡ ಹೆಣ್ಣುಮಕ್ಕಳ ತಂಡದಲ್ಲಿ ಪುರುಷ ಪಾತ್ರ ವಹಿಸಿದ್ದಾರೆ.

ಪೌರಾಣಿಕ ನಾಟಕಗಳಲ್ಲಿ ಬಾಲಕೃಷ್ಣನಾಗಿ, ಲವಕುಶರಾಗಿ, ಬಾಲರಾಮನಾಗಿ, ರಂಗ ಪ್ರವೇಶಿಸಿದವರೆಲ್ಲಾ ಬಾಲನಟರಾಗಿರುತ್ತಿದ್ದಿಲ್ಲ, ಕಾರಣವೇನೆಂದರೆ ಮುದ್ದು ಮುಖದ, ತುಂಬಿದ ಗಲ್ಲದ, ಆಕರ್ಷಕ ಕಂಗಳ ಬಾಲಕಿಯರೇ ಆಗಿರುತ್ತಿದ್ದರು. ಇಂದಿಗೂ ಚಲನಚಿತ್ರದಲ್ಲಿ ಬಾಲನಟರಾಗಿ ಬಾಲಕಿಯರೇ ಕಾಣಿಸಿಕೊಳ್ಳುತ್ತಿದ್ದಾರೆ. ಕರ್ನಾಟಕದ ಪ್ರಖ್ಯಾತ ಗುಬ್ಬಿ ಕಂಪನಿಯಿಂದ ಹಿಡಿದು ಎಲ್ಲಾ ಪ್ರಮುಖ ಕಂಪನಿ, ಸಣ್ಣಪುಟ್ಟ ಕಂಪನಿಗಳಲ್ಲಿ ಇದು ಸಂಪ್ರದಾಯವಾಗೇ ಬಂದಿತು. ಇದಕ್ಕಾಗಿ ವಿಶೇಷ ಕಾರಣವನ್ನೇನೂ ಕೊಡಬೇಕಾಗಿಲ್ಲ. ಹುಡುಗರಿಗಿಂತ ಹುಡುಗಿಯರು ಬಾಲಪಾತ್ರಗಳಲ್ಲಿ ಆಕರ್ಷಕರಾಗಿ ಕಾಣುತ್ತಾರೆಂಬ ಕಾರಣಕ್ಕಾಗಿ ಈ ಆಯ್ಕೆಯನ್ನು ಮಾಡುತ್ತಾರೆಂಬುದು ಸರ್ವವಿದಿತ. ಈ ಒಂದು ಪರಂಪರೆಗೆ ಸೇರಿದ ಅಭಿಜಾತ ಕಲಾವಿದೆ ಜಿ. ಎನ್. ಅಂಜಲಿದೇವಿ ತಮ್ಮದೇ ನಾಟಕ ಸಂಸ್ಥೆ 'ಶಾರದಾ ನಾಟಕ ಸಂಘ ಅದೋನಿ' ಯ 'ಸತ್ಯವಾನ ಸಾವಿತ್ರಿ' ನಾಟಕದಲ್ಲಿ ೧೯೪೬ರಲ್ಲಿ ಬಾಲಕ ಸತ್ಯವಾನನಾಗಿ ರಂಗ ಪ್ರವೇಶಿಸಿದರು.

ತಿಪ್ಪಣ್ಣನವರಿಗೆ ಮೃದಂಗವೆಂದರೆ ಪಂಚಪ್ರಾಣ. ಆಗಿನ ಕಾಲದಲ್ಲಿ ದೊಡ್ಡಾಟ, ಸಣ್ಣಾಟಗಳಲ್ಲಿ, ಹಿಮ್ಮೇಳದಲ್ಲಿ ಹಾಡುವುದೆಂದರೆ ಒಂದು ಪ್ರತಿಷ್ಠೆಯ ವಿಷಯವೇ ಆಗಿತ್ತು. ಅದರಲ್ಲೂ ಮೃದಂಗ ನುಡಿಸುವಂತಹ ಕಲಾವಿದರಿಗೆ ನಮ್ಮಲ್ಲಿ ವಿಶೇಷ ಗೌರವ. ಇಂತಹ ಮೃದಂಗಕ್ಕೆ ಆಕರ್ಷಿತರಾಗಿ ಆಟ, ದೊಡ್ಡಾಟಗಳಲ್ಲಿ ಪಾಲ್ಗೊಳ್ಳುತ್ತಿದ್ದ ತಿಪ್ಪಣ್ಣನವರ ಮನ ಸಹಜವಾಗಿ ನಾಟಕಗಳತ್ತ ವಾಲತೊಡಗಿತು. ಪತ್ನಿ ನರಸಮ್ಮ ನಾಟಕ ರಂಗದ ಬಗ್ಗೆ ಅಷ್ಟೊಂದು ಆಕರ್ಷಕಳಾಗಿರಲಿಲ್ಲವಾದರೂ, ಅದರ ಬಗ್ಗೆ ಅನಾಸಕ್ತಿ ಮಾತ್ರ ತೋರಿಸುತ್ತಿರಲಿಲ್ಲ. ಗಂಡನ ಎಲ್ಲಾ ಪ್ರಯತ್ನಗಳಿಗೂ ಸಹಕಾರಿಯಾಗಿ ನಿಲ್ಲುತ್ತಿದ್ದಳು ನರಸಮ್ಮ, ಈ ದಂಪತಿಗಳಿಗೆ ಐದು ಜನ ಹೆಣ್ಣು ಮಕ್ಕಳು ಜನಿಸಿದರು. ಮೊದಲನೆಯವರು ರತ್ನಮ್ಮ, ನಂತರ ಸೀತಮ್ಮ, ಸುಭದ್ರಮ್ಮ, ಲಕ್ಷ್ಮಿ, ಕೊನೆಯವರು ಅಂಜಲಿದೇವಿ. ಇದರಲ್ಲಿ ಲಕ್ಷ್ಮಿಯನ್ನು ಹೊರತುಪಡಿಸಿದರೆ ಉಳಿದವರೆಲ್ಲಾ ಕಲಾವಿದರೇ. ಲಕ್ಷ್ಮಿ ಚಿಕ್ಕಂದಿನಲ್ಲಿಯೇ ಇಹಲೋಕ

ತ್ಯಜಿಸಿದಳು. ಗಂಡು ಮಗುವಿಲ್ಲವೆಂಬ ಕೊರಗು ನರಸಮ್ಮನನ್ನು ಆಗಾಗ ಬಾಧಿಸುತ್ತಿತ್ತಾದರೂ ಹೆಣ್ಣು ಮಕ್ಕಳ ಅಪೂರ್ವ ಕಲೆಯ ಮೆರಗು ಆ ಕೊರಗನ್ನು ಮುಚ್ಚುತ್ತಿತ್ತು.

ಸ್ವಾತಂತ್ರ್ಯ ಪೂರ್ವ ೧೯೪೦ರ ಸುಮಾರಿಗೆ ತಿಪ್ಪಣ್ಣನವರು ತಮ್ಮ ಆಪ್ತರೊಡನೆ, ಹೆಚ್ಚಾಗಿ ತಮ್ಮ ರಕ್ತಸಂಬಂಧಿಗಳನ್ನು ಕಲೆಹಾಕಿ ಸುಮಾರು ೧೮ ಜನರ ತಂಡದೊಡನೆ ಬಳ್ಳಾರಿ ಭಾಗದಲ್ಲಿ ಒಂದು ಸ್ವಂತ ಕಂಪನಿಯನ್ನು ಪ್ರಾರಂಭಿಸಿದರು. ಅದು 'ಶಾರದಾ ನಾಟ್ಯಸಂಘ ಅದೋನಿ' ಎಂಬ ನಾಮಫಲಕದಿಂದ. ಅಲ್ಲಲ್ಲಿ ನಾಟಕಗಳನ್ನಾಡುತ್ತ ಕಂಪನಿ ಬಳ್ಳಾರಿಗೆ ಬಂದು ಬೀಡು ಬಿಟ್ಟಿತು. ತುಂಬು ಬಸುರಿಯಾಗಿದ್ದ ಪತ್ನಿ ನರಸಮ್ಮನ ಆರೋಗ್ಯಕ್ಕಾಗಿ ವಿಶೇಷ ಗಮನ ನೀಡಿದರು ತಿಪ್ಪಣ್ಣನವರು. ಯಾಕೆಂದರೆ ಒಂದರ ಮೇಲೊಂದರಂತೆ ನಾಲ್ಕು ಹೆಣ್ಣುಮಕ್ಕಳಾಗಿದ್ದರಿಂದ ಐದನೆಯ ಮಗು ಖಂಡಿತಾ ಗಂಡಾಗುತ್ತದೆಂಬ ಹಿರಿಯಾಸೆಯನ್ನು ಹೊತ್ತಿದ್ದರು. ಆದರೆ ಅವರ ಆಸೆ ಫಲಿಸಲಿಲ್ಲ. ಕೊನೆಯ ಮಗು ಕೂಡ ಹೆಣ್ಣಾಯಿತು, ೧೦-೦೨-೧೯೪೦ ರಂದು. ಇದರಿಂದ ತಿಪ್ಪಣ್ಣನವರು ಬೇಸರಪಟ್ಟುಕೊಳ್ಳಲಿಲ್ಲ. ಮುದ್ದಾದ ಮಗುವಿನ ಮುಖವನ್ನು ಕಂಡಾಗ ಗಂಡು ಕೂಸಾಗಲಿಲ್ಲವೆಂಬ ಚಿಂತೆಯೂ ಕೂಡ ಮರೆತುಹೋಯಿತು. ಒಂದು ಶುಭ ದಿನದಂದು ಮುದ್ದಾದ ಮಗುವಿಗೆ ಅಂಜಲಿದೇವಿಯೆಂದು ನಾಮಕರಣ ಮಾಡಿದರು.

ಅಂಜಲಿದೇವಿ ಚಿಕ್ಕವಳಿರುವಾಗ ತುಂಬಾ ಚುರುಕಾಗಿದ್ದಳು. ನಾಟಕದಲ್ಲಿನ ಎಲ್ಲಾ ಪಾತ್ರಗಳನ್ನು ಅನುಕರಣೆ ಮಾಡುತ್ತಾಳೆಂದು ಕಲಾವಿದರು ಮಾಲಕರಾದ ತಿಪ್ಪಣ್ಣನವರಿಗೆ ಹೇಳುತ್ತಿದ್ದರು. ಇದರಿಂದ ಈ ಮಗಳೂ ಕೂಡ ಕಲಾವಿದೆಯಾಗಲಿ ಎಂಬ ಹಿರಿಯಾಸೆ ಹೊಂದಿದರವರು. ಹಾಡು, ನೃತ್ಯವೆಂದರೆ ಹಿಗ್ಗುತ್ತಿದ್ದ ಅಂಜಲಿದೇವಿಗೆ ಅಕ್ಕ ಸುಭದ್ರಮ್ಮ ನೃತ್ಯ, ಹಾಡು ಹೇಳಿಕೊಡುವಳು. ಚಿಕ್ಕಂದಿನಲ್ಲಿಯೇ ಯೋಗ್ಯ ರಂಗ ತರಬೇತಿ ಪ್ರಾರಂಭವಾಯಿತು. ಅಕ್ಕನೇ ಗುರುವಾಗಿ ಕಲಿಸತೊಡಗಿದಳು. ಹೀಗೆ ನಿತ್ಯವೂ ಅಕ್ಕನಿಂದ ಸಂಗೀತಾಭ್ಯಾಸಗೈಯುತ್ತ ತಮ್ಮ ಕಂಪನಿಯ ನಾಟಕಗಳನ್ನು ನೋಡುತ್ತಿದ್ದ ಅಂಜಲಿದೇವಿಗೆ ರಂಗವನ್ನೇರಿ ಮುಖಕ್ಕೆ ಬಣ್ಣ ಬಳಿದುಕೊಳ್ಳುವ ಸುಯೋಗ ಬೇಗನೇ ಬಂದುಬಿಟ್ಟಿತು.

ಅಂಜಲಿದೇವಿ ಆರನೆಯ ವಯಸ್ಸಿನಲ್ಲಿದ್ದಾಗ ೧೯೪೬ ರಲ್ಲಿ 'ಸತ್ಯವಾನ ಸಾವಿತ್ರಿ' ನಾಟಕದಲ್ಲಿ ಬಾಲ ಸತ್ಯವಾನನಾಗಿ ರಂಗ ಪ್ರವೇಶಿಸಿದಳು. ಇದು ಶಾರದಾ ನಾಟ್ಯ ಸಂಘ ಅದೋನಿ ಕಂಪನಿಯ ಜನಪ್ರಿಯ ನಾಟಕವಾಗಿತ್ತು. ಅಂದು ಅಂಜಲಿದೇವಿಯ ಪಾತ್ರ, ಹಾಡು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು. ಕೋಗಿಲೆ ಕಂಠದಿಂದ ಹೊರಹೊಮ್ಮಿದ ಸುಮಧುರವಾದ ಹಾಡುಗಳು ಕೇಳುಗರಲ್ಲಿ ವಿದ್ಯುತ್ ಸಂಚಾರವನ್ನುಂಟು ಮಾಡಿದವು. ಅದೇ ನಾಟಕ ಯಶಸ್ವಿಯಾಗಿ ನೂರಾರು ಪ್ರದರ್ಶನಗಳನ್ನು ಕಂಡಿತು. ಆಕರ್ಷಕ ಕಂಗಳ ಮುದ್ದು ಮುಖದ ಕೋಗಿಲೆ ಕಂಠದ ಹುಡುಗಿ ಅಂಜಲಿದೇವಿ ನೋಡುಗರ ಬಾಯಲ್ಲಿ ನಲಿದಾಡತೊಡಗಿದಳು.

ಶಾರದಾ ನಾಟ್ಯ ಸಂಘವು ಊರಿಂದೂರಿಗೆ ಕ್ಯಾಂಪ್ ಮಾಡುತ್ತ ತಮ್ಮದೇ ಆದ ನಾಟಕಗಳಿಂದ ಯಶಸ್ವಿ ಪ್ರದರ್ಶನಗಳನ್ನು ನೀಡುತ್ತ ಸಾಗಿತು. ಅಂಜಲಿದೇವಿ ಚಿಕ್ಕ ಪಾತ್ರಗಳಿಂದ ನಾಯಕಿ ಪಾತ್ರಕ್ಕೆ ಬಡ್ತಿ ಪಡೆದರು.

ಪ್ರೇಮಜ್ಯೋತಿ, ಸತ್ಯವಾನ ಸಾವಿತ್ರಿ, ಜಗಜ್ಯೋತಿ ಬಸವೇಶ್ವರ, ಶಿವಜಲಂಧರ, ಛಲವಂತ ನಾಟಕಗಳಲ್ಲಿ ನಾಯಕಿಯಾಗಿ, ಖಳನಾಯಕಿಯಾಗಿ ಅಭಿನಯಿಸಿ ಹಿರಿಯ ಕಲಾವಿದರಿಂದ ಮೆಚ್ಚುಗೆಯನ್ನು ಪಡೆದರು. ಹೇಮರಡ್ಡಿ ಮಲ್ಲಮ್ಮ ನಾಟಕದಲ್ಲಿ ಮಲ್ಲಮ್ಮಳಾಗಿ ಅಭಿನಯ ಮಾಡಿದ ಅಂಜಲಿದೇವಿಯವರನ್ನು ಕಲಿಯುಗದ ಮಲ್ಲಮ್ಮನೆಂದೇ ಕರದರು. ಅಷ್ಟೊಂದು ಭಾವನಾ ಪ್ರಧಾನವಾಗಿತ್ತು ಅವರ ಅಭಿನಯ, ಕಲೆ ಎನ್ನುವುದು ವಂಶಪರಂಪರೆಯಾಗಿ ಬಂದಿರುವುದಲ್ಲದೆ, ಸತತ ಅಭ್ಯಾಸಶ್ರಮದ ಫಲವಾಗಿ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡುವುದನ್ನು ಅಂಜಲಿದೇವಿ ಚಿಕ್ಕಂದಿನಲ್ಲಿಯೇ ರೂಢಿಸಿಕೊಂಡಿದ್ದರು...

ರಾಣೆಬೆನ್ನೂರ, ದೇವರಗುಡ್ಡ, ಮೇದೂರ, ಮೆಡ್ಲೇರಿ, ಹಾವೇರಿ ಮುಂತಾದ ಕಡೆಯಲ್ಲಿ ಕಂಪನಿ ಒಳ್ಳೆಯ ಹೆಸರನ್ನೂ, ಹಣವನ್ನೂ ಮಾಡಿತು. ಹೀಗೆ ಊರಿಂದೂರಿಗೆ ಸಾಗುತ್ತ ಕಂಪನಿಯು ಮಹಾಮಹಿಮರಾದ ತಪೋನಿಧಿ ಕರಿಬಸವೇಶ್ವರರ ದಿವ್ಯತಾಣವಾದ ಅನಂತಪುರ ಜಿಲ್ಲೆಯ ಉಕ್ಕಡಗಾತ್ರಿ (ಉರುವಕೊಂಡ)ಗೆ ಬಂದು ಬೀಡುಬಿಟ್ಟಿತು. ತೆಲುಗು ನೆಲದ ಅರ್ಧಂಬದ್ಧ ಕನ್ನಡ ಮಾತನಾಡುವ ಜನರ ಮಧ್ಯೆ ಕಂಪನಿ ಕುಂಟುತ್ತ ಸಾಗಿತು. ಕಲಾವಿದರಲ್ಲಿ ಮೂಡಿದಂತಹ ಯಾವುದೋ ಒಂದು ಮುನಿಸು ರಕ್ತಸಂಬಂಧಿಕರಾದ ಕಲಾವಿದರಲ್ಲಿ ಒಡಕನ್ನು ಮೂಡಿಸಿತ್ತು. ಅದು ದಿನದಿಂದ ದಿನಕ್ಕೆ ಬಿರುಕನ್ನು ಹೆಚ್ಚಾಗಿಸಿ, ಕೊನೆಗೊಂದು ದಿನ ಪ್ರದರ್ಶನಕ್ಕೆ ಮುಂಚೆ ತೀವ್ರ ಸ್ವರೂಪದ ಕಂದಕವಾಗಿ ಕಂಪನಿಯು ತತ್ತರಿಸಿಬಿತ್ತು. ೧೯೪೦ ರಲ್ಲಿ ಅಂಜಲಿದೇವಿ ಹುಟ್ಟಿದ ವರುಷ ಪ್ರಾರಂಭಗೊಂಡ ಅದೋನಿಯ ಶಾರದಾ ನಾಟ್ಯ ಸಂಘ ಸುಮಾರು

೧೫ ವರುಷಗಳ ಕಾಲ ಕಲಾಸೇವೆಗೈದು ೧೯೫೫ ರಲ್ಲಿ ಉಕ್ಕಡಗಾತ್ರಿಯಲ್ಲಿ ಸ್ಥಗಿತವಾಯಿತು. ಪಾಲಿಗೆ ಬಂದಷ್ಟು ಸಾಮಾನುಗಳನ್ನು ತೆಗೆದುಕೊಂಡು ಹಲಕೆಲವನ್ನು ಮಾರಿ, ಕಲಾ ಸಂಬಂಧಿಗಳು ದಿಕ್ಕಿಗೊಬ್ಬರಂತೆ ನಡೆದರು. ಸ್ವಂತ ಕಂಪನಿ ಮುರಿದು ಹೋಗುವ ಮುನ್ನ ನಾಲ್ಕು ಮಂದಿ ಹಿರಿಯ ಮಕ್ಕಳಿಗೆ ಸಂಬಂಧ ಹುಡುಕಿ ಮದುವೆ ಮಾಡಿಕೊಟ್ಟಿದ್ದು ತಿಪ್ಪಣ್ಣನವರ ಒಂದು ಸಾಧನೆಯೇ ಆಗಿತ್ತು, ಐದು ಜನ ಹೆಣ್ಣುಮಕ್ಕಳ ಪೈಕಿ ನಾಲ್ಕು ಜನ ಹೆಣ್ಣುಮಕ್ಕಳು ಕಲಾವಿದರೇ ಆಗಿದ್ದರು. ಸುಭದ್ರಮ್ಮ, ಸೀತಮ್ಮನವರಂತೂ ಸಂಗೀತದಲ್ಲಿ ಸಾಧನೆಯನ್ನೇ ಮಾಡಿದ್ದರು. ಸೀತಮ್ಮ ಹಾರ್ಮೋನಿಯಂ ಮೇಲೆ ಕೈಯಾಡಿಸಿದರೆ ಸಾಕು ಕೇಳುಗರು ಮಾಯಾನಗರಿಯನ್ನು ಹೊಕ್ಕಂತಾಗುತ್ತಿತ್ತು. ಅಂತಹ ಪರಿಣತಿಯನ್ನು ಅವರು ಪಡೆದಿದ್ದರು. ಇವರ ಪತಿ ನಾರಾಯಣಪ್ಪ ಒಳ್ಳೆಯ ರಂಗ ಸಂಘಟಕನಾಗಿದ್ದ, ಜೊತೆಗೆ ಕಲಾವಿದ ಕೂಡ, ಸ್ವಂತ ತಂದೆಯ ಕಂಪನಿ ಮುರಿದ ಮೇಲೆ ಸೀತಮ್ಮ ತನ್ನ ಪತಿಯೊಡನೆ ಸುಳ್ಯದ ದೇಸಾಯಿ ಕಂಪನಿ, ಕವಲಿ ಚನ್ನಬಸಪ್ಪನವರ ಕಂಪನಿಗಳಲ್ಲಿ ಅನೇಕ ವರ್ಷ ದುಡಿದರು. ನಂತರ ಹಳ್ಳಿಹಳ್ಳಿಗೆ ಹೋಗಿ ಹವ್ಯಾಸಿ ಕಲಾತಂಡಗಳ ನಾಟಕಗಳ ನಿರ್ದೇಶನ ಮಾಡುತ್ತ, ಸಂಗೀತ ನೀಡುತ್ತ ನಾಟಕದ ಮಾಸ್ತರಣಿ ಆದರು. 'ಸೀತಮ್ಮ ನಾಟಕ ಕಲಿಸ್ಯಾಳಂದ ಮ್ಯಾಗ ಮುಗಿತು' ಎಂದು ಜನರು ಆ ನಾಟಕದ ಯಶಸ್ಸಿನ ಬಗ್ಗೆ ಮಾತನಾಡುತ್ತಿದ್ದರು. ಹೀಗಾಗಿ ಆ ನಾಟಕಗಳ ಕಲೆಕ್ಷನ್ ಚೆನ್ನಾಗಿ ಆಗುತ್ತಿತ್ತು. ಇದರಿಂದ ಕಲಾತಂಡಗಳು ಇನ್ನೊಂದು ನಾಟಕ ಕಲಿಸಲು ಸೀತಮ್ಮನವರಿಗೆ ಆಮಂತ್ರಣ ನೀಡುತ್ತಿದ್ದವು. ಅಭಿನಯ, ನೃತ್ಯ,

ಹಾಡು ಕಲಿಸಿ ಆ ನಾಟಕ ಸಂಪೂರ್ಣ ಯಶಸ್ವಿಯಾಗುವಂತೆ ಮಾಡುತ್ತಿದ್ದರು. ಹೀಗೆ ತಿಪ್ಪಣ್ಣನವರ ಮಕ್ಕಳೆಲ್ಲಾ ಅಪೂರ್ವ ಕಲಾವಿದರೇ ಆಗಿದ್ದರು. ಮೊಮ್ಮಕ್ಕಳು ಅಂದರೆ ಸೀತಮ್ಮನವರ ಮಕ್ಕಳಾದ ರೇಖಾ, ಬಿ.ಜಯಶ್ರೀ ಈಗ ಸಿಂಧನೂರಿನಲ್ಲಿ ನೆಲೆಸಿದ್ದಾರೆ. ಇವರೂ ಈಗಿನ ಚಾಲ್ತಿ ಕಲಾವಿದೆಯರಲ್ಲಿ ಹೆಸರು ಮಾಡಿದ್ದಾರೆ.

ತಿಪ್ಪಣ್ಣನವರು ಹದಿನೈದು ವರುಷಗಳ ಕಾಲ ಪೋಷಿಸಿ ಬೆಳೆಸಿದ ಸ್ವಂತ ಕಂಪನಿ ಉಕ್ಕಡಗಾತ್ರಿಯಲ್ಲಿ ನಿಂತೇ ಹೋಯಿತು. ಸಂಬಂಧಿ ಕಲಾವಿದರೆಲ್ಲಾ ಬೇರೆ ಬೇರೆ ಕಡೆಗೆ ಹೋದರು. ತಿಪ್ಪಣ್ಣನವರಿಗೆ ಬದುಕಲು ಆಸರೆ ಬೇಕಿತ್ತು. ವಿಧಿಯಿಲ್ಲದೆ ಬೇರೆ ಕಂಪನಿಗಳಿಗೆ ದುಡಿಯಲು ಹೋಗಬೇಕಿತ್ತು. ಪತ್ನಿ ನರಸಮ್ಮ ಮಗಳು ಅಂಜಲಿದೇವಿಯೊಡನೆ ಗದಗ ಕಡೆ ಪ್ರಯಾಣ ಬೆಳೆಸಿದರು. ಇದೇ ಸಂದರ್ಭದಲ್ಲಿ ನಾಟಕರಂಗದಲ್ಲಿ ಕ್ರಾಂತಿಯೇ ಆಗಿತ್ತು. ಅದು ಹೊಸ ಹೊಸ ಪ್ರಯೋಗಗಳ ವೃತ್ತಿ ಕಂಪನಿಯ ನಾಟಕಗಳ ಸುಗ್ಗಿಯೇ ಸುಗ್ಗಿ. ಇಡೀ ಉತ್ತರ ಕರ್ನಾಟಕದಾದ್ಯಂತ ಕೊಪ್ಪಳದಿಂದ ಹಿಡಿದು ಬಿಜಾಪುರ, ಬೆಳಗಾಂವ ತನಕ ನಾಟಕಗಳು ದಾಖಲೆಗಳ ಮೇಲೆ ದಾಖಲೆಗಳನ್ನು ನಿರ್ಮಿಸುತ್ತಿದ್ದವು.

ಕೊಪ್ಪಳದ ಕವಿ ನಿಟ್ಟಾಲಿ ಶಿವರುದ್ರಪ್ಪನವರು ತಮ್ಮ ಜೀವನಯಾತ್ರೆ ನಾಟಕದಿಂದ ಜನಪ್ರಿಯರಾಗಿದ್ದಲ್ಲದೆ ಕರ್ನಾಟಕದ ಶೇಕ್ಸಪಿಯರ್ ಕಂದಗಲ್ ಹನುಮಂತರಾಯರಿಂದ ಶಹಬಾಶ್‌ಗಿರಿಯನ್ನು ಪಡೆದಿದ್ದರು. ನಾಟಕದ ಹೊಸ ಹಾಡು ರಚಿಸುವಲ್ಲಿ ಹೆಸರಾದ ಯೋಗಾನರಸಿಂಹ, ರಾಯಚೂರಿನ ಗೌಸ ಮಾಸ್ತರರಂತೆ, ಕಂಪ್ಲಿಯ ವಾದಿರಾಜರು, ಕೊಪ್ಪಳದ ಓಜಿನಳ್ಳಿ ಸಿದ್ದಪ್ಪ ಮಾಸ್ತರರು ಹೊಸ ಹಾಡು ರಚಿಸುವಲ್ಲಿ ಹೆಸರು ಮಾಡಿದ್ದರು. ಶರಣ ಸಾಹಿತ್ಯ ರಚನೆಗೆ ಹೆಸರಾದ ಮಾರುತೇಶ ಮಾಂಡ್ರೆಯವರು ಸಾಮಾಜಿಕ, ಐತಿಹಾಸಿಕ ನಾಟಕ ರಚನೆಗೆ ಹೆಸರಾದ ಪಿ.ಬಿ. ಧುತ್ತರಗಿಯವರು, ಗದಗನ್ನೇ ಕೇಂದ್ರವನ್ನಾಗಿ ಮಾಡಿಕೊಂಡ ಕರ್ನಾಟಕ ಕವಿಚಂದ್ರ ಪಂಡಿತ ನಲವಡಿ ಶ್ರೀಕಂಠಶಾಸ್ತ್ರಿಗಳು, ಕರ್ನಾಟಕ ಶೇಕ್ಸಪಿಯರ್ ಕಂದಗಲ್ ಹನುಮಂತರಾಯರು, ನಾಟ್ಯಕವಿರಾಜ ಕವಿತಿಲಕ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು, ಜ್ಯೂಬಿಲಿ ಕವಿ ಎಚ್. ಎನ್. ಹೂಗಾರರು, ತ್ರಿಭಾಷಾ ಪಂಡಿತರಾದ ಡಾಕ್ಟರ್ ಪುಟ್ಟರಾಜ ಗವಾಯಿಗಳು, ಹೆಚ್.ಆರ್. ಭಸ್ಮ, ಕಂಪನಿ ಕಟ್ಟಿದ ಚಿತ್ತರಗಿ ಗಂಗಾಧರ ಶಾಸ್ತ್ರಿಗಳು, ಹಾರ್ಮೋನಿಯಂ ನುಡಿಸುವಲ್ಲಿ ಹೆಸರಾದ ವೀರೇಶ್ವರರು - ಹೀಗೆ ಗದಗನಲ್ಲಿಯ ದಾಖಲೆಯ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಇವೆಲ್ಲವನ್ನೂ ಮೀರಿಸಿದ ದಾಖಲೆಯೆಂದರೆ ಪಂಚಾಕ್ಷರ ಗವಾಯಿಗಳವರ ನಾಟಕ ಮಂಡಳಿ ಪ್ರದರ್ಶಿಸಿದ ನಲವಡಿ ಶ್ರೀಕಂಠಶಾಸ್ತ್ರಿ ಕೃತ 'ಸಂಪೂರ್ಣ ಹೇಮರಡ್ಡಿ ಮಲ್ಲಮ್ಮ' ನಾಟಕ ಗದಗ ಶಹರದಲ್ಲಿ ವರ್ಷಾನುಗಟ್ಟಲೇ ನಡೆಯಿತು. ಅದು ಜನದಟ್ಟಣೆಯಲ್ಲಿ ಪ್ರದರ್ಶನ ಕಂಡಿತು. ಮನೆಮನೆಯಲ್ಲಿ ಮನಮನದಲ್ಲೂ ಅದರ ಖ್ಯಾತಿ ವ್ಯಾಪಿಸಿತ್ತು. ಮಲ್ಲಮ್ಮನ ಪತಿಭಕ್ತಿ, ವೇಮನನ ವಿಲಾಸ ಜೀವನ, ನಂತರದ ವೈರಾಗ್ಯ, ಭರಮರೆಡ್ಡಿಯ ವಿಡಂಬನಾತ್ಮಕ ಹಾಸ್ಯ, ಲೌಕಿಕ ಅಲೌಕಿಕದ ಜ್ಞಾನ ನೀಡುವ ನವರಸಭರಿತವಾದಂತಹ ನಾಟಕ, ಎಲ್ಲಾ ಕಡೆ ಪ್ರಸಿದ್ಧಿಯಾಗಿ ಗದಗದಲ್ಲಿ ನಾಟಕ ಆಡುವಂತಹ ಜಾಗಕ್ಕೂ ಮಲ್ಲಮ್ಮ ಥೇಟರ್ ಎಂದೇ ಖ್ಯಾತಿಯಾಯಿತು. ಇಂಥ

ಅಪೂರ್ವ ದಾಖಲೆಯ ನಗರ, ರಂಗ ದಿಗ್ಗಜರೆನಿಸಿದವರ ತವರೂರಾದ ಗದಗಿಗೆ ತಿಪ್ಪಣ್ಣನವರು ಹೆಂಡತಿ ಹಾಗೂ ಮಗಳು ಅಂಜಲಿದೇವಿಯೊಡನೆ ಬಂದರು.

ಕೆಲ ದಿನಗಳ ಕಾಲ ಬಾಡಿಗೆ ಮನೆ ಹಿಡಿದು ಗದಗದಲ್ಲಿ ವಾಸಿಸಲು ನಿರ್ಧರಿಸಿದರು. ಗೋಕಾಕದಲ್ಲಿ ಕ್ಯಾಂಪ್ ಮಾಡಿದ ಥೇಟರ್ ಇನ್‌ಸ್ಟಿಟ್ಯೂಟ್ ಎಂಬ ಅನ್ವರ್ಥಕ ಸಾರ್ಥಕ ನಾಮ ಪಡೆದಿದ್ದ ಗೋಕಾಕ ಬಸವಣ್ಣೆಪ್ಪನ ಕಂಪನಿಯಿಂದ ಅಂಜಲಿದೇವಿಯವರಿಗೆ ಬುಲಾವ್ ಬಂತು. ಅದೊಂದು ಮಹಾಭಾಗ್ಯವೆಂದು ಬಗೆ ತಂದೆಯೊಡನೆ ಗೋಕಾಕಕ್ಕೆ ತೆರಳಿದರು. ಅಲ್ಲಿಗೆ ಹೋದಾಗ ಅಂಜಲಿದೇವಿ ನಡುಗಿಹೋದಳು. ಕಾರಣವೆಂದರೆ ಕರ್ನಾಟಕ ಶೇಕ್ಸಪಿಯರ್ ಕಂದಗಲ್ ಹನುಮಂತರಾಯರನ್ನು ಪ್ರತ್ಯಕ್ಷ ಕಾಣುವುದಲ್ಲದೆ, ಅವರ ನಿರ್ದೇಶನದಲ್ಲಿ ಮೊದಲ ಸಲ ನಟಿಸುವುದೆಂದರೆ ಸಾಮಾನ್ಯ ಸಂಗತಿಯೇ ? ಅದೂ ಎಂತಹ ನಾಟಕ ? ರಕ್ತರಾತ್ರಿ. ನಟಸಾರ್ವಭೌಮ ಎಲಿವಾಳ ಸಿದ್ದಯ್ಯಸ್ವಾಮಿಗಳಿಗಾಗಿ ರಚಿತಗೊಂಡದ್ದು, ಅದರಲ್ಲಿ ಅಶ್ವತ್ಥಾಮನ ಪಾತ್ರ ಎಲಿವಾಳ ಸಿದ್ದಯ್ಯಸ್ವಾಮಿಗಳು ವಹಿಸಿದ್ದರು. ದ್ರೌಪದಿಯ ಪಾತ್ರ ಅಂಜಲಿದೇವಿಯವರದು. ಇಂತಹ ಸದವಕಾಶ ಪೂರ್ವಜನ್ಮದ ಸುಕೃತವೆಂದೇ ಅಂಜಲಿದೇವಿಯವರು ಹೇಳುತ್ತಾರೆ.

ಕಂದಗಲ್ಲ ಹನುಮಂತರಾಯರ ಸಮರ್ಥ ದಿಗ್ದರ್ಶನದಲ್ಲಿ ರಂಗಸಿಂಹಗಳ ಜೊತೆಗೆ ಕಾದಾಡಲು 'ರಕ್ತರಾತ್ರಿ' ನಾಟಕದ ಮೊದಲ ದ್ರೌಪದಿಯಾಗಿ ಬಣ್ಣ ಹಚ್ಚಿಕೊಂಡಂತಹ ಖ್ಯಾತಿಯೂ ಅಂಜಲಿದೇವಿಯವರದು. ಯಾವುದೋ ಒಂದು ಸಂಭಾಷಣೆಯನ್ನು ಹೇಳಿ, ಹಿತ್ತಾಳೆ ತಂಬಿಗೆ ಎತ್ತಿ ನೀರು ಕುಡಿಯುತ್ತ ನಟರಿಂದ ಸಂಭಾಷಣೆ ಹೇಳಿಸುತ್ತಿದ್ದ ರಾಯರು, ಅದು ಸರಿಯಾಗಿ ಬಾರದ್ದರಿಂದ ಪಕ್ಕದ ಪಾತ್ರಧಾರಿಗೆ ಹಿತ್ತಾಳೆಯ ಚೊಂಬನ್ನೇ ಎತ್ತಿ ಬಿಸಾಡಿದ್ದರಂತೆ. ಅಂತಹ ದಕ್ಷ ನಿರ್ದೇಶನ ಅವರದು. ನಾಟಕ ನಿರ್ದೇಶಿಸುವಾಗ ತಮ್ಮ ಪರಿವೆಯನ್ನೇ ಮರೆಯುತ್ತಿದ್ದರಂತೆ. ಅಂತೂ 'ರಕ್ತರಾತ್ರಿ' ರಂಗದ ಮೇಲೆ ಪ್ರದರ್ಶನಕ್ಕೆ ಬಂದ ದಿನ ನೆನಪಿಸಿಕೊಂಡರೆ ಮೈ ಜುಂ ಎನ್ನುತ್ತದೆ ಅನ್ನುತ್ತಾರೆ ಅಂಜಲಿದೇವಿಯವರು. ಆ ದಿನ ದ್ರೌಪದಿಯಾಗಿ ಅಂಜುತ್ತ ರಂಗಕ್ಕೆ ಕಾಲಿಟ್ಟ ನಂತರ, ನನ್ನ ಸನ್ನಿವೇಶ ಮುಗಿಸಿ ಹೊರ ಬಂದಾಗ ರಾಯರು 'ಶಹಬಾಸ್' ಎಂದು ಭುಜ ತಟ್ಟಿದರು ಎನ್ನುತ್ತಾರೆ. ಎಲ್ಲರೂ ಅಂಜಲಿದೇವಿಯವರನ್ನು ಹೊಗಳಿದರು. 'ರಕ್ತರಾತ್ರಿ' ನಾಟಕದಲ್ಲಿ ೧೯೬೦-೬೧ ರಲ್ಲಿ ದ್ರೌಪದಿಯಾಗಿ ನಟಿಸಿದರು. ರಕ್ತರಾತ್ರಿಯೆಂದರೆ ಎಲಿವಾಳ ಸಿದ್ದಯ್ಯಸ್ವಾಮಿ, ಕಂದಗಲ್ ಹನುಮಂತರಾಯರು, ಅಂಜಲಿದೇವಿ ಎಂಬ 'ತ್ರಿವೇಣಿ ಸಂಗಮ' ಎಂದು ಅಭಿಮಾನಿಗಳು ಕೊಂಡಾಡಿದರು. ಹಾಗೆಯೇ ಕಂದಗಲ್ಲರ ನಿರ್ದೇಶನದಲ್ಲಿ ಅವರದೇ ಮತ್ತೊಂದು ಕೃತಿ 'ಕುರುಕ್ಷೇತ್ರ' ಕೂಡ ಈ ಕಂಪನಿಯಲ್ಲೇ ರಂಗಕ್ಕೆ ಬಂದಿತು. ಇವೆರಡೂ ನಾಟಕಗಳ ಪಾತ್ರ ವಹಿಸಿದ ಅಂಜಲಿದೇವಿಯವರಿಗೆ ಜೀವನಪೂರ್ತಿ ನಟಿಸುವಷ್ಟು ಅನುಭವ ತರಬೇತಿ ಸಿಕ್ಕಿತು. ಕೆಲವು ಕಾಲ ಗೋಕಾಕ ಕಂಪನಿಯಲ್ಲಿದ್ದು ತಿಪ್ಪಣ್ಣನವರ ಅನಾರೋಗ್ಯದ ಕಾರಣವಾಗಿ ಅಂಜಲಿದೇವಿಯವರು. ಗೋಕಾಕ ಕಂಪನಿಯನ್ನು ಬಿಡಬೇಕಾಗಿ ಬಂತು. ಹೀಗಾಗಿ ತಂದೆಯೊಡನೆ ಮತ್ತೆ ಗದಗಿಗೆ ಬಂದರು. ಕೆಲ ದಿನಗಳಲ್ಲಿ ತಂದೆಯವರ ಆರೋಗ್ಯ ಸುಧಾರಿಸಲು ಗದಗದಲ್ಲೇ ಶಾಶ್ವತವಾಗಿ ತಳವೂರಲು ನಿರ್ಧರಿಸಿದರು.

ಗದಗದಲ್ಲಿ ಕ್ಯಾಂಪ್ ಮಾಡಿದ ಶ್ರೀ ಸಿದ್ದಲಿಂಗೇಶ್ವರ ನಾಟ್ಯ ಸಂಘ ಪಡೇಸೂರ ಕಂಪನಿಗೆ ಸೇರಿದರು. ಪಡೇಸೂರ ಕಂಪನಿಯಲ್ಲಿ ಒಳ್ಳೆಯ ನುರಿತ ನಟನಟಿಯರಿದ್ದರು. ಪಂಚಾಕ್ಷರ ಗವಾಯಿಗಳವರ ಪ್ರೀತಿಯ ಶಿಷ್ಯನಾಗಿದ್ದ ಸ್ಪುರದ್ರೂಪಿ ನೀಲಕಂಠಪ್ಪ ಆ ಕಂಪನಿಯ ಹೆಸರಾಂತ ನಟನಾಗಿದ್ದ, ಸುಂದರ ವದನದ ಗಂಭೀರ ವ್ಯಕ್ತಿತ್ವದ ಆಕರ್ಷಕ ಮೈಕಟ್ಟಿನ ನೀಲಕಂಠಪ್ಪ ಶ್ರೇಷ್ಠ ನಟ, ಸಂಗೀತಗಾರ, ಹಾಡುಗಾರ ನಿರ್ದೇಶಕ ಎಲ್ಲಾ ಕಲೆಗಳು ಮೇಳೈಸಿದ ಸಾಕಾರ ಮೂರ್ತಿಯಾಗಿದ್ದ ನಟನ ಹಿನ್ನೆಲೆಯನ್ನು ಸ್ವಲ್ಪ ಗಮನಿಸೋಣ.

ಧಾರವಾಡ ಜಿಲ್ಲೆಯ ಗರಗದ ನಿವಾಸಿಯಾದ ನೀಲಕಂಠಪ್ಪ ಧಾರವಾಡದಲ್ಲಿ ಓದುವ ಕಾಲಕ್ಕೆ ಸಂಗೀತದ ಬಗ್ಗೆ ಒಲವಿರಿಸಿಕೊಂಡಿದ್ದ. ಧಾರವಾಡಕ್ಕೆ ಯಾವುದೇ ನಾಟಕ ಕಂಪನಿಗಳು ಬರಲಿ, ನಿತ್ಯವೂ ಅಲ್ಲಿ ಹಾಜರಿರುತ್ತಿದ್ದ. ಎಸ್.ಎಸ್.ಎಲ್.ಸಿ. ಮುಗಿಸಿ ಸರಕಾರಿ ಉದ್ಯೋಗಕ್ಕೆ ಸೇರಿದ. ಆದರೂ ಆತನಲ್ಲಿಯ ಕಲಾವಿದನಿಗೆ ನೆಮ್ಮದಿಯಿರಲಿಲ್ಲ. ಸಿಕ್ಕ ನೌಕರಿಯನ್ನು ಮಧ್ಯದಲ್ಲಿ ಬಿಟ್ಟು ಗದಗಿಗೆ ಬಂದು ವೀರೇಶ್ವರ ಪುಣ್ಯಾಶ್ರಮ ಸೇರಿದ ನಂತರ ಧಾರವಾಡದಲ್ಲಿ ಕೆಲಸಕ್ಕೆ ಸೇರಿದ. ಆದರೂ ಸಂಗೀತದ, ನಾಟಕದ ಗೀಳು ಬಿಡಲಿಲ್ಲ, ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತೇ ವಿನಃ ಕಡಿಮೆಯಾಗಲಿಲ್ಲ. ಯಾವುದೋ ಕೆಲಸಕ್ಕೆ ಕಿತ್ತೂರಿಗೆ ಹೋದಾಗ ನಾಟಕ ಕಂಪನಿಯನ್ನು ನೋಡಿ, ತೆಗೆದುಕೊಂಡು ಹೋದ ಸೈಕಲನ್ನು ದಾರಿಯಲ್ಲೇ ಬಿಟ್ಟು ಕಂಪನಿ ಸೇರಿದ ಪುಣ್ಯಾತ್ಮ.

ಈ ನೀಲಕಂಠಪ್ಪ ಪಡೇಸೂರ ಕಂಪನಿಯ ನಾಯಕ ನಟನಾಗಿ ಗದಗನಲ್ಲಿ ಹೆಸರಾಗಿದ್ದ ಸಂದರ್ಭದಲ್ಲೇ ಅಂಜಲಿದೇವಿ ಆ ಕಂಪನಿಯನ್ನು ಸೇರಿದರು. ಸಂಗೊಳ್ಳಿ ರಾಯಣ್ಣ ನಾಟಕದಲ್ಲಿ ನೀಲಕಂಠಪ್ಪ ರಾಯಣ್ಣನಾದರೆ ಅಂಜಲಿದೇವಿ ರಾಣಿ ಚೆನ್ನಮ್ಮನಾಗಿ ಅಭಿನಯಿಸಿದಳು. ಇಬ್ಬರ ಜೋಡಿ ಜನಪ್ರಿಯವಾಯಿತು. 'ಸತಿಯ ಸೌಭಾಗ್ಯ' ನಾಟಕದಲ್ಲಿ ಕಥಾನಾಯಕ ಶಾಲಾ ಶಿಕ್ಷಕನ ಪಾತ್ರದಲ್ಲಿ ನೀಲಕಂಠಪ್ಪ ನಟಿಸಿದರೆ ಕಥಾನಾಯಕಿಯಾಗಿ ಅಂಜಲಿದೇವಿ ನಟಿಸಿದರು. ಈ ನಾಟಕದ ೧೦೦ ನೇ ಪ್ರಯೋಗಕ್ಕೆ ರಾಜ್ಯದ ಆಗಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರು ಆಗಮಿಸಿದ್ದರು. ಜ್ಯುಬಿಲಿ ಕವಿ ಎಚ್.ಎನ್.ಹೂಗಾರರು ಅಧ್ಯಕ್ಷತೆ ವಹಿಸಿದ್ದರು. ನಾಟಕವನ್ನು ವೀಕ್ಷಿಸಿದ ಮುಖ್ಯಮಂತ್ರಿಗಳು ಕಲಾವಿದರ ಕಲೆಯನ್ನು ಕುರಿತು ಮುಕ್ತಕಂಠದಿಂದ ಹೊಗಳಿದರು. ಗದಗ ಕ್ಯಾಂಪಿನಲ್ಲಿಯೇ 'ಹಡೆದವ್ವ', 'ಜಗಜ್ಯೋತಿ ಬಸವೇಶ್ವರ ನಾಟಕಗಳು ಅತ್ಯಂತ ಜನಪ್ರಿಯವಾದವು. ಅಭಿಮಾನಿಗಳ ಹೃದಯವನ್ನು ತಮ್ಮ ಅಭಿನಯ ಸಾಮರ್ಥ್ಯದಿಂದ ಗೆದ್ದಿದ್ದ ನೀಲಕಂಠಪ್ಪನವರು ಕಥಾನಾಯಕಿಯಾಗಿ ಅಭಿನಯಿಸುತ್ತಿದ್ದ ಅಂಜಲಿದೇವಿಯ ಮನವನ್ನು ಪ್ರೀತಿಯಿಂದ ಕದ್ದುಬಿಟ್ಟಿದ್ದರು. ನೀಲಕಂಠಪ್ಪ ಬಸವೇಶ್ವರರಾಗಿ ಕಾಣಿಸಿಕೊಂಡರೆ ಅಂಜಲಿದೇವಿ ನೀಲಮ್ಮನ ಪಾತ್ರದಲ್ಲಿ ರಂಗವೇರುತ್ತಿದ್ದಳು.

ಹೀಗೆ ನೀಲಕಂಠಪ್ಪ ಒಳ್ಳೆಯ ಗಾಯಕ, ಒಳ್ಳೆಯ ನಾಯಕನಾದರೆ ಅಂಜಲಿದೇವಿಯು ಕೂಡ ಒಳ್ಳೆಯ ನಾಯಕಿ, ಒಳ್ಳೆಯ ಗಾಯಕಿ ಎಂದು ಹೆಸರು ಪಡೆದಳು. ನಾಟಕರಂಗದಲ್ಲಿ ನಾಯಕ ನಾಯಕಿಯಾಗುವುದರ ಜೊತೆಗೆ ಜೀವನರಂಗದಲ್ಲಿ ನಾಯಕ ನಾಯಕಿಯಾಗಲು ಬಯಸಿದರು. ಆಗ ಕಂಪನಿಯಲ್ಲಿ 'ಬೂದಿ ಮುಚ್ಚಿದ ಕೆಂಡ' ನಾಟಕದ ರಿಹರ್ಸಲ್ ನಡೆದಿತ್ತು. ಅದರ ಜೊತೆಜೊತೆಗೆ ತಿಪ್ಪಣ್ಣನವರು ಮಗಳ ಮದುವೆಯ ಬಗ್ಗೆ

ಮಾತುಕತೆಯನ್ನು ಪ್ರಾರಂಭಿಸಿದರು. ಮಾತುಕತೆ ಫಲಪ್ರದವಾಯಿತು. ಇಡೀ ನಾಟಕ ಕಂಪನಿಯಲ್ಲಿ ಮದುವೆಯ ವಾತಾವರಣವುಂಟಾಯಿತು. 'ಬೂದಿ ಮುಚ್ಚಿದ ಕೆಂಡ' ನಾಟಕದ ೧೨ನೇ ಪ್ರಯೋಗದಂದು ದಿನಾಂಕ ೧೨-೧೨-೧೯೬೩ನೇ ಗುರುವಾರ ೧೦ ಗಂಟೆಗೆ ನೀಲಕಂಠಪ್ಪ ಮಾಸ್ತರರ ಹಾಗೂ ಅಂಜಲಿದೇವಿಯವರ ವಿವಾಹ ಮಹೋತ್ಸವ ಕಾರ್ಯಕ್ರಮ ಸಾಂಗವಾಗಿ ಜರುಗಿತು. ರಂಗದ ಮೇಲೆ ರಾತ್ರಿ ಮೂರು ತಾಸು ಸತಿಪತಿಗಳಾಗಿ ನಟಿಸುತ್ತಿದ್ದವರು ಆಯುಷ್ಯಪರ್ಯಂತ ಬಾಳಬೇಕೆಂದು ಗುರುಹಿರಿಯರ ಸಮ್ಮುಖದಲ್ಲಿ ಸತಿಪತಿಗಳಾದರು. ಅಂಜಲಿದೇವಿ ಗದಗಿನ ನೀಲಕಂಠಪ್ಪ (ಜಿ. ಎನ್.) ಅಂಜಲಿದೇವಿಯಾದರು.

ಪ್ರೀತಿಯ ಮಗಳು ಅಂಜಲಿದೇವಿಗೆ ಯೋಗ್ಯ ಗಂಡ ಸಿಕ್ಕ ನೆಮ್ಮದಿ ತಂದ ತಾಯಿಗಳಿಗಾಯಿತು. ಕಂಪನಿಯ ವ್ಯವಹಾರ ಬಿಟ್ಟು ಸಿರಗುಪ್ಪಾದಲ್ಲಿ ಬಂದು ನೆಲೆಸಿದರು. ಈಗ ಅಂಜಲಿದೇವಿಯವರಿಗೆ ಕಂಪನಿಯ ನಾಟಕದ ಜೊತೆ ಸಂಸಾರ ನಾಟಕದ ಜವಾಬ್ದಾರಿಯೂ ಬಿತ್ತು. ಜ್ಯುಬಿಲಿ ಕವಿ ಎಚ್.ಎನ್. ಹೂಗಾರರ 'ಬೂದಿಮುಚ್ಚಿದ ಕೆಂಡ' ಗದಗದಲ್ಲಿ ೨೦೦ ಪ್ರದರ್ಶನಗಳನ್ನು ಕಂಡಿತು. ಮುಂದೆ ಕಂಪನಿಯು ಹುಬ್ಬಳ್ಳಿಯಲ್ಲಿ ಕ್ಯಾಂಪ್ ಮಾಡಿತು. ಅಲ್ಲಿಯೂ ಕೂಡ ಇದೇ ನಾಟಕ ನೂರಾರು ಪ್ರದರ್ಶನಗಳನ್ನು ಕಂಡಿತು. ನವರಸ ನಾಯಕಿಯಾದ ಅಂಜಲಿದೇವಿ ಈ ನಾಟಕದಲ್ಲಿ ಖಳನಾಯಕಿಯಾಗಿ ಅಭಿನಯಿಸುತ್ತಿದ್ದರು. ಮುಂದಿನ ಬದಲಾವಣೆ 'ಸತಿಯ ಸೌಭಾಗ್ಯ' ನಾಟಕವನ್ನು ಹಾಕಿದರು. ಇದರಲ್ಲಿ ನಾಯಕನಾಗಿ ಪತಿ ನೀಲಕಂಠಪ್ಪನವರು ಪಾತ್ರ ವಹಿಸಿದರೆ, ನಾಯಕಿಯಾಗಿ ಅಂಜಲಿದೇವಿಯವರು ಪಾತ್ರವಹಿಸಿದರು. ಈ ನಾಟಕವೂ ಕೂಡ ಅತ್ಯಂತ ಯಶಸ್ವಿಯಾಗಿ ನೂರಾರು ಪ್ರದರ್ಶನಗಳನ್ನು ಕಂಡಿತು.

'ಸಂಗೊಳ್ಳಿ ರಾಯಣ್ಣ' ನಾಟಕ ಪಡೇಸೂರ ಕಂಪನಿಯ ಜೀವದ ನಾಟಕವಾಗಿತ್ತು. ಇದರಲ್ಲಿ ರಾಯಣ್ಣನಾಗಿ ನೀಲಕಂಠಪ್ಪ, ಕಿತ್ತೂರ ರಾಣಿ ಚೆನ್ನಮ್ಮನಾಗಿ ಅಂಜಲಿದೇವಿಯವರು ನಟಿಸಿದರು. ಈ ನಾಟಕ ಸತತವಾಗಿ ೫೦೦ ಪ್ರಯೋಗಗಳನ್ನು ಕಂಡಿತು. ಅಭಿಮಾನಿಗಳ ಜನಸಾಮಾನ್ಯರ ಬಾಯಲ್ಲಿ ಅಂಜಲಿದೇವಿಯವರ ಹೆಸರು ನಾಟ್ಯವಾಡತೊಡಗಿತು. 'ಕಿತ್ತೂರ ಚೆನ್ನಮ್ಮ' ಸಿನಿಮಾದಲ್ಲಿ ಬಿ.ಸರೋಜಾದೇವಿಯವರಿಗೆ ಸಂದ ಯಶಸ್ಸು, ಗೌರವ, ಮಾನ-ಸನ್ಮಾನಗಳು ಸಂಗೊಳ್ಳಿ ರಾಯಣ್ಣ ನಾಟಕದಲ್ಲಿ ಅಂಜಲಿದೇವಿಯವರಿಗೆ ಸಂದವು. ಇದೇ ಕಂಪನಿಯವರು ಎಚ್. ಎನ್. ಹೂಗಾರರ ಜೊತೆಗೂಡಿ ಪಾಲುದಾರಿಕೆಯಲ್ಲಿ 'ಸಂಗೊಳ್ಳಿ ರಾಯಣ್ಣ' ಚಲನಚಿತ್ರವನ್ನು ತಯಾರಿಸಿದರು. ಆ ಚಿತ್ರದಲ್ಲಿ ಅಂಜಲಿದೇವಿಯವರೂ ನಟಿಸಿದ್ದರು. 'ಸಂಗೊಳ್ಳಿ ರಾಯಣ್ಣ' ನಾಟಕದಂತೆ 'ಮನ ಗೆದ್ದ ಮಡದಿ', 'ಅತ್ತೆ ಸೊಸೆ', 'ಬೆಳದಿಂಗಳು', 'ಬೂದಿಮುಚ್ಚಿದ ಕೆಂಡ', 'ಸತಿಯ ಸೌಭಾಗ್ಯ', 'ಹಡೆದವ್ವ' ಮುಂತಾದ ನಾಟಕಗಳೂ ಈ ಕಂಪನಿಯಲ್ಲಿ ಜಯಭೇರಿ ಬಾರಿಸಿದವು. ಮುಂದೆ ಊರಿಂದೂರಿಗೆ ಅಲೆಯುತ್ತ ಕಂಪನಿ ರಾಯಚೂರ ಜಿಲ್ಲೆಯ ಸಿಂಧನೂರ ಪಟ್ಟಣಕ್ಕೆ ಬಂದಿತು. ನಟರಾಜರತ್ನ ಮೃಡದೇವ ಗವಾಯಿಗಳವರ ಕಲೆಯನ್ನು ಬೆಳಗಿದ ಸ್ಥಳ ಸಿಂಧನೂರ. ಇಲ್ಲಿಯೇ ನೂತನ ನಾಟಕ ಸಂಸ್ಥೆಯಾದ 'ಅಮರೇಶ್ವರ ನಾಟ್ಯಸಂಘ ಸಿಂಧನೂರ' ಜನ್ಮ ತಳೆದು ಕರ್ನಾಟಕದಾದ್ಯಂತ ಜಯಭೇರಿ ಮೊಳಗಿಸಿತು. ರೇಣುಕಾ ನಾಟಕದ ಪರಶುರಾಮನ ಪಾತ್ರ

ಮೃಡದೇವ ... ಗವಾಯಿಗಳವರನ್ನು ಬಿಟ್ಟರೆ ಬೇರೆಯವರು ಮಾಡಲಾರರು, ಮಾಡಬಾರದು ಎಂಬಷ್ಟರ ಮಟ್ಟಿಗೆ ಆ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡುತ್ತಿದ್ದರು. ಭುಜಗಳಿಗೆ ಕಟ್ಟಿದ್ದ ರುದ್ರಾಕ್ಷಿ ಸರಗಳು ಪರಶುವನ್ನು ಮೇಲೆತ್ತಿದಾಕ್ಷಣ ಪಟಪಟನೆ ಹರಿದುಹೋಗುತ್ತಿದ್ದವಂತೆ. ಅದನ್ನು ಕಂಡ ಓರ್ವ ನಟ ದಾರದ ಬದಲಾಗಿ ತಂತಿಯಲ್ಲಿ ರುದ್ರಾಕ್ಷಿ ಸರವನ್ನು ಪೋಣಿಸಿ ಗವಾಯಿಗಳ ಭುಜಕ್ಕೆ ಕಟ್ಟಿದರಂತೆ, ಯಥಾವತ್ ತಮ್ಮ ಸಂಭಾಷಣೆ ಹೇಳಿ ಪರಶುವನ್ನು ಮೇಲೆತ್ತಲು ತಂತಿಯೂ ಕೂಡ ಚಿಂದಿಯಾಗಿ ರಕ್ತ ಚಿಮ್ಮಿತಂತೆ. ಹೀಗಿದ್ದೂ ಇದರ ಪರವೆ ಗವಾಯಿಗಳವರಿಗೆ ಇರಲಿಲ್ಲವಂತೆ. ಇಂಥ ಗವಾಯಿಗಳ ತವರೂರಿಗೆ ಪಡೇಸೂರ ಕಂಪನಿ ಬಂದಿತು. ಅದರಲ್ಲೂ ವಿಶೇಷವಾಗಿ ಅಂಜಲಿದೇವಿಯವರ ಮೇಲೆ ಮೃಡದೇವ ಗವಾಯಿಗಳವರ ಪ್ರಭಾವವೂ ಬಿದ್ದಿತ್ತು. ಅಂಜಲಿದೇವಿ ಮೃಡದೇವ ಗವಾಯಿಗಳವರ ಅಭಿಮಾನಿಯಾಗಿದ್ದರು ಎಂಬುದು ಕೂಡ ಗಮನಾರ್ಹ.

ಈ ಸಿಂಧನೂರ ಕೂಡ ಹಿಂದೆ ನಾಟಕರಂಗದಲ್ಲಿ ತನ್ನದೇ ಆದ ದಾಖಲೆಯನ್ನು ನಿರ್ಮಿಸಿದೆ. ಮೃಡದೇವ ಗವಾಯಿಗಳು ತಮ್ಮ ಅಮರೇಶ್ವರ ನಾಟ್ಯಸಂಘವನ್ನು ಸ್ಥಾಪಿಸಿದ್ದು ಒಂದಾದರೆ, ವಚನ ಸಂಗೀತದ ಪಿತಾಮಹರಾದ ಪಂಡಿತ ಸಿದ್ದರಾಮ ಜಂಬಲದಿನ್ನಿಯವರು ಗವಾಯಿಗಳವರ ನಾಟಕಕ್ಕೆ ಹಾಡುಗಳನ್ನು ವಚನಗಳನ್ನು ಕೂಡಿಸಿ, ಸಂಗೀತ ನೀಡಿದ್ದು ಸಿಂಧನೂರಿನಲ್ಲಿ. ಅದೆಷ್ಟೋ ಅಶಕ್ತ ಕಂಪನಿಗಳು ಸಿಂಧನೂರಿನಲ್ಲಿ ಮರುಹುಟ್ಟನ್ನು ಪಡೆದಿವೆ. ಶ್ರೀಕೃಷ್ಣಗಾರುಡಿಯ ಚಲನಚಿತ್ರ ನಟ, ಕಲಿಯುಗದ ಅಶ್ವತ್ಥಾಮ ಎಂಬ ಖ್ಯಾತಿ ಪಡೆದ ಜನಪ್ರಿಯ ಕಲಾವಿದ ಎಲಿವಾಳ ಸಿದ್ದಯ್ಯಸ್ವಾಮಿಗಳು ವೃತ್ತಿ ಸಂಸ್ಥೆಯಲ್ಲಿ ನಟಿಸುವುದರ ಜೊತೆಗೆ ಶ್ರೇಷ್ಠ ಹವ್ಯಾಸಿ ಕಲಾತಂಡಗಳನ್ನು ಕಟ್ಟಿ ಬೆಳೆಸಿದರು. ಅಂತಹ ಹವ್ಯಾಸಿ ತಂಡಕ್ಕೆ ನಿರ್ದೇಶಕರಾಗಿ ಮೊಟ್ಟ ಮೊದಲಿಗೆ ಬಂದಿದ್ದು ಸಿಂಧನೂರ ಹತ್ತಿರವಿರುವ ಗೊರೇಬಾಳಿಗೆ. ಇಂತಹ ಸಿಂಧನೂರಿಗೆ ಪಡೇಸೂರ ಕಂಪನಿ ಅಬ್ಬರದ ಪ್ರಚಾರದಲ್ಲಿಯೇ ಬಂದಿತು.

ಸಿಂಧನೂರಿನ ಮಹಾಜನತೆ ನಾಟಕದಲ್ಲಿ ಅತ್ಯಂತ ಅಭಿರುಚಿಯುಳ್ಳವರು. ಹೀಗಿದ್ದೂ ಪಡೇಸೂರ ಕಂಪನಿಯು ಯಾವ ಹೊಸ ನಾಟಕ ಹಾಕಿದರೂ ವಾರಕ್ಕಿಂತ ಹೆಚ್ಚಿಗೆ ನಡೆಯಲಿಲ್ಲ. ಅದೇನು ಕಂಪನಿಯ ದುರದೃಷ್ಟವೋ ಅಥವಾ ನಾಯಕ ನಾಯಕಿಯ ಪಾತ್ರವಹಿಸುತ್ತಿದ್ದ ಸತಿಪತಿಯರಾದ ನೀಲಕಂಠಪ್ಪ ಅಂಜಲಿದೇವಿಯವರ ದುರದೃಷ್ಟವೊ ಸಿಂಧನೂರಿನಲ್ಲಿ ಕಂಪನಿ ನಷ್ಟದಲ್ಲಿ ನಡೆಯಹತ್ತಿತು. ಹಿಂದೆ ಇದೇ ಕಂಪನಿಯಲ್ಲಿ ನೂರಾರು ಪ್ರಯೋಗಗಳನ್ನು ಕಂಡಂತಹ ಎಚ್.ಎನ್. ಹೂಗಾರರ ಹಡೆದವ್ವ ನಾಟಕವನ್ನು ಹಾಕಿದರು. ಭರ್ಜರಿಯಾಗಿ ಪ್ರಚಾರ ಮಾಡಿದರು. ಏನೊಂದೂ ಪ್ರಯೋಜನವಾಗಲಿಲ್ಲ. ಹಿಂದಿನ ಕ್ಯಾಂಪಿನಲ್ಲಿ ಕಂಪನಿ ಲಾಭದಲ್ಲಿ ನಡೆಯುತ್ತಿದ್ದಾಗ ಹಣ ಎಣಿಸಲೂ ಮಾಲಕರಿಗೆ ಪುರುಸೊತ್ತಿಲ್ಲದ ಸಂದರ್ಭದಲ್ಲಿ, ಅದು ಅಂಜಲಿದೇವಿ ನೀಲಕಂಠಪ್ಪನವರ ಹೆಸರಿನ ವರ್ಚಸ್ಸಿನಲ್ಲಿ ಕಂಪನಿಯು ನಡೆಯುತ್ತಿದ್ದಂಥ ಸಮಯದಲ್ಲಿ ಗಂಡ ಹೆಂಡತಿ ಇಬ್ಬರಿಗೂ ಪ್ರತಿ ತಿಂಗಳಿಗೆ ಕೇವಲ ೩೫೦ ರೂಪಾಯಿ ಸಂಬಳವಿತ್ತು. ಸಂಸಾರದ ಖರ್ಚುವೆಚ್ಚ ಹೆಚ್ಚಾದಾಗ ಅನಿವಾರ್ಯವಾಗಿ ಪಗಾರ ಹೆಚ್ಚಿಸಬೇಕೆಂದು ಮಾಲಕರಲ್ಲಿ ಮೊರೆಯಿಟ್ಟಿದ್ದರು. ಮಾಲಕರು ಸಮಾಧಾನ ಮಾಡುತ್ತ ಮುಂದಿನ ಕ್ಯಾಂಪ್

ಸಿಂಧನೂರಿನಲ್ಲಿ ಖಂಡಿತವಾಗಿ ಹೆಚ್ಚಿಸುತ್ತೇನೆಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಈ ವಿಷಯವಾಗಿ ನೀಲಕಂಠಪ್ಪನವರು ಕೊಂಚ ಗಟ್ಟಿಸ್ವರದಲ್ಲಿ ಮಾತನಾಡಿದಾಗ ಮಾಲಕರು ವಿಧಿಯಿಲ್ಲದೆ ಒಪ್ಪಿಕೊಂಡಿದ್ದರು.

ಆದರೆ ಸಿಂಧನೂರಿನಲ್ಲಿಯ ಪರಿಸ್ಥಿತಿಯೇ ಬೇರೆಯಾಗಿತ್ತು. ಯಾವ ನಾಟಕವಾಡಿದರೂ ಥೇಟರ್ ತುಂಬಲಿಲ್ಲ. ಯಾವುದೇ ಊರಲ್ಲಿ ಕಲೆಕ್ಷನ್ ಡಲ್ ಆದಾಗ ಹಡೆದವ್ವ ನಾಟಕವನ್ನಾಡುತ್ತಿದ್ದರು. ಅದರಿಂದ ನಷ್ಟ ತುಂಬಿಸಿಕೊಳ್ಳುತ್ತಿದ್ದರು. ಗಲ್ಲಾ ಪೆಟ್ಟಿಗೆ ತುಂಬಲಿಕ್ಕೆ ಅದೊಂದು ಆಸರೆಯಾದ ನಾಟಕವಾಗಿತ್ತು. ಅಂಥ ಹಡೆದವ್ವ ನಾಟಕ ಹಾಕಿದರೂ ಥೇಟರ್ ತುಂಬಲಿಲ್ಲ. ಖಾಲಿ ಖುರ್ಚಿಯಲ್ಲಿ ನಾಟಕ ಆಡಿದರು, ಆಡುತ್ತಿದ್ದರು. ಇಲ್ಲಿ ನೀಲಕಂಠಪ್ಪ ಅಂಜಲಿದೇವಿಯವರ ಪಗಾರ ಏರಿಸುವುದಿರಲಿ, ನಿಗದಿತ ವೇತನ ೩೫೦ ರೂಪಾಯಿ ಪಗಾರಕ್ಕೂ ಸಂಚಕಾರ ಬಂದಿತು. ಕುಂಟುತ್ತ ಕುಂಟುತ್ತ ಸಾಗಿದ ಕಂಪನಿ ಕೊನೆಗೊಂದು ದಿನ ನಿಂತೇಬಿಟ್ಟಿತು. ದುಡಿದ ಕಲಾವಿದರ ಸಂಭಾವನೆಯನ್ನು ಕೊಡುವುದೊತ್ತಟ್ಟಿಗಿರಲಿ, ಅವರವರ ಊರುಗಳಿಗೆ ತಲುಪುವಷ್ಟು ಬಸ್ ಚಾರ್ಜನ್ನು ನೀಡಲೂ ಸಾಧ್ಯವಾಗಲಿಲ್ಲ ಮಾಲಕರಿಗೆ, ಚೂರುಚಾರು ಮುಟ್ಟು, ಮುರಿಯಿದ್ದವರು ಅವುಗಳನ್ನು ಮಾರಿ ತಮ್ಮೂರು ಸೇರಿಕೊಂಡರು. ಆದರೆ ನೀಲಕಂಠಪ್ಪ ದಂಪತಿಗಳು ಕಲಾಶ್ರೀಮಂತರಾಗಿದ್ದರೇ ವಿನಃ ಬಂಗಾರ ಬೆಳ್ಳಿ ಇಟ್ಟುಕೊಳ್ಳುವಷ್ಟು ಶ್ರೀಮಂತರಾಗಿದ್ದಿಲ್ಲ. ರಾತ್ರಿ ೩ ಗಂಟೆಯ ಸುಮಾರಿಗೆ ನಾಟಕ ಬಿಟ್ಟಾಗ ಬೋರ್ಡಿಂಗಿನಲ್ಲಿ ಉಂಡಂತಹ ಅನ್ನವೇ ಕೊನೆಯಾಗಿತ್ತು. ಕೈಯಲ್ಲಿ ಬಿಡಿಗಾಸಿಲ್ಲ. ಊರು ಸೇರುವುದು ಹೇಗೆಂದು ಚಿಂತಿಸುತ್ತ ತಲೆಯ ಮೇಲೆ ಕೈಹೊತ್ತು ಕುಳಿತರು. ಸಿಂಧನೂರಿನಲ್ಲಿ ಕಲಾಪ್ರಿಯರು, ಸಂಗೀತಪ್ರಿಯರಿಗೇನೂ ಕೊರತೆಯಿರಲಿಲ್ಲ. ಕಂಪನಿ ನಿಂತು ಕಲಾವಿದರು ಹೊರಬಿದ್ದಾಗ ನೀಲಕಂಠಪ್ಪ ಅಂಜಲಿದೇವಿಯವರ ಪಾತ್ರ ಮೆಚ್ಚಿಕೊಂಡ ಕೆಲ ಅಭಿಮಾನಿಗಳು ಒಂದು ರಾತ್ರಿ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದರು. ಅಂಜಲಿದೇವಿಯವರ ಕೋಗಿಲೆಯ ಕಂಠದಿಂದ ಹೊರಹೊಮ್ಮಿದ ಗಾನದ ರಸದೌತಣವನ್ನುಂಡು ಧನ್ಯತೆ ಹೊಂದಿದರು. ಹಾಗೂ ಅದರಿಂದ ಒಂದಿಷ್ಟು ಹಣವನ್ನು ಕಲಾದಂಪತಿಗಳಿಗೆ ಕೂಡಿಸಿಕೊಟ್ಟರು. ಅಭಿಮಾನಿಗಳ ಅಭಿಮಾನವನ್ನು ಕೊಂಡಾಡುತ್ತ ಸತಿಪತಿಗಳೀರ್ವರೂ ಗದಗ ಸೇರಿಕೊಂಡರು.

ಕೆಲಕಾಲ ಗದಗನಲ್ಲಿರುವಾಗ ಉತ್ತರ ಕರ್ನಾಟಕದ ಪ್ರಖ್ಯಾತ ನಾಟಕ ಸಂಸ್ಥೆಯಾದ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ, ಸುಳ್ಳದ ದೇಸಾಯಿಯವರಿಂದ ಕರೆ ಬಂತು. ಸತಿಪತಿಗಳೀರ್ವರೂ ಮತ್ತೆ ಕಂಪನಿ ಸೇರಿಕೊಂಡರು. ಈ ಹಿಂದೆ ಪಡೇಸೂರ ಕಂಪನಿಯಲ್ಲಿ ನೀಡುತ್ತಿದ್ದ ೩೫೦ ರೂಪಾಯಿ ಮಾಸಿಕ ವೇತನಕ್ಕೆ ಸೇರಿದರು. ಇಲ್ಲಿಯೂ 'ರಕ್ತರಾತ್ರಿ' ನಾಟಕ. ಅದರಲ್ಲಿ ದ್ರೌಪದಿಯ ಪಾತ್ರ ಗೋಕಾಕ ಕಂಪನಿಯ ತರಬೇತಿಯಿಂದ ಪರಿಪೂರ್ಣತೆಯನ್ನು ಹೊಂದಿದ ಅಂಜಲಿದೇವಿ ಆ ಪಾತ್ರದಲ್ಲಿ 'ಸೈ' ಎನ್ನುವಂತೆ ಅಭಿನಯಿಸಿದರು. ಬಳ್ಳಾರಿ, ರಾಯಚೂರು ಭಾಗದಲ್ಲಿ ಈ ಪಾತ್ರಕ್ಕೆ ಮನ್ಸೂರ ಸುಭದ್ರಮ್ಮನವರು ಹವ್ಯಾಸಿ ತಂಡಗಳಲ್ಲಿ ಹೆಸರು ಮಾಡಿದ್ದರೆ, ಉತ್ತರ ಭಾಗಕ್ಕೆ ವೃತ್ತಿ ಸಂಸ್ಥೆಗಳಿಗೆ ಅಂಜಲಿದೇವಿಯವರು ಕಲಿಯುಗದ ದ್ರೌಪದಿಯೆಂದೇ ಖ್ಯಾತರಾಗಿದ್ದರು.

ಮೃದುಮನದ ಕೋಮಲ ಶರೀರದ ಕೋಗಿಲೆ ಶಾರೀರದ ಅಂಜಲಿದೇವಿ ಉಪಪಾಂಡವರನ್ನು ಸಂಹರಿಸಿದ ಅಶ್ವತ್ಥಾಮನ ಮೇಲೆ ಆಕ್ರೋಶಕಾರಿ ಕಾಳಿಯಾಗಿ ಮಾರ್ಪಟ್ಟು ಕಿಡಿಕಾರುವ ಸಂಭಾಷಣೆಗಳನ್ನು ಹೇಳುವಾಗ, ಆ ಕಠೋರ ಕಂಠವನ್ನು ಕೇಳಿದ ನೋಡುಗರ ಎದೆ ಝಲ್ಲೆನ್ನುತ್ತಿತ್ತು. ಸ್ಪಷ್ಟ ಉಚ್ಚಾರ, ಔಚಿತ್ಯಪೂರ್ಣವಾದಂತಹ ಅಭಿನಯ, ಜನರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿತ್ತು. ಈ ಕಂಪನಿಯಲ್ಲಿ ಸುಮಾರು ಮೂರು ವರ್ಷಗಳ ಕಾಲ ಅಂಜಲಿದೇವಿ ಪತಿಯೊಡನೆ ಕಲಾಸೇವೆಗೈದರು. ರಕ್ತರಾತ್ರಿಯಂತೆ ಹೇಮರೆಡ್ಡಿ ಮಲ್ಲಮ್ಮ, ಕಿತ್ತೂರ ಚೆನ್ನಮ್ಮ ನಾಟಕಗಳಲ್ಲಿಯೂ ಅಭಿನಯಿಸಿದರು.

ಕೊನೆಗೆ ಕಂಪನಿ ರಾಯಚೂರಿಗೆ ಬಂದಿತು. 'ರಕ್ತರಾತ್ರಿ' ನಾಟಕ ಅತ್ಯಂತ ಯಶಸ್ವಿಯಾಗಿ ಪ್ರದರ್ಶಿತವಾಯಿತು. ಯಾವುದೋ ಕಾರಣಕ್ಕೆ ನೀಲಕಂಠಪ್ಪನವರು ಮಾಲಕರಾದ ದೇಸಾಯಿಯವರೊಡನೆ ಮುನಿಸು ಮಾಡಿಕೊಂಡರು. ಅದರ ಫಲವಾಗಿ ಮಾರನೆಯ ದಿನವೇ ಶ್ರೀಶೈಲ ನಾಟ್ಯ ಸಂಘ ಸುಳ್ಳದ ಕಂಪನಿಯ ಸಂಬಂಧವನ್ನು ಕಡಿದುಕೊಂಡರು. ವಿಧಿಯಿಲ್ಲದೆ ಅಂಜಲಿದೇವಿ ಕಂಪನಿಗೆ ವಿದಾಯ ಹೇಳಿ ಪತಿಯೊಡನೆ ಮತ್ತೆ ಗದಗ ಬಸ್ ಹತ್ತಿದರು. ಇಬ್ಬರೇ ಇದ್ದ ಕಲಾ ದಂಪತಿಗಳ ಬಾಳಿನಲ್ಲಿ ಮೂರನೆಯ ವ್ಯಕ್ತಿಯ ಪ್ರವೇಶವಾಗಿತ್ತು. ಆಕೆ ಮಗಳು ವಂದನಾ.

ಸುಳ್ಳದ ಕಂಪನಿಯಿಂದ ಹೊರಬಂದ ಅಂಜಲಿದೇವಿ ದಂಪತಿಗಳು ಶೇಖರಯ್ಯನವರ ಭಾರತೀ ನಾಟ್ಯಸಂಘ, ಸೂಡಿ ಕಂಪನಿಯನ್ನು ಸೇರಿದರು. ಈ ಕಂಪನಿಯಲ್ಲಿ ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ಬಸವೇಶ್ವರರಾಗಿ ನೀಲಕಂಠಪ್ಪನವರು ನೀಲಾಂಬಿಕೆಯಾಗಿ ಅಂಜಲಿದೇವಿಯವರು ಪಾತ್ರ ವಹಿಸಿದರು. ಅಭಿನಯ, ಹಾಡು, ದೃಶ್ಯಜೋಡಣೆ, ಜಗಮಗಿಸುವ ವಿದ್ಯುತ್ ದೀಪಗಳಲ್ಲಿ ನಾಟಕ ಕಳೆ ಕಟ್ಟಿತ್ತು. ಚಹ, ತಿಂಡಿಗಾಗಿ ಹೊರಗೆ ಹೋಗದೆ ಕುಳಿತಲ್ಲೇ ಕುಳಿತು ನಾಟಕ ನೋಡುತ್ತಿದ್ದರು ಜನತೆ. ಅಂಥ ಮೋಡಿಯಿತ್ತು ನಾಟಕದಲ್ಲಿ, ಇವರ ಅಭಿನಯದಲ್ಲಿತ್ತು. ನಾಟ್ಯಕವಿರಾಜರ ರಹಸ್ಯಭರಿತ ಕುತೂಹಲಕಾರಿ ನಾಟಕ 'ಕೊಲೆಗಾರ ಯಾರು?' ಅನೇಕ ಪ್ರದರ್ಶನಗಳನ್ನು ಕಂಡಿತು. ಅದು ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ ಒಂದು ವಿಭಿನ್ನ ನಾಟಕ, ನಾಟ್ಯ ಕವಿ ಪ್ರಕಾಶ ಪಿ.ಬಿ. ಧುತ್ತರಗಿಯವರ 'ತಾಯಿಯ ಕರುಳು' ವಾತ್ಸಲ್ಯದ ಮಹಾಪೂರವನ್ನೇ ಹರಿಸುವಂತಿತ್ತು. ಅಂಜಲಿದೇವಿಯವರ ತಾಯಿಯ ಪಾತ್ರ ನೋಡುಗರಲ್ಲಿ ಕಣ್ಣೀರ ಕೋಡಿಯನ್ನೇ ಹರಿಸಿತು.

ಪುರುಷ ಪಾತ್ರಗಳಿಗೆ ಚಾಲೆಂಜ್ ಎನ್ನುವಂತೆ ನಟಿಸಿದ 'ರೇಣುಕಾ ಎಲ್ಲಮ್ಮ' ನಾಟಕದಲ್ಲಿ ರೇಣುಕೆಯಾಗಿ ಅಂಜಲಿದೇವಿ ಅಭಿನಯಿಸಿದರು. ಈ ನಾಟಕ ವರುಷಾನುಗಟ್ಟಲೇ ನಡೆಯಿತು. ಈ ಕಂಪನಿಯಲ್ಲಿ ಎರಡು ವರುಷವಿದ್ದು, ಓಂಕಾರೇಶ್ವರ ನಾಟ್ಯಸಂಘದ ಚಿತ್ರದುರ್ಗ ಓಬಳೇಶ್ವರರ ಕಂಪನಿಗೆ ನಡೆದರು. 'ಖಾದಿ ಸೀರೆ' ಆ ಕಂಪನಿಯ ಜನಪ್ರಿಯ ನಾಟಕವಾಗಿತ್ತು. ಅದರಲ್ಲಿ ಸತಿ ಪತಿಯರಿಬ್ಬರೂ ಪಾತ್ರ ವಹಿಸಿದರು. ಈ ಕಂಪನಿಯಲ್ಲೂ ಮೂರ್‍ನಾಲ್ಕು ತಿಂಗಳು ಇದ್ದು, ಶಿವಲಿಂಗೇಶ್ವರ ನಾಟ ಸಂಘ, ಸಂಕನೂರ ಕಂಪನಿಗೆ ಹೋದರು. ಈ ಕಂಪನಿಯಲ್ಲಿ

ರೇಣುಕಾ ಮಹಾತ್ಮೆ, ಸತ್ಯ ಹರಿಶ್ಚಂದ್ರ, ಮನಮಿಡಿಯುವ ಜೋಶಿಯವರ ಸಾಮಾಜಿಕ ನಾಟಕ 'ಬಂಜೆತೊಟ್ಟಿಲು', ಸಾಳುಂಕೆಯವರ 'ದಾರಿದೀಪ' ನಾಟಕದಲ್ಲಿ ನಟಿಸಿದರು. ಇಲ್ಲಿ ಕೆಲವು ತಿಂಗಳುಗಳಿದ್ದು ಗದಗಿಗೆ ಮರಳಿದರು.

ನಾಲ್ಕಾರು ತಿಂಗಳು ಗದಗದಲ್ಲಿದ್ದು ದೊಡ್ಡವಾಡ ಕಂಪನಿಗೆ ಹೋದರು. ಅಲ್ಲಿ ಬಸ್ ಹಮಾಲ, ಕೀರಣಗಿಯವರ ಅಣ್ಣತಂಗಿ, ಧುತ್ತರಗಿಯವರ ಮಲಮಗಳು, ವಾತ್ಸಲ್ಯ ನಾಟಕಗಳಲ್ಲಿ ಅಂಜಲಿದೇವಿಯವರು ನಾಯಕಿಯಾಗಿ, ಖಳನಾಯಕಿಯಾಗಿ ನಟಿಸಿದರು. ಇಲ್ಲಿಯೂ ಖಾಯಂ ಆಗಿ ಉಳಿಯಲಿಲ್ಲ. ಈ ಮಧ್ಯೆ ಮತ್ತೊಮ್ಮೆ ಓಬಳೇಶ್ವರರ ಕರೆಯ ಮೇರೆಗೆ 'ಖಾದಿ ಸೀರೆ' ನಾಟಕಕ್ಕೆ ಹೋದರು. ಹೀಗೆ ಕಂಪನಿಯಿಂದ ಕಂಪನಿಗೆ ಅಲೆಯುತ್ತ ತಮ್ಮ ಅರ್ಧ ಯೌವನವನ್ನು ವೃತ್ತಿ ಕಂಪನಿಯಲ್ಲಿ ಸತಿಪತಿಯರಿಬ್ಬರೂ ಕಳೆದರು. ಅಂಜಲಿದೇವಿ ಹೇಳುತ್ತಾರೆ - "ಎಂತಹ ಪಾತ್ರ ಮಾಡಿದರೂ ಇನ್ನೂ ಇನ್ನೂ ಅಭಿನಯಿಸಬೇಕು. ಅದನ್ನು ಹೀಗೆ ಮಾಡಬಹುದಿತ್ತು, ಹಾಗೆ ಮಾಡಬಹುದಿತ್ತು- ಎಂದು ಚರ್ಚೆ ಮಾಡುತ್ತಿದ್ದೆವು ನಾವು." ಯಾಕೆಂದರೆ ಅಂಜಲಿದೇವಿಯವರ ಪ್ರತಿಯೊಂದು ಪಾತ್ರವನ್ನೂ ಮುಲಾಜಿಲ್ಲದೆ ವಿಮರ್ಶಿಸುತ್ತಿದ್ದರು. ಆ ವಿಮರ್ಶಕ ಬೇರೆ ಯಾರೂ ಅಲ್ಲ, ಅವರ ಪತಿದೇವರಾದ ನೀಲಕಂಠಪ್ಪ ಮಾಸ್ತರ್, ತಮ್ಮ ಪಾತ್ರ ಮುಗಿದಾಗ ಸೈಡ್ ವಿಂಗ್ಸ್‌ನಲ್ಲಿ ನಿಂತು ತಮ್ಮ ಪತ್ನಿಯವರ ಪಾತ್ರವನ್ನು ನೋಡುತ್ತಿದ್ದರು. ಪಾತ್ರ ಚೆನ್ನಾಗಿ ಮೂಡಿಬಂದಾಗ ಹಿಂದೆ ಕುಳಿತ ಅಭಿಮಾನಿಯಂತೆ (ಶಿಳ್ಳಿ) ಶೀಳು ಹಾಕಿಬಿಡುತ್ತಿದ್ದರು. ತಮ್ಮ ಪ್ರತಿಯೊಂದು ಪಾತ್ರವೂ ಪರಿಪೂರ್ಣತೆಯನ್ನೇನಾದರೂ ಪಡೆದಿದ್ದರೆ ಅದು ಪತಿಯರ ತರಬೇತಿಯಿಂದ ಎಂದು ಹೇಳುತ್ತಾರೆ. ಪತಿಯ ಕಲೆಯನ್ನು ಕ್ಷಣಕ್ಷಣವೂ ಕೊಂಡಾಡುತ್ತಾರೆ, ಅಂಜಲಿದೇವಿ. ಹೀಗೆ ಕಂಪನಿಯಿಂದ ಕಂಪನಿಗೆ ಇಡೀ ಕರ್ನಾಟಕವನ್ನು ಸುತ್ತಿದ ಅಂಜಲಿದೇವಿಯವರಿಗೆ ಏಕೋ ಒಂದೆಡೆಯಲ್ಲೇ ನೆಲೆಸಬೇಕೆನಿಸಿತು. ವೃತ್ತಿ ಕಂಪನಿಯ ಸಹವಾಸವೇ ಸಾಕೆನಿಸಿತು. ದಿನಾಲೂ ರಾತ್ರಿ ಎರಡು ಗಂಟೆಯ ತನಕ ಅಭಿನಯ, ಹಗಲು ನಿದ್ರೆ, ಗಂಡಹೆಂಡತಿ ಜೀವ ತೇಯ್ದು ಅಭಿನಯಿಸಿದ್ದು ಬರೀ ಹೊಟ್ಟೆ ಬಟ್ಟೆಗಾಯಿತು. ಹೀಗೆ ಊರೂರು ಅಲೆಯುವಲ್ಲಿ ಇದ್ದೊಬ್ಬ ಮಗಳ ಶಿಕ್ಷಣವೂ ಪೂರ್ತಿಯಾಗಲಿಲ್ಲ. ಬೆಳೆದು ದೊಡ್ಡವಳಾದ ಮಗಳು ವಂದನಾ ತಾಯಿಯ ಮಾರ್ಗವನ್ನೇ ಅನುಸರಿಸಿದಳು.

ಕೆಲವು ದಿನಗಳ ಕಾಲ ಗದುಗಿನಲ್ಲಿ ಪತಿಯೊಡನೆ, ಮಗಳೊಡನೆ ಹಾಯಾಗಿರಲು ಇಚ್ಛಿಸಿದರು, ಆದರೆ ಅಂಜಲಿದೇವಿಯವರ ಈ ಆಸೆ ಫಲಿಸಲಿಲ್ಲ. ಇಟಗಿ ಗ್ರಾಮದವರು ಒಂದು ತಂಡ ಕಟ್ಟಿದ್ದರು, ಇಟಗಿ ಭೀಮಾಂಬಿಕಾ ನಾಟ್ಯಸಂಘವೆಂದು. ಅದರಲ್ಲಿ ಭೀಮಾಂಬಿಕಾ ಪಾತ್ರಕ್ಕೆ ಜೀವತುಂಬಬಲ್ಲಂತಹ ತಕ್ಕ ನಟಿಯೆಂದರೆ ಅಂಜಲಿದೇವಿಯೆಂದು ಬಗೆದು ಆ ಪಾತ್ರಕ್ಕೆ ಒಪ್ಪಿಸಿದರು.

ಶಿವಶರಣರ ಕಾಯಕ ದಾಸೋಹವನ್ನು ಉಸಿರಾಗಿಸಿಕೊಂಡು ಧರ್ಮನಪ್ಪಣೆಯಂತೆ ಜನರಲ್ಲಿ ದಯೆ, ದಾನ, ಧರ್ಮದ ಬೀಜ ಬಿತ್ತಿದ ಹಾಲುಮತದ ಮಹಾತಾಯಿ ಭೀಮಾಂಬಿಕೆ ಮೂಢನಂಬಿಕೆ, ಅಂಧಶ್ರದ್ಧೆ ಹೊಡೆದೋಡಿಸಿ ಶಿವನಿರುವನ್ನು ಲೋಕಕ್ಕೆ ಪ್ರಚುರ ಪಡಿಸಿದರು. ಭೀಮಾಂಬಿಕೆ ಎಂತಹ ಪಾತ್ರವದು? ವಯಸ್ಸು ಅನುಭವದ ಪಕ್ವತೆಯಂತೆ ಅಂಜಲಿದೇವಿಯವರು ಭೀಮಾಂಬಿಕೆಯೇ ಆಗಿ ನಟಿಸಿದರು. ಈ ನಾಟಕ ಗಲ್ಲಾ ಪೆಟ್ಟಿಗೆಯಲ್ಲಿ ಒಂದು

ಅಭೂತಪೂರ್ವವಾದ ದಾಖಲೆಯನ್ನೇ ನಿರ್ಮಿಸಿತು. ಕೆಲವೇ ಪ್ರಯೋಗಗಳಿಗಾಗಿ ಅಂಜಲಿದೇವಿಯವರು ವರ್ಷಗಟ್ಟಲೇ ಆ ಪಾತ್ರವನ್ನು ವಹಿಸಿದರು. ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಭಕ್ತಿಪ್ರಧಾನ ನಾಟಕಗಳಲ್ಲಿ ನಟಿಸಿ ಆ ಪಾತ್ರವೇ ತಾವಾಗಿ ಪರಕಾಯ ಪ್ರವೇಶ ಮಾಡಿದ್ದರೂ ಅವುಗಳೆಲ್ಲಾ ಕೆಲವೇ ಗಂಟೆಗಳ ಪಾತ್ರಗಳಾಗಿ ಹೋದವೇ ವಿನಃ ತಮ್ಮ ಮೇಲೆ ಅಷ್ಟೊಂದು ಪ್ರಭಾವವನ್ನು ಬೀರಲಿಲ್ಲವೆನ್ನುತ್ತಾರೆ ಅಂಜಲಿದೇವಿ.

ಭೀಮಾಂಬಿಕೆಯ ಪಾತ್ರ ಮಾಡುವಾಗ ದಿನಕ್ಕೆರಡು ಬಾರಿ ಸ್ನಾನ, ಜಪತಪ ಉಪವಾಸದಿಂದ ಆ ಪಾತ್ರವನ್ನು ಮಾಡತೊಡಗಿದರು. ಕುಂತರೂ ಭೀಮಾಂಬಿಕೆ, ನಿಂತರೂ ಭೀಮಾಂಬಿಕೆ. ಈ ನಾಟಕ ಕಂಪನಿಯಿಂದ ನಿರ್ಗಮಿಸಿದರೂ ಕೂಡ ಸ್ನಾನ ಜಪತಪಗಳು ನಿಲ್ಲಲಿಲ್ಲ. ತಾವಿರುವಲ್ಲೇ ಹೇಗಾದರೂ ಮಾಡಿ ಆ ತಾಯಿಯ ಗುಡಿಯನ್ನು ಕಟ್ಟಬೇಕೆಂದು ಸಂಕಲ್ಪಿಸಿದರು. ಆದರೆ ಇದು ಸದ್ಯಕ್ಕಂತೂ ಸಾಧ್ಯವಾಗಲಾರದೆಂದು ಮನಗಂಡರು.

ಸಾರ್ಥಕ ಕಲೆಯ ಬದುಕೆಂದು ವೃತ್ತಿ ಕಂಪನಿಯಲ್ಲಿ ಅಭಿನಯಿಸಿ ಸಾಕಷ್ಟು ಹೆಸರು ಮಾಡಿಯಾಯ್ತು. ಅದರ ಹೆಸರಿನಿಂದ ಹಸಿವೆ ನೀಗದೆಂಬ ಸತ್ಯ ಅರಿವಾದಾಗ ವೃತ್ತಿ ಸಂಸ್ಥೆಗಳಿಗೆ ಹೋಗಬಾರದೆಂದು ನಿರ್ಧರಿಸಿದರು. ಹವ್ಯಾಸಿ ಕಲಾ ತಂಡದವರು ಆಗ ಹೆಚ್ಚಾಗಿ ಅಭಿನಯಿಸುತ್ತಿದ್ದುದು ಪೌರಾಣಿಕ ನಾಟಕಗಳನ್ನು, ಹೀಗಾಗಿ ಅನುಭವಿ ಸಮರ್ಥ ನಟಿಯ ಆಗಮನ ಹವ್ಯಾಸಿ ಕಲಾ ತಂಡಗಳಿಗೆ ವರದಾನವಾಯಿತು. ರಕ್ತರಾತ್ರಿ ನಾಟಕಕ್ಕೆ ಅಂಜಲಿದೇವಿಯವರು ಬರುತ್ತಾರೆಂದರೆ ಟಿಕೆಟ್ ಕೊಡುವವರ ಕೈ ನೋಯಬೇಕು. ದುಡ್ಡು ಎಣಿಸಲು ಕೈ ನಿಲ್ಲಬೇಕು. ಹಳ್ಳಿಗಾಡಿನ ಜನರಲ್ಲಿ ಅಂಜಲಿದೇವಿಯವರ ಅಭಿನಯ ಹಾಡುಗಾರಿಕೆ ಅಚ್ಚೊತ್ತಿತು. ಹೆಸರು, ಹಣ ಎರಡೂ ಇರುವ ಹವ್ಯಾಸಿ ತಂಡಗಳು ಅಂಜಲಿದೇವಿಯವರನ್ನು ಆಕರ್ಷಿಸಿದವು, ರಕ್ತರಾತ್ರಿಯಲ್ಲಿ ದ್ರೌಪದಿಯಾಗಿ ಸಾವಿರಕ್ಕೂ ಮಿಕ್ಕಿ ನಾಟಕಗಳಲ್ಲಿ ಅಭಿನಯಿಸಿದರು

ನಂತರದ ನಾಟಕ ಚಿತ್ರಾಂಗದಾ, ಇದರಲ್ಲಿ ಚಿತ್ರಾಂಗದೆಯ ಪಾತ್ರ ಧೀರೋದಾತ್ತ ನಾಯಕಿಯ ಪಾತ್ರ. ಅಂಜಲಿದೇವಿ ಸ್ಟೇಜಿಗೆ ಬಂದರೆ ಸ್ಟೇಜೇ ನಡುಗುತ್ತಿತ್ತು. ಅಕ್ಷಯಾಂಬರ, ವರವೀರ ಪಾರ್ಥ, ವೀರ ಅಭಿಮನ್ಯು, ಬಾಣಸಿಗ ಭೀಮ, ಭಕ್ತ ಸುಧನ್ವ, ವೀರ ಧನಂಜಯ ಎಲ್ಲಾ ಪೌರಾಣಿಕ ನಾಟಕಕ್ಕೆ ಅಂಜಲಿದೇವಿಯವರು ಬೇಕೇಬೇಕು ಎಂಬಂತಹ ವಾತಾವರಣ ನಿರ್ಮಾಣವಾಗಿತ್ತು. ಪೌರಾಣಿಕ ನಾಟಕಗಳಲ್ಲದೆ ಐತಿಹಾಸಿಕ, ಭಕ್ತಿಪ್ರಧಾನ, ಸಾಮಾಜಿಕ ನಾಟಕಗಳಲ್ಲೂ ನಾಯಕಿಯಾಗಿ ಕಥಾನಾಯಕಿಯಾಗಿ, ಖಳನಾಯಕಿಯಾಗಿ ಪಾತ್ರವಹಿಸಿದರು.

ಟಿಪ್ಪುಸುಲ್ತಾನ, ಸತ್ಯ ಹರಿಶ್ಚಂದ್ರ, ಅಪರಾಧಿನಿ, ಜೀವನಯಾತ್ರೆ, ರತ್ನಮಾಂಗಲ್ಯ, ಹೆಣ್ಣಿನ ಜೀವನ, ಮಾತಂಗ ಕನ್ಯಾ, ಅಣ್ಣತಮ್ಮ, ವಾತ್ಸಲ್ಯ, ಅಣ್ಣತಂಗಿ, ಸೌಭಾಗ್ಯಲಕ್ಷ್ಮಿ, ಮಲಮಗಳು, ನಲ್ಲೂರ ನಂಬೆಕ್ಕ, ಭಕ್ತ ಮಾರ್ಕಂಡೇಯ, ದೈವಚಿತ್ತ, ಅಗ್ನಿಕಮಲ, ಕುಲಪುತ್ರ, ಆದರ್ಶಪ್ರೇಮ, ಸ್ತ್ರೀರತ್ನ, ಹೂವು ಮುಳ್ಳು, ಮುಳ್ಳು ಮಲ್ಲಿಗೆ, ಛಲವಂತ ಹೀಗೆ ಹೊಸ ಹೊಸ ನಾಟಕಗಳಲ್ಲಿ ಎಲ್ಲಾ ಬಗೆಯ ಪಾತ್ರಗಳಿಗೆ ಅಂಜಲಿದೇವಿಯವರು ಜೀವ ತುಂಬಿದರು.

ಆರ್ಥಿಕ ಸ್ಥಿತಿ, ವೃತ್ತಿ ಸಂಸ್ಥೆಗಳಲ್ಲಿದ್ದಾಗಿನಕ್ಕಿಂತಲೂ ತಕ್ಕಮಟ್ಟಿಗೆ ಸುಧಾರಿಸಿತು. ಮೇಲೆ ಹೆಸರಿಸಿರುವ ನಾಟಕಗಳಷ್ಟೆ ಅಲ್ಲ ಎಷ್ಟೋ ಹೆಸರುಗಳು ಸ್ಮೃತಿಪಟಲದಿಂದ ಹೊರಗಾಗಿವೆ. ಅವರು ಮಾಡಿದ ಪಾತ್ರವಿಲ್ಲ, ತಿರುಗಾಡಲಾರದ ಊರಿಲ್ಲವೆಂಬಂತಾಯಿತು. ವೃತ್ತಿ ಸಂಸ್ಥೆಯ ನಾಟಕಗಳಿಗಿಂತಲೂ ಹವ್ಯಾಸಿ ನಾಟಕಗಳಿಗೆ ಅಂಜಲಿದೇವಿಯವರು ಕಾಯಂ ನಟಿಯಾಗಿದ್ದರು. ಕೋಗಿಲೆಕಂಠದ ಅಭಿನಯ ಶಾರದೆಯಾದ ಅಂಜಲಿದೇವಿಯವರಿಗೆ ಯಾವ ಪಾತ್ರ ಸಿಕ್ಕರೂ ಸಮರ್ಥವಾಗಿ ಅಭಿನಯಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಅಂಜಲಿದೇವಿಯವರು ತಿರುಗಾಡದ ಹಳ್ಳಿಯಿರಲಿಲ್ಲ.

ಮೌನತಪಸ್ವಿ ಚೆನ್ನವೀರ ಶರಣರು ಮಹಾತಪಸ್ವಿಗಳು, ಕಲಾಪ್ರಿಯರು, ಸಂಗೀತಪ್ರಿಯರು ಹಾಗೇ ಕಲಾಪೋಷಕರು, ಸಂಗೀತ ಪೋಷಕರು ಆಗಿದ್ದರು. ಅವರು ಕೊಪ್ಪಳದ ಗವಿಸಿದ್ದೇಶ್ವರರ ಆರಾಧಕರು. ಈ ಹಿಂದೆ ಕೊಪ್ಪಳದ 'ಜೀವನಯಾತ್ರೆ' ಖ್ಯಾತಿಯ ನಿಟ್ಟಾಲಿ ಶಿವರುದ್ರಪ್ಪನವರು 'ಕೊಪ್ಪಳದ ಗವಿಸಿದ್ದೇಶ್ವರ ಮಹಾತ್ಮೆ' ಎಂಬ ನಾಟಕವನ್ನು ಬರೆದು ವಿದ್ಯಾರ್ಥಿ ಬಳಗದಿಂದ ಪ್ರದರ್ಶಿಸಿದ್ದರು. ಆದರೆ ಆ ನಾಟಕ ಅಷ್ಟೊಂದು ಜನಪ್ರಿಯವಾಗಲಿಲ್ಲ. ಶರಣಸಾಹಿತ್ಯರತ್ನನೆಂಬ ಬಿರುದು ಗಳಿಸಿದ ಹೊಳೆಆಲೂರಿನ ಮಾರುತೇಶ ಮಾಂಡ್ರೆಯವರು ಶರಣರ ನಾಟಕಗಳಿಗೆ ಖ್ಯಾತಿ ಪಡೆದಿದ್ದರು. ಅವರನ್ನು ಕರೆಯಿಸಿ ಚಿಕ್ಕೇನಕೊಪ್ಪದ ಚೆನ್ನವೀರ ಶರಣರು ಮತ್ತೊಮ್ಮೆ ಗವಿಸಿದ್ದೇಶ್ವರ ಮಹಾತ್ಮೆ ಎಂಬ ನಾಟಕವನ್ನು ಬರೆಯಿಸಿದರು.

ಸೂಡಿ ಪಟ್ಟಣಶೆಟ್ಟಿ ಅವರಿಗೆ ಕಂಪನಿಯ ಜವಾಬ್ದಾರಿ ವಹಿಸಿ ಹೊಸ ಕಂಪನಿಯನ್ನು ಹುಟ್ಟುಹಾಕಿದರು. ಶ್ರೀ ಜಗದ್ಗುರುಗಳು ನಾಟಕದ ಖರ್ಚು ವೆಚ್ಚಕ್ಕಾಗಿ ಹಣ ಕೂಡಿಸಿಕೊಟ್ಟರು. ಕೊಪ್ಪಳದಲ್ಲೇ ನಾಟಕ ಪ್ರಾರಂಭವಾಯಿತು. ಗವಿಸಿದ್ದೇಶ್ವರರ ತಾಯಿಯ ಪಾತ್ರಕ್ಕೆ ಅಂಜಲಿದೇವಿಯವರನ್ನು ಕರೆತಂದರು. ಅದು ೧೯೭೭-೭೮ ರ ಸಮಯ. ಕೆಲವೇ ಪ್ರಯೋಗಗಳಿಗೆಂದು ಬುಕ್ ಮಾಡಿ ಕರೆತಂದ ಅಂಜಲಿದೇವಿಯವರು ಅನಿವಾರ್ಯವಾಗಿ ನೂರಾರು ಪ್ರಯೋಗ ಮಾಡಿದರು. ಭಕ್ತಿಪ್ರಧಾನವಾದ ಈ ನಾಟಕ ಒಂದು ನೂತನ ದಾಖಲೆಯನ್ನೇ ನಿರ್ಮಿಸಿತು. ತಾಯಿಯ ಪಾತ್ರದಲ್ಲಿ ಅಂಜಲಿದೇವಿಯವರು ಎಲ್ಲರ ಮನವನ್ನು ಗೆದ್ದಿದ್ದರು.

ಕೊಪ್ಪಳದಲ್ಲಿ ನಾಟಕ ನಡೆಯುವಾಗ ಆ ಭಾಗದ ಅನೇಕ ಹರಗುರುಚರ ಮೂರ್ತಿಗಳು ದಿನಂಪ್ರತಿ ನಾಟಕಕ್ಕೆ ಬರುತ್ತಿದ್ದರು. ನಾಟಕ ನೋಡಿ ತಮ್ಮ ಆಶೀರ್ವಚನದಲ್ಲಿ ಎಲ್ಲರನ್ನೂ ಹೊಗಳುತ್ತಿದ್ದರು. ವಿಶೇಷವಾಗಿ ತಾಯಿಯ ಪಾತ್ರಧಾರಿ ಅಂಜಲಿದೇವಿಯವರನ್ನು ಕೊಂಡಾಡುತ್ತಿದ್ದರು. ಒಂದು ದಿನ ಭಾವಪೂರ್ಣವಾಗಿ ಅಂಜಲಿದೇವಿ ಹಾಡುತ್ತಿದ್ದರು. ವೇದಿಕೆಗೆ ಬಂದ ಚೆನ್ನವೀರ ಶರಣರು ಹಾಡಿನಿಂದ ಸಂಪ್ರೀತರಾಗಿ ಹಣ್ಣನ್ನು ಎಸೆದುಬಿಟ್ಟರು. ಈ ಶರಣರು, ಮಹಾಶಿವಶರಣ ದುರಂಧರರು, ಮಹಾವಾಕ್‌ಶುದ್ದಿ ಪುರುಷರು, ಅಂಜಲಿದೇವಿಯವರು ಶರಣರು ತನ್ನೆಡೆಗೆ ಏತಕ್ಕಾಗಿ ಹಣ್ಣನ್ನೆಸೆದರು ಎಂಬುದು ತಿಳಿಯಲಿಲ್ಲ. ಹಣ್ಣನ್ನು ತೆಗೆದುಕೊಂಡು ಹೋದರು. ನಾಟಕ ಬಿಟ್ಟನಂತರ ಬೋರ್ಡಿಂಗಿನಲ್ಲಿ ಊಟ ಮಾಡುವಾಗ ಈ ವಿಷಯ ಚರ್ಚಿತವಾಯಿತು. ಹಿರಿಯ ಕಲಾವಿದರೊಬ್ಬರು ಶರಣರ ಮಹಿಮೆಯ ಕುರಿತು ಹೇಳತೊಡಗಿದರು. ಆಗ ಅಂಜಲಿದೇವಿಯವರು "ಶರಣರು ತನ್ನೆಡೆಗೆ ಹಣ್ಣನ್ನು

ಏತಕ್ಕಾಗಿ ಎಸದರು' ಎಂದರು. ಆಗ ಪಟ್ಟಣಶೆಟ್ಟರು ಆ ನಾಟಕದ ಮಾಲಿಕರು ಅಂಜಲಿದೇವಿಯವರಿಗೆ ಹೇಳಿದರು, "ನೀನು ಮಹಾಭಾಗ್ಯಶಾಲಿಯಮ್ಮ. ಅದು ಶರಣರ ಕೃಪೆಯ ಫಲ. ನಿನಗಿನ್ನು ರಂಗಭೂಮಿಯಲ್ಲಿ ಉತ್ತರೋತ್ತರ ಏಳಿಗೆಯಿದೆ, ಯಶಸ್ಸಿದೆ, ಅದಕ್ಕಾಗಿಯೇ ಅವರು ಫಲವನ್ನು ನೀಡಿದ್ದಾರೆ' ಎಂದರು. ಆ ನಾಟಕವನ್ನು ನೋಡಿ ಹರಸಿದವರಲ್ಲಿ ಮಹಾತ್ಮರಾದ ಗುಡದೂರ ಬಸವಾರ್ಯ ತಾತನವರೂ ಒಬ್ಬರು. ಅಂತಹ ಮಹಾತ್ಮರ ಆಶೀರ್ವಾದ ಪಡೆದ ನಾನು ಸುದೈವಿ ಎನ್ನುತ್ತಾರೆ ಅಂಜಲಿದೇವಿ.

## ಆಕಾಶವಾಣಿಯಲ್ಲಿ ಅಂಜಲಿದೇವಿ

ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಯಮುನಾ ಮೂರ್ತಿಯವರ ನಿರ್ದೇಶನದಲ್ಲಿ ಹವ್ಯಾಸಿ ತಂಡದವರೊಡನೆ ತಮ್ಮ ಮಗಳು ವಂದನಾ, ಸೂರ್ಯಭಾನು ಜೊತೆಗೂಡಿ 'ರಕ್ತರಾತ್ರಿ' ನಾಟಕದ ಧ್ವನಿಮುದ್ರಣ ಮಾಡಿದರು.ನಾಟಕ ಮೂರ್‍ನಾಲ್ಕು ಸಲ ಪ್ರಸಾರವಾಯಿತು. ಮುಂದೆ ಕೆರೂರಿನ ಹವ್ಯಾಸಿ ತಂಡದವರೊಡನೆ ಅಂಜಲಿದೇವಿಯವರು ಕುರುಕ್ಷೇತ್ರ ನಾಟಕದಲ್ಲಿ ಭಾಗಿಯಾಗಿದ್ದು, ಈ ನಾಟಕವೂ ಕೂಡ ಎರಡು ಮೂರು ಸಾರಿ ಪ್ರಸಾರವಾಗಿ ಅತ್ಯಂತ ಜನಪ್ರಿಯತೆಯನ್ನು ಗಳಿಸಿತು.

ಇದು ಅಲ್ಲದೆ ಅನೇಕ ಸಲ ರಂಗಗೀತೆಗಳ ಕಾರ್ಯಕ್ರಮದಲ್ಲೂ ಭಾಗವಹಿಸಿದ್ದರು. ಹಳೆಯ ಪೌರಾಣಿಕ ನಾಟಕಗಳ ಜನಪ್ರಿಯ ಹಾಡುಗಳು ಅಂಜಲಿದೇವಿಯರ ಕಂಠದಿಂದ ಹೊರಹೊಮ್ಮಿದಾಗ ಕೇಳುಗರಿಗೆ ಅದೊಂದು ಕರ್ಣರಸಾಯನವಾದ ಅನುಭವ. ಆಕಾಶವಾಣಿಯ ನಿರ್ದೇಶಕರೊಬ್ಬರು ಹೇಳಿದ್ದರಂತೆ, ಅಂಜಲಿದೇವಿಯವರೇ ನಿಮ್ಮ ಕಂಠದಲ್ಲಿ ಕೋಗಿಲೆಯಿದೆ ಎಂದು. ಅದಕ್ಕಾಗಿ ಇರಬೇಕು ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಕರ್ನಾಟಕದ ಕೋಗಿಲೆಯೆಂದು `ಬಿರುದು ನೀಡಿದ್ದು,

## ಮರೆಯದ ಘಟನೆಗಳು

ಅಂಜಲಿದೇವಿಯವರಿಗೆ ಸೀಜನ್‌ನಲ್ಲಿ ಅಂದರೆ ಅಕ್ಟೋಬರ್‌ನಿಂದ ಹಿಡಿದು ಏಪ್ರಿಲ್ ತನಕ ಬಿಡುವಿರದಂತೆ ನಾಟಕಗಳಿರುತ್ತಿದ್ದವು. ಒಂದು ಊರಲ್ಲ, ಒಂದು ಜಿಲ್ಲೆಯಲ್ಲ, ಇವತ್ತು ರಾಯಚೂರು ಜಿಲ್ಲೆಯ ಯಾವುದೋ ಒಂದು ಮೂಲೆಯ ಹಳ್ಳಿಯಲ್ಲಿದ್ದರೆ ನಾಳೆ ಬೀದರ್ ಆಚೆಗೆ ನಾಟಕವಿರುತ್ತಿತ್ತು. ಬಿಡುವಿರದ ಓಡಾಟ. ಒಮ್ಮೆ ಬೀದರ ದಾಟಿ ಬಸ್ ಸೌಕರ್ಯವಿರದ ಒಂದು ಹಳ್ಳಿಯಲ್ಲಿ ಚಿತ್ರಾಂಗದಾ ನಾಟಕವಿತ್ತು. ಅದು ಮುಗಿದ ಕೂಡಲೇ ಮಾರನೆ ದಿನವೇ ಬಳ್ಳಾರಿ ಹತ್ತಿರದ ತೆಕ್ಕಲಕೋಟೆಯಿಂದ ೧೦ ಕಿಲೋಮೀಟರ್ ದೂರವಿರುವ ಹಳ್ಳಿಯೊಂದರಲ್ಲಿತ್ತು. ಹೀಗಾಗಿ ಬೀದರಿಗೆ ಹೋಗುವುದೋ ಬಿಡುವುದೋ ಎಂದು ಯೋಚಿಸಿದರು. ತಮ್ಮ ವೃತ್ತಿ ಜೀವನದಲ್ಲಿ ಯಾವ ನಾಟಕಕ್ಕೂ ಕೈಕೊಟ್ಟವರಲ್ಲ. ಆ ರೀತಿ ಆಗಬಾರದೆಂಬುದೇ ಅವರ ಮನದಿಂಗಿತ, ಸರಿ. ಅದರಂತೆ ಬೀದರ್ ನಾಟಕಕ್ಕೆ ಹೋದಾಯ್ತು. ನಾಟಕ ಬಹಳ ಚೆನ್ನಾಗಾಯ್ತು. ನಾಟಕ ಬೆಳಗಿನ ಜಾವ ೫ ಗಂಟೆಗೆ ಬಿಟ್ಟಿತು. ಬಣ್ಣ ಒರೆಸಿಕೊಂಡವರೇ ಪೇಮೆಂಟು ತಗೊಂಡು ನಾಟಕಕ್ಕೆ ಬಂದ ಯಾವುದೋ ಒಂದು ಟ್ರಾಕ್ಟರ್ ಹಿಡಿದು ರೋಡಿಗೆ

ಬಂದರು. ಲಾರಿ ಹಿಡಿದು, ಟೆಂಪೋ ಹಿಡಿದು ಕೊನೆಗೆ ಬಸ್ ಹಿಡಿದು ಹಾಗೂ ಹೀಗೂ ಸಿಂಧನೂರು ತಲುಪಿದರು. ಆಗ ಸಮಯ ೫ ಗಂಟೆ. ಬಸ್ ಸ್ಟಾಂಡಿನಲ್ಲಿ ಬಸ್ ಕಾಯುತ್ತ ಕುಳಿತರು. ಗಂಟೆ ಐದಾಯ್ತು ಆರಾಯಿತು, ಬಸ್ ಬರಲಿಲ್ಲ. ಅಂಜಲಿದೇವಿಯವರಿಗೆ ಸಮಾಧಾನವಿಲ್ಲ, ಅದು ಹೋಗುತ್ತೇನು ನೋಡ್ರಿ ಇದು ಹೋಗುತ್ತೇನು ನೋಡ್ರಿ ಎಂದು ಪತಿಗೆ ಹೇಳಿದಾಗ ಅವರು ಓಡೋಡಿ ಹೋಗಿ ವಿಚಾರಿಸಿ ಬರುತ್ತಿದ್ದರು. ಹೀಗಾದರೆ ಇಂದಿನ ನಾಟಕ ಕೈ ತಪ್ಪುತ್ತದೆ. ಹಣ ಹೋಗುವುದಿರಲಿ ಇಲ್ಲಿಯ ತನಕ ಕಾಪಾಡಿಕೊಂಡು ಬಂದಂತಹ ಹೆಸರೂ ಕೂಡ ಕೆಟ್ಟು ಹೋಗುತ್ತದೆ. ಹೇಗಾದರೂ ಮಾಡಿ ಹೋಗಲೇಬೇಕೆಂದು ನಿರ್ಧರಿಸಿದರು. ಪತಿಗೆ ಕಾರು ಬಾಡಿಗೆ ಮಾಡಿ ತರಲು ಹೇಳಿದರು. ಆಗ ನೀಲಕಂಠಪ್ಪನವರು "ಅಲ್ಲೇ, ನಾವು ಕಾರು ತಗೊಂಡು ಹೋದ್ರ ಅವರು ಬಾಡಿಗೆ ಕೊಡದಿದ್ರ?" ಆತಂಕದಿಂದ ಕೇಳಲು, ದೃಢ ಮನದಿಂದ ಅಂಜಲಿದೇವಿ ಹೇಳಿದರು, ಕೇಳೂ, ಕೊಟ್ರೆ ಕೊಡಲಿ, ಕೊಡದಿದ್ರ ಬೇಡ. ನಮ್ಮ ಹಣದಾಗ ಕೊಡೂನು, ಒಟ್ಟು ನಾಟಕಕ್ಕೆ ಹೋಗೂನು ಎಂದರು. ನೀಲಕಂಠಪ್ಪನವರು ಎಷ್ಟೇ ಚೌಕಾಸಿ ಮಾಡಿದರೂ ಕೇಳದ ಕಾರಿನವರು ೩೮೦ ರೂಪಾಯಿ ಬಾಡಿಗೆಗೆ ಒಪ್ಪಿಕೊಂಡರು. ನೀಲಕಂಠಪ್ಪ ಕಾರು ಬಾಡಿಗೆ ಮುಗಿಸಿ ಒಬ್ಬರೇ ಸತಿಯ ಹತ್ತಿರ ಬಂದು, ಮೂರುನೂರ ಎಂಬತ್ತು ರೂಪಾಯಿ ಅಂತಾರಲ್ಲ ಅಂದರು. 'ಆಗ್ಲಿರಿ, ಎಷ್ಟ ಆಗ್ಲಿ ಹೋಗೂನ,'' ಅಂದಾಗ ಮತ್ತೊಮ್ಮೆ ಆತಂಕದಿಂದ ನೀಲಕಂಠಪ್ಪ, "ಅಲ್ಲೇ'' ಎಂದು ಏನನ್ನೋ ಹೇಳುವುದರಲ್ಲಿದ್ದರು. ಅದು ಅಂಜಲಿದೇವಿಯವರಿಗೆ ಅರ್ಥವಾಯಿತು. ಅದೇನೆಂದರೆ ಆಗ ಅವರ ನಾಟಕದ ಒಂದು ದಿನದ ಸಂಭಾವನೆ ಮೂರುನೂರ ಐವತ್ತು ರೂಪಾಯಿ, ''ಇನ್ನೂ ಮೂವತ್ತು ರೂಪಾಯಿ ಹೆಚ್ಚಿಗೆ ಹಾಕಿ ಬಾಡಿಗೆ ಕೊಡಿ, ಬೇಗ ಕರಕೊಂಡು ಬರಿ'' ಎಂದು ಅವಸರಪಡಿಸಿದರು. ಮೂರು ನೂರ ಎಂಭತ್ತಕ್ಕೆ ಬಾಡಿಗೆ ಮಾಡಿ ಕಾರು ಏರಿ ಹೊರಟರು ಕಲಾದಂಪತಿಗಳು. ಅಂಜಲಿದೇವಿಯವರ ದೇಹ ಮಾತ್ರ ಕಾರಿನಲ್ಲಿತ್ತು. ಮನಸ್ಸು ದೂರದ ನಾಟಕ ಪ್ರದರ್ಶಿಸುವ ಹಳ್ಳಿಯಲ್ಲಿತ್ತು. ಜನರು ಏನಂತಾರೋ? ಪ್ರ್ಯಾಕ್ಟೀಸಿಗೆ ಹೋಗಿಲ್ಲ. ಎಲ್ಲಾ ಹೊಸಬರೇ ಇದ್ದಾರಂತೆ, ಭಗವಂತಾ ನೀನೇ ಕಾಪಾಡು ಎಂಬ ನಿಟ್ಟುಸಿರಿಟ್ಟರು. ಕೊನೆಗೆ ಹಳ್ಳಿ ತಲುಪಿದಾಗ ಗಂಟೆ ಒಂಬತ್ತಾಗಿತ್ತು. ಅಂಜಲಿದೇವಿಯವರ ದಾರಿ ಕಾದು ಪ್ರ್ಯಾಕ್ಟೀಸಿಲ್ಲದೆ ಸಾಕಷ್ಟು ಬೈದು, ನಾಟಕದ ಸನ್ನಿವೇಶಕ್ಕೆ ಬೇಕಾದಂತಹ ಸಾಮಾನು ಸರಂಜಾಮು ಹೊಂದಿಸಿಕೊಳ್ಳಲು ಹೋಗಿದ್ದರು. ಕಲಾವಿದರು, ನಾಟಕದ ಮ್ಯಾನೇಜರಂತೂ ಸಾಕ್ಷಾತ್ ವೀರಭದ್ರ ದೇವರ ಅವತಾರದಂತಿದ್ದ. ಇಷ್ಟು ಹೊತ್ತಿನಾಗ ಬಂದ್ರ ಹ್ಯಾಂಗ್ರಿ? ಪ್ರಾಕ್ಟೀಸೇನು ನಾಟಕ ಏನು ಏನ ಕತಿ ಎಂದರು. 'ನಾವು ಬೀದರಕ್ಕೆ ಹೋಗಿದ್ವಿ, ಅಲ್ಲಿಂದ ಬರಬೇಕಾದ್ರೆ ಇಷ್ಟು ಹೊತ್ತಾತು'' ಅಂದರು. ನೀವು ಬೀದರಕ್ಕಾದ್ರೂ ಹೋಗ್ರಿ, ದಿಲ್ಲಿಗಾದರೂ ಹೋಗ್ರಿ. ನಮ್ಮ  ಟೈಮಿಗೆ ಸರಿಯಾಗಿ ಬರಬೇಕಾಗಿತ್ತು. ನಿನ್ನೇನ ಪ್ರಾಕ್ಟೀಸಿಗೆ ಬರ್ತಿವಂತ ಅಂದಿದ್ರಿ. ಹೀಂಗ ಏಕದಂ ಸೆಟಗೊಂಡು ನಾಟಕದಾಗ ಹೋದ್ರ ಏನು ಆಡಬೇಕು ನಮ್ಮ ಹುಡುಗ್ರು. ಹೇಳಿ ಕೇಳಿ ಹೊಸಾ ಹುಡುಗರು. ನಾಟಕ ಫೇಲಾದ್ರ ಒಂದು ಪೈಸಾನೂ ಕೊಡೂದಿಲ್ಲ - ಹೀಗೆ ನಾನ್‌ಸ್ಟಾಪ್ ಬಿಡದಂತೆ ಒಂದೇ ಉಸುರಿಗೆ ಹೇಳಿದ ಮ್ಯಾನೇಜರ್. ಅಂದಾಗ ಕಾರು ಬಾಡಿಗೆ ಕೇಳುವುದು ಹೇಗೆ ? ಕೊನೆಗೆ ನೀಲಕಂಠಪ್ಪನವರೇ "ನಾಟಕ ಯಾವುದೇ ಕಾರಣಕ್ಕೂ ತಪ್ಪಬಾರದು ಅಂತ ಸಿಂಧನೂರಿನಿಂದ ಕಾರು ಬಾಡಿಗೆ ಮಾಡಿಕೊಂಡು ಬಂದಿವಿ'' ಅಂದರು.

''ಚಲೋ ಆತು ಬಿಡ್ರಿ' ಒರಟಾಗಿ ಮೊನಚಾಗಿ ಹೇಳಿದ ಮ್ಯಾನೇಜರ್,

"ಬಾಡಿಗೆ ಮೂನ್ನೂರ ಎಂಬತ್ತು."

''ಅದು ಎಷ್ಟಾರ ಇರ್ಲಿ, ನನಗೇನು."

''ಬಾಡಿಗೆ ನೀವು ಕೊಡಬೇಕು'' ಎಂದು ನೀಲಕಂಠಪ್ಪ ಅನ್ನುವುದರೊಳಗೆ ದಿಗ್ಗನೆದ್ದ ಮ್ಯಾನೇಜರ್, ಕುಳಿತಿದ್ದ ಛೇರನ್ನು ಕೆಡವಿ ಕೆಂಪುಗಣ್ಣಿನಿಂದ ನೋಡಿ ಹೊರನಡೆದ.

ಮ್ಯಾನೇಜರನದು ಮುಗಿಯುವುದರೊಳಗೆ ಮಾಸ್ತರ ಪ್ರಾರಂಭಿಸಿದ. 'ಇಷ್ಟೊತ್ತಿನಾಗ ಬಂದ್ರೆ ನಾನು ಯಾವ ಹಾಡು ಬಾರಸಲಮ್ಮ.'

''ನೀವೇನು ಚಿಂತೆ ಮಾಡಬ್ಯಾಡಿ, ಬೇಕಾದ್ರೆ ನಮ್ಮ ಯಜಮಾನ್ರು ಪೇಟಿ ಬಾರಿಸ್ತಾರೆ' ಎಂದರು ಅಂಜಲಿದೇವಿ, ಮಾಸ್ತರ ಕೂಡ ಕಣ್ಣು ಕೆಂಪಗೆ ಮಾಡಿಕೊಂಡು ಬುಸಗುಡುತ್ತ ''ನಾನು ಯಾಕ ಅದೀನಿ -ಇಲ್ಲಿ, ಕತ್ತೆ ಕಾಯಲಿಕ್ಕ ಅದೀನೇನು'' ಎಂದು ಆರ್ಭಟಿಸಿದ. "ನಾನು ಖುರ್ಚಿ ಬಿಟ್ಟು ಕೊಡಬೇಕಾ ? ನಾನು ಈ ನಾಟಕದ ಮಾಸ್ತರ. ಮಾಸ್ತರ ಅದೀನಂದ್ಯಾ' ಎಂದು ರೇಗಿದ. ಮುಖ್ಯಮಂತ್ರಿಯ ಪದವಿಯನ್ನು, ಖುರ್ಚಿಯನ್ನು ಕಸಿದುಕೊಂಡಂತೆ ತನ್ನ ಸ್ಥಾನದ ಬಗ್ಗೆ ಕೂಗಿಕೊಂಡ. ಹೊತ್ತಾಗಿ ಹೋದುದಕ್ಕೆ ಬರೀ ರಾದ್ಧಾಂತವಾಯಿತು. ಊಟಕ್ಕೆ ಬನ್ನಿರೆಂದು ಯಾರೂ ಕರೆಯಲಿಲ್ಲ. ಬೆಳಿಗ್ಗೆ ಪ್ರಯಾಣಿಸುವಾಗ ಬಸ್ಸಿನಲ್ಲಿ ತಿಂಡಿ ತಿಂದಿದ್ದು, ಊಟ ಮಾಡಲು ಸಮಯವಿರಲಿಲ್ಲ, ಇಲ್ಲಿ ಊಟ ಮಾಡಲು ಕರೆಯುತ್ತಿಲ್ಲ. ಹೊರಗಡೆ ಎಲ್ಲಿಯಾದರೂ ಹೋಗಿ ಊಟ ಮಾಡಿ ಬರಲು ಖಾನಾವಳಿಗಳಿಲ್ಲ. ದೊಡ್ಡ ಹೋಟೆಲುಗಳಿಲ್ಲ, ಕುಗ್ರಾಮ. ಸ್ಟೇಜ್ ಹತ್ತಿರ ಹಾಕಿದ ಟೆಂಟ್ ಹೋಟೆಲ್‌ಗಳು, ಅದೇ ಒಗ್ಗರಣಿ ಮಿರ್ಚಿ, ಹಿಂದಿನ ದಿನ ನಾಟಕವಾಡಿದಾಗಿನಿಂದ ನಿದ್ರೆಯಿಲ್ಲದೆ, ಊಟವಿಲ್ಲದೆ ತಲೆ ತಿರುಗಿದಂತಾಯಿತು ಅಂಜಲಿದೇವಿಯವರಿಗೆ ವಿಧಿಯಿಲ್ಲದೆ ತಮ್ಮ ಬ್ಯಾಗುಗಳನ್ನು ತಾವೇ ಹೊತ್ತುಕೊಂಡು ಥೇಟರಿಗೆ ಹೋದರು. ಹೆಣ್ಣುಮಕ್ಕಳಿಗೆ ನಿಗದಿಪಡಿಸಿದ ಗ್ರೀನ್‌ರೂಮಿನ ಟೆಂಟಿನೊಳಗೆ ಎಳ್ಳಿಯ ಹೆಂಟೆಯ ಮೇಲೆ ಹಾಸಿದ ತೆಳು ಜಮಖಾನೆಯ ಮೇಲೆ ಸಾಮಾನು ಇಟ್ಟರು. ಇಬ್ಬರ ಮುಖದಲ್ಲೂ ಕಳೆಯಿರಲಿಲ್ಲ. ನೀಲಕಂಠಪ್ಪನವರು ತಿನ್ನಲಿಕ್ಕೆ ಒಗ್ಗರಣಿ ಮಿರ್ಚಿ ತಂದರು. ಅದನ್ನೇ ಊಟವೆನ್ನುವಂತೆ ಇಬ್ಬರೂ ತಿಂದರು. ಉಳಿದ ಪಾತ್ರಧಾರಿ ಹೆಣ್ಣುಮಕ್ಕಳು ಬೇಗನೆ ಪ್ರಾಕ್ಟೀಸಿಗೆ ಬಂದಿದ್ದರು. ಅವರ ಜೊತೆ ಪಾತ್ರ ಮಾಡುವವರು, ಅವರನ್ನು ತಮ್ಮ ತಮ್ಮ ಮನೆಗೆ ಕರೆದೊಯ್ದು ಯಥೇಚ್ಛ ಭೋಜನ ಮಾಡಿಸಿದ್ದರು. ರೇಗುತ್ತ ಬಣ್ಣ ಬಳಿದುಕೊಳ್ಳಲು ಕುಳಿತರು. ಅಂಜಲಿದೇವಿಯವರನ್ನು ಎಲ್ಲರೂ ಅಪರಾಧಿಯಂತೆ ಕಾಣುತ್ತಿದ್ದರು.

ಬಣ್ಣ ಹಚ್ಚಿಕೊಳ್ಳುತ್ತ ಗುರುಗಳಾದ ಪಂಚಾಕ್ಷರ ಗವಾಯಿಗಳನ್ನು ಸ್ಮರಿಸಿಕೊಂಡು "ಅಜ್ಜಾ, ನೀನೇ ಏನಾದರೂ ಮಾಡು. ಮರ್ಯಾದೆ ಕಾಯು ತಂದೆ " ಎಂದರು. ಥೇಟರ್ ತುಂಬಿತ್ತು. ಪ್ರತಿಯೊಂದು ಪ್ರವೇಶಕ್ಕೂ ಪಟಾಕಿಗಳನ್ನು ಹಚ್ಚುತ್ತಿದ್ದರು. ಅಂಜಲಿದೇವಿ ರಂಗಕ್ಕೆ ಪ್ರವೇಶಿಸಿದರು. ಅವರ ಮಾತುಗಳಿಗೆ ಜನರು ಚಪ್ಪಾಳೆ ಹಾಕಿದರು. ಆ ದೃಶ್ಯದಲ್ಲಿ ಅಂಜಲಿದೇವಿ ಹಾಡಬೇಕಿತ್ತು. ಮಾಸ್ತರನಿಗೆ ಬಾರಿಸಲು ಬರುವುದಿಲ್ಲವೆಂದು ತಿಳಿದೇ ಮಾಸ್ತರನ

ಹತ್ತಿರ ನೀಲಕಂಠಪ್ಪನವರು ಕುಳಿತಿದ್ದರು. ಪೆಚ್ಚುಮೋರೆ ಮಾಡಿ "ಬರ್ರಿ ಬಾರಿಸಬರ್ರಿ" ಎಂದು ಕರೆದ. ನೀಲಕಂಠಪ್ಪನವರು ಹಾರ್ಮೋನೀಯಂ ಮೇಲೆ ಕೈ ಇಡುವುದೇ ತಡ ಅಂಜಲಿದೇವಿಗೆ ಚೈತನ್ಯ ಬಂದಂತಾಯ್ತು. ಅವರ ಕೋಗಿಲೆಯ ಕಂಠದಿಂದ ಹೊಮ್ಮಿದ ಹಾಡು, ಆ ಪ್ರದೇಶದಲ್ಲಿಯ ಒಂದೇ ಹಾಡು ನಾಲ್ಕು ಸಲ ಒನ್ಸ್ ಮೋರ್ ಪಡೆಯಿತು.

ಅರ್ಧ ನಾಟಕ ಮುಗಿದಾಗ ಕೋಪದಿಂದ ಹೋದ ಮಾನೇಜರ್, ಅಂಜಲಿದೇವಿಯವರಿಗೆ ಚಹ ತರಿಸಿ, “ಅಡ್ಡಿಯಿಲ್ಲಮ್ಮ, ನಮ್ಮ ಮರ್ಯಾದೆ ಉಳಿಸಿದಿ" ಎನ್ನುತ್ತ ಮೂರುನೂರು ರೂಪಾಯಿ ಕಾರು ಬಾಡಿಗೆ ತಾ ಕೊಡಲು ಒಪ್ಪಿದ. ಮುಂದಿನ ಎಲ್ಲಾ ಪ್ರವೇಶಗಳೂ, ಹಾಡುಗಳೂ ಜನರನ್ನು ರಂಜಿಸಿದವು. ಅಂಜಲಿದೇವಿಯವರ ಹಾಡು ಬಂದಾಗ ಮಾಸ್ತರ್ ಎದ್ದು ತನ್ನ ಸ್ಥಾನ ಬಿಟ್ಟುಕೊಡುತ್ತಿದ್ದ. ಪ್ರತಿಯೊಂದು ಹಾಡು ನಾಲ್ಕೈದು ಸಲ ಒನ್ಸ್ ಮೋರ್ ಆಗುತ್ತಿತ್ತು. ಹೀಗೆ ಹಾಡಿದ ಹಾಡಿನಿಂದ ಅಹೇರ ಆಗಿ ಬಂದದ್ದು ನಾಲ್ಕು ನೂರು ರೂಪಾಯಿಗೂ ಮಿಕ್ಕಿತ್ತು. ರಾತ್ರಿ ಒಂಬತ್ತು ಗಂಟೆಯ ಸುಮಾರಿಗೆ ತಿರಸ್ಕಾರಕ್ಕೆ ಒಳಗಾಗಿದ್ದ ನಟಿ ಅಂಜಲಿದೇವಿ ಪುರಸ್ಕಾರಗೊಂಡು ಎಲ್ಲರ ಬಾಯಲ್ಲೂ ಶಹಬಾಸ್‌ಗಿರಿ ಪಡೆದಿದ್ದಳು. ಬೆಳಿಗ್ಗೆ ಕಲಾವಿದರೆಲ್ಲಾ ಅಭಿನಂದಿಸಿ 'ನಮ್ಮನಿಗೆ ಬರ್ರಿ ಉಪ್ಪಿಟ್ಟು ಮಾಡೀವಿ" ಎಂದು ಒಬ್ಬ, ಮತ್ತೊಬ್ಬ "ನಾವು ಬಿಸಿಬಿಸಿ ಒಗ್ಗರಣೆ ಹಾಕೀವ್ರಿ". "ಅದೆಲ್ಲಾ ಏನೂ ಬ್ಯಾಡ ಬಿಸಿ ಬಿಸಿ ರೊಟ್ಟಿ ಸುಡಿಸಿಬಿಡ್ತೀನಿ ಬರಿ ನಮ್ಮನಿಗೆ" - ಹೀಗೆ ಎಲ್ಲರೂ ಕರೆಯತೊಡಗಿದರು. ಅಂಜಲಿದೇವಿಯವರು ವಿನಯದಿಂದ ಅದೆಲ್ಲಾ ಏನೂ ಬೇಡ ನಿಮ್ಮ ಈ ಅಭಿಮಾನ ಒಂದು ಸಾಕು ಎಂದು ಗುರುಗಳನ್ನು ಸ್ಮರಿಸಿ ಕಾರು ಏರಿದರು. ನಾಟಕ ಫೇಲಾಗಬಹುದೆಂದು ಅಂದುಕೊಂಡಾಗ ಅತ್ಯಂತ ಯಶಸ್ವಿಯಾಗಿರುತ್ತದೆ. ಇದೆಲ್ಲ ಗುರುಗಳ ಕೃಪೆ, ನಮ್ಮದೇನಿದೆ ? ಎಲ್ಲಾ ಆತನದೇ ಎಂದು ವಿನಯದಿಂದ ನುಡಿಯುತ್ತಾರೆ. ಕೊಂಚ ಯಶಸ್ಸು ಕಂಡರೆ ನನ್ನಿಂದಾನೆ ಎಂದು ನಾವು ಬೀಗುತ್ತೇವೆ. ಆದರೆ ಅಂಜಲಿದೇವಿಯವರು ಇದಕ್ಕೆ ಹೊರತಾಗಿದ್ದಾರೆ.

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ರಕ್ತರಾತ್ರಿ ನಾಟಕಕ್ಕೆ ಬುಕ್ ಮಾಡಲಾಗಿತ್ತು. ಬೀದರ್ ದಾಟಿ ಒಂದು ಕುಗ್ರಾಮದಲ್ಲಿ ನಾಟಕ ಮುಗಿಸಿಕೊಂಡು ಹಗರಿಬೊಮ್ಮನಹಳ್ಳಿಗೆ ಬಂದಾಗ ಸಂಜೆ ೫.೧೦ ರ ಸಮಯವಾಗಿತ್ತು. ಸಾಮಾನ್ಯವಾಗಿ ಹವ್ಯಾಸಿ ನಾಟಕಗಳು ಸಮಯಕ್ಕೆ ಸರಿಯಾಗಿ ಪ್ರಾರಂಭವಾಗುವುದಿಲ್ಲ. ಸಾಯಂಕಾಲದಿಂದ ಮೈಕ್‌ನಲ್ಲಿ ಪ್ರಚಾರ ಮಾಡುತ್ತಲೇ ಇರುತ್ತಾರೆ. ಇನ್ನೂ ಕೆಲವೇ ಕೆಲವು ನಿಮಿಷಗಳಲ್ಲಿ ನಾಟಕ ಪ್ರಾರಂಭವಾಗುತ್ತದೆಂದು, ಆದರೆ ಅದು ರಾತ್ರಿ ೧೨ ಗಂಟೆಯ ಮೇಲೆಯೇ ಸುರುವಾಗುವದು. ಹೀಗಿದ್ದೂ ನಾಟಕ ಸರಿಯಾಗಿ ೧೦.೩೦ ಗಂಟೆಗೆ ಪ್ರಾರಂಭವೆಂದು ಹೇಳುತ್ತಿರುತ್ತಾರೆ. ರಾತ್ರಿ ೧೨.೦೦ ಗಂಟೆಯಾದರೂ ಹತ್ತು ಮೂವತ್ತು ಗಂಟೆಯ ಪ್ರಚಾರವನ್ನು ಬಿಟ್ಟಿರುವದಿಲ್ಲ. ಇದೊಂದು ಹವ್ಯಾಸಿ ಕಲಾ ತಂಡಗಳ ವೈಶಿಷ್ಟ್ಯ. ಆದರೆ ಹಗರಿಬೊಮ್ಮನಹಳ್ಳಿಯ ವಿಷಯವೇ ಬೇರೆಯಾಗಿತ್ತು. ರಕ್ತರಾತ್ರಿ ನಾಟಕ ರಾತ್ರಿ ೧೦.೩೦ಕ್ಕೆ ಪ್ರಾರಂಭವಾಗುತ್ತಿತ್ತು. ಟಿಕೆಟ್ ೫.೩೦ಕ್ಕೆ ಪ್ರಾರಂಭವಾಗಿದ್ದವು. ಅಂಜಲಿದೇವಿಯವರನ್ನು ಬಸ್ ಸ್ಟಾಂಡಿನಲ್ಲಿ ಎದುರುಗೊಂಡ ನಾಟಕದ ಮ್ಯಾನೇಜರ್ ಅವರ ಬ್ಯಾಗಗಳನ್ನು ಹೊರಿಸಿಕೊಂಡು ಬಂದು ಟಿಫಿನ್ ವ್ಯವಸ್ಥೆ ಮಾಡಿ

"ಆದಷ್ಟು ಜಲ್ದಿ ಮೇಕಪ್ ಮಾಡಿಕೊಳ್ಳಮ್ಮ" ಎಂದು ಹೇಳಿದ. ಕಾರಣವೇನೆಂದರೆ ಅಂದಿನ ರಕ್ತರಾತ್ರಿ ನಾಟಕದಲ್ಲಿ ದ್ರೌಪದಿಯ ಪಾತ್ರವನ್ನು ಅಂಜಲಿದೇವಿಯವರು ವಹಿಸಿದರೆ ಭೀಮನ ಪಾತ್ರದಲ್ಲಿ ಚಿತ್ರರಂಗದ ಕಲಾಕೇಸರಿ ಉದಯಕುಮಾರ ವಹಿಸುತ್ತಿದ್ದರು.

- ಸಾಯಂಕಾಲ ೭.೦೦ ಗಂಟೆಗೆ ಎಲ್ಲರೂ ಮೇಕಪ್‌ಗೆ ಕುಳಿತರು. ಪ್ರವಾಸಿಮಂದಿರದಲ್ಲಿ ಮೇಕಪ್ ಮಾಡಿಕೊಂಡು ಬಂದ ಉದಯಕುಮಾರ ಸೈಡ್ ವಿಂಗ್‌ನಲ್ಲಿ ಛೇರ್ ಹಾಕಿಕೊಂಡು ಗದೆ ಸಮೇತ ಕುಳಿತುಬಿಟ್ಟರು. ಥೇಟರ್ ತುಂಬಿ ಹೊರಗಡೆ ಟಿಕೆಟ್ ಇಲ್ಲದೆ ಸಾವಿರಾರು ಜನರು ಸುತ್ತುವರಿದಿದ್ದರು. ವಿಪರೀತ ಜನಸ್ತೋಮ. ಅಂಥ ಗದ್ದಲದಲ್ಲಿ ಟಿಕೆಟ್ ತೆಗೆಯಿಸಿಕೊಂಡ ಒಬ್ಬ ವಯೋವೃದ್ಧ ಒಳಬರಬೇಕೆನ್ನುತ್ತಿದ್ದ. ಜನದಟ್ಟಣೆಯ ನೂಕುನುಗ್ಗಲಲ್ಲಿ ಬರಲಾಗಲಿಲ್ಲ. ಆತ ಉದಯಕುಮಾರನ ಅಭಿಮಾನಿ. ಒಳಗಡೆ ಹೋಗಿ ಉದಯಕುಮಾರರನ್ನು ಮಾತನಾಡಿಸಿಕೊಂಡು ಬರಬೇಕೆಂಬಾಸೆಯಿಂದ ಬಂದಿದ್ದ. ಅದರಲ್ಲೂ ಆ ಮುದುಕ ಹಗರಿಬೊಮ್ಮನಹಳ್ಳಿಯ ದಳಪತಿಯ ತಂದೆ. ಆ ಊರಿನಲ್ಲಿ ದಳಪತಿಯ ಅಧಿಕಾರ, ಕಾರುಬಾರು ಚೆನ್ನಾಗಿ ನಡೆಯುತ್ತಿತ್ತು.

ಉದಯಕುಮಾರರನ್ನು ನೋಡಲಿಕ್ಕೆ ಮುದುಕ ಟಿಕೆಟ್ ತೆಗೆಯಿಸಿದ್ದ. ಅವನು ನೂಕು ನುಗ್ಗಲಲ್ಲಿ ಮುಗ್ಗರಿಸಿ ಕೆಳಗೆ ಬಿದ್ದ ರಕ್ತ ಕಾರುತ್ತ, ಕರುಳುಗಳೆಲ್ಲ ಹೊರಬಂದವು ಅವನ ಮೇಲೆ ನಡೆದ ಜನಸಂದಣಿ ಅಲ್ಲೋಲಕಲ್ಲೋಲವಾಯಿತು. ದಳಪತಿಯ ತಂದೆಯ ಸ್ಥಿತಿ ಕಾಳ್ಗಿಚ್ಚಿನಂತೆ ಹರಡಿತು. ಒಳಗಿದ್ದ ಕಲಾವಿದರಿಗೆಲ್ಲಾ ಜೀವ ಹಿಡಿದು ಬಿಟ್ಟಂತಾಯಿತು. ಅಷ್ಟರಲ್ಲಿ ಉದಯಕುಮಾರರು ಹಿಂದುಗಡೆ ತಮ್ಮ ಕಾರು ತರಲು ಡ್ರೈವರಗೆ ಸೂಚಿಸಿದರು. ಮೇಕಪ್ ಮಾಡಿಕೊಂಡು ರಣಗೂದಲು ಬಿಟ್ಟ ಅಂಜಲಿದೇವಿ ಸೈಡ್ ವಿಂಗ್ಸ್‌ನಲ್ಲಿ ಇಣುಕಲು ಬಂದಾಗ ಉದಯಕುಮಾರರು "ನೋಡ್ರಮ್ಮ ಇವತ್ತು ನಾಟಕ ಆಗೋದಿಲ್ಲ. ಪೋಲೀಸ್ ಕೇಸಾದ್ರೆ ಇನ್ನೂ ಕಷ್ಟ" ಅಂದಾಗ ಇದ್ದ ಬಿದ್ದ ಡ್ರೆಸ್‌ಗಳನ್ನು ಬ್ಯಾಗಿನಲ್ಲಿ ತುಂಬಿ ಕೈಗೆ ಸಿಕ್ಕಿದ್ದನ್ನು ತೆಗೆದುಕೊಂಡು ಹಿಂದಿನ ತಟ್ಟಿ ಕಿತ್ತಿ ಹೊರಡಲನುವಾದರು. ಅಂಜಲಿದೇವಿ ಉದಯಕುಮಾರರಿಗೆ "ದಯವಿಟ್ಟು ನಮ್ಮನ್ನು ಬಸ್ ಸ್ಟ್ಯಾಂಡಿಗೆ ಬಿಡಿರಿ" ಎಂದು ಕೇಳಿದರು. ಪ್ರಸಿದ್ಧ ಸಿನಿಮಾ ನಟರಾದ ಅವರಿಗೆ ಬಡ ರಂಗಕಲಾವಿದೆಯ ಮಾತು ಕೇಳಿಸಲಿಲ್ಲ. ವಿಧಿಯಿಲ್ಲದೆ ಎಲ್ಲಾ ನಟಿಯರು ಮೇಕಪ್ಪಿನಲ್ಲಿಯೇ ಕತ್ತಲಲ್ಲಿ ಓಡುತ್ತ ಕಾಲುದಾರಿ ಹಿಡಿದು ಕ್ರಾಸ್‌ವರೆಗೆ ಬಂದರು. ಅವರ ವೇಷ ನೋಡಿ ನಾಯಿಗಳು ಬೆನ್ನತ್ತಿದವು. ಮೇಕಪ್ಪಿನಲ್ಲಿದ್ದ ಎಲ್ಲ ನಟಿಯರು ದಿಗಿಲುಗೊಂಡರು. ಕೂಗುತ್ತ ಒಟ್ಟಿಗೆ ಕೈ ಮಾಡಿದರು. ಒಂದೆರಡು ಟ್ರಕ್‌ಗಳು ಬಂದವಾದರೂ ಯಾರೂ ನಿಲ್ಲಿಸುವ ಧೈರ್ಯವನ್ನು ಮಾಡಲಿಲ್ಲ. ವೇಷಭೂಷಣದಲ್ಲಿದ್ದ ಯಾವ ಭೂತ ಪಿಶಾಚಿಗಳೂ ಎಂದು ಹೆದರಿರಬೇಕು. ಕೊನೆಗೆ ಒಬ್ಬ ಸಿಖ್‌ರವನು ಗಾಡಿ ನಿಲ್ಲಿಸಿದನು. ಆ ಗಾಡಿ ಕೊಪ್ಪಳಕ್ಕೆ ಹೋಗುತ್ತಿತ್ತು. ಸರಿ, ಮೊದಲು ಕೊಪ್ಪಳ ಮುಟ್ಟಿದರೆ ಸಾಕೆಂದುಕೊಂಡರು. ಜೀವ ಉಳಿದರೆ ಸಾಕೆಂದುಕೊಂಡು ಓಡಿಬಂದಿದ್ದರು. ಸಂಭಾವನೆಯಿಲ್ಲ, ಚಾರ್ಜ್ ಕೇಳಲಿಲ್ಲ.

ಲಾರಿ ಅಲ್ಲಲ್ಲಿ ನಿಲ್ಲುತ್ತ ಬೆಳಿಗ್ಗೆ ೮.೦೦ ಗಂಟೆಗೆ ಕೊಪ್ಪಳ ತಲುಪಿತು. ಸರಿ ಕೊಪ್ಪಳಕ್ಕೇನೋ ಬಂದಾಯ್ತು. ಲಾರಿ ಇಳಿಯುವದ್ಹೇಗೆ, ಜನರು ನೋಡಿ ಏನೆಂದಾರು? ನಾಚಿಕೆಯಾಯಿತು. ಕೊನೆಗೆ ನೀಲಕಂಠಪ್ಪನವರು "ಹೇ ಹುಡುಗಿ,

ತಲೆ ಮೇಲೆ ಈ ಶಾಲು ಹೊದ್ದುಕೊ" ಎಂದರು. ಅಂಜಲಿದೇವಿ ಶಾಲು ಹೊದ್ದುಕೊಂಡು ಲಾರಿ ಇಳಿದು ಮದುಮಗಳಂತೆ ಮುಚ್ಚಿಕೊಂಡು, ಕಣ್ಣು ಪೂರ್ತಿ ನೋಡಲಿಕ್ಕೆ ಮಾತ್ರ ತೆಗೆದಿದ್ದರು. ಯಾರೂ ನೋಡಿಲ್ಲವೆಂದು ಬಸ್ ಸ್ಟಾಂಡಿನಲ್ಲಿ ಹೋಗಿ ಕುಳಿತುಕೊಂಡರು. ಜನರೆಲ್ಲಾ ಸುತ್ತು ನೆರೆದರು. ನೀಲಕಂಠಪ್ಪನವರಿಗೆ ಪ್ರಶ್ನೆಗಳ ಸುರಿಮಳೆಗೈದರು. ಕೊನೆಗೆ ವಿಧಿಯಿಲ್ಲದ ಹೊದದ ಶಾಲು ತೆಗೆದು ರಾತ್ರಿಯ ರಣಚಂಡಿಯ ವೇಷಭೂಷಣವನ್ನು ತೆಗೆದು ತೋರಿಸಿದರು. ಹಗರಿಬೊಮ್ಮನಹಳ್ಳಿಯ ವಿಷಯವನ್ನು ಹೇಳಿದರು.

ಅಲ್ಲಿಯೇ ಬಸ್ ಸ್ಟಾಂಡಿನಲ್ಲಿದ್ದ ಭಾಗ್ಯನಗರದ ವೀರಭದ್ರಗೌಡರು ಅಂಜಲಿದೇವಿಯವರ ಮೇಲೆ ಬಹಳ ಅಭಿಮಾನವುಳ್ಳವರು. ಅವರ ವಿಷಯಗಳನ್ನು ಕೇಳಿ ತಮ್ಮ ಮನೆಗೆ ಕರೆದುಕೊಂಡು ಹೋಗಿ ಸ್ನಾನ ಮಾಡಿಸಿ, ಕೀರು ಪೂರಿ ತಿನ್ನಿಸಿ ಬಸ್ ಸ್ಟಾಂಡಿಗೆ ಬಂದುಬಿಟ್ಟರು. ಸಾಮಾನ್ಯ ವೇಷದಲ್ಲಿ ನಂತರ ಗದಗ ಬಸ್ ಹಿಡಿದು ಊರು ಸೇರಿಕೊಂಡೆವು ಎಂದು ಹಿಂದಿನ ಘಟನೆಯನ್ನು ಹೇಳುತ್ತಾರೆ ಅಂಜಲಿದೇವಿ.

ಆಂಧ್ರ ಪ್ರದೇಶದ ಆದೋನಿಯ ಹತ್ತಿರದ ಸರಣಿಕಿ ಗ್ರಾಮಕ್ಕೆ 'ಬಾಣಸಿಗ ಭೀಮ' ನಾಟಕವಾಡಲು ಹೋದಂತಹ ಪ್ರಸಂಗವಿದು. ಸರಣಿಕಿ ಒಂದು ಕುಗ್ರಾಮ.ಯಾವ ನಾಗರಿಕ ಸೌಲಭ್ಯವೂ ಇರದ ಊರು. ವಿಜಯದಶಮಿಯ ದಿವಸ ಆ ಊರ ಗುಡ್ಡದ ಮಲ್ಲಯ್ಯನ ಜಾತ್ರೆ, ಊರಿಂದ ಎರಡು ಕಿ.ಮೀ. ದೂರದಲ್ಲಿ ಗುಡ್ಡದಲ್ಲಿ ಮಲ್ಲಯ್ಯನ ಗುಡಿಯಿರುವುದು. ಆದರೆ ಜಾತ್ರೆಯ ಸಡಗರ ಮಾತ್ರ ಊರಲ್ಲಿ. ಆ ಗ್ರಾಮಕ್ಕೆ ಬಂದಾಗ ಸಾಯಂಕಾಲ ೬ ಗಂಟೆಯಾಗಿತ್ತು. ಊರ ಹೊರಗೆ ಶಾಲೆಯಲ್ಲಿ ನಾಟಕದ ತಾಲೀಮಿನ ಮನೆಯಿತ್ತು. ಎಲ್ಲ ಕಲಾವಿದರೂ ನಮ್ಮನ್ನು ಎದುರುಗೊಂಡರು. ಬಾಣಸಿಗ ಭೀಮ ನಾಟಕದಲ್ಲಿನ ಎಲ್ಲ ಪಾತ್ರಧಾರಿ ಸ್ತ್ರೀಯರು ಗದುಗಿನವರು. ತಬಲಾ, ದಿಲ್‌ರುಬಾದವರೂ ಗದುಗಿನವರು. ಎಲ್ಲರಿಗೂ ಒಗ್ಗರಣಿ ಮಿರ್ಚಿಯ ಟಿಫಿನ್ನಾಯಿತು. ಆ ನಾಟಕದ ಇನ್ನೊಂದು ವೈಶಿಷ್ಟ್ಯವೆಂದರೆ, ಪುರುಷ ಪಾತ್ರಧಾರಿಗಳೆಲ್ಲಾ ಒಂದೇ ಕುಟುಂಬದವರು, ಅಣ್ಣತಮ್ಮಂದಿರು, ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳು. ಆ ಏಳು ಜನರೂ ಒಳ್ಳೆಯ ಕಲಾವಿದರೇ, ಎರಡು ತಾಸು ಪ್ರ್ಯಾಕ್ಟೀಸಾಯಿತು. ಜನರು ಬನ್ನಿ ಕೊಡತೊಡಗಿದರು. ಆಗ ಪುರುಷ ಕಲಾವಿದರಾದ ಅಣ್ಣತಮ್ಮಂದಿರನ್ನು ನಾಟಕದ ಮ್ಯಾನೇಜರ್ ಗುಡ್ಡದ ಮಲ್ಲಯ್ಯಗೆ ಕಾಯಿ ಒಡೆಸಲು ಒಟ್ಟಿಗೆ ಕರೆದೊಯ್ದರು.

ತಾಲೀಮಿನ ಮನೆಯಲ್ಲಿ ಹೆಣ್ಣು ಪಾತ್ರಧಾರಿಗಳ ಹಾಡಿನ ಪ್ರ್ಯಾಕ್ಟೀಸು ನಡೆದಿತ್ತು. ಆಗ ಇದಕ್ಕಿದ್ದಂತೆ ಶಿಳ್ಳು ಕೇಕೆ ಹಾಕುತ್ತ, ಎಗರಾಡುತ್ತ ಯಾರೋ ಅನಾಮಧೇಯ ಏಳು ಜನರು ಗಂಡುಗೊಡಲಿಯನ್ನು ಹಿಡಿದು ಕುಣಿಯುತ್ತ ಬಂದರು. "ಇವತ್ತು ಕೆಲಸಾತಲೆ, ಇವತ್ತು ನಮ್ಮಾಸೆ ಈಡೇರತಲೆ" ಎನ್ನುತ್ತಿದ್ದರು. ಅದೇನೆಂದು ಕಿಟಕಿಯಿಂದ ನೋಡಲು ಏಳೂ ಜನರ ಕೈಯಲ್ಲಿ ರಕ್ತತರ್ಪಣದ ಗಂಡುಗೊಡಲಿಗಳು. ಪಕ್ಕದಲ್ಲಿ ಉರಿಯುವ ಪಂಜುಗಳು, ಹಲಗೆಗಳು. ಕೆಲವೇ ನಿಮಿಷದಲ್ಲಿ ವಿಷಯ ಹೊರಬಿದ್ದಿತು.

ಸುಮಾರು ೧೫ ವರುಷಗಳಿಂದ ಸೇಡಿಟ್ಟ ಜನರು ಬೇಕೆಂದೇ ಒಂದೇ ಕುಟುಂಬದ ಅಣ್ಣ ತಮ್ಮಂದಿರನ್ನು ನಾಟಕ ಮಾಡಲು ತಿಳಿಸಿ ದ್ವೇಷ ಮರೆತು ಪ್ರೀತಿಯಿಂದ ಇರುವಂತೆ ನಟಿಸಿದ್ದರು. ಜಾತ್ರೆಯ ದಿನ ನಾಟಕದ ಪ್ರಾರಂಭಕ್ಕೆ

ಮುನ್ನ ಗುಡ್ಡದ ಮಲ್ಲಯ್ಯನಿಗೆ ಸಾಷ್ಟಾಂಗ ಹಾಕಲು ಕರೆದೊಯ್ದು ಸಾಷ್ಟಾಂಗ ಹಾಕಿದಾಗ, ಮೊದಲೇ ಸಿದ್ಧಪಡಿಸಿದ ಗಂಡುಗೊಡಲಿಯಿಂದ ಏಳು ತಲೆಗಳನ್ನು ತೆಗೆದಿದ್ದರು. ಕೊಡಲಿಯಿಂದ ರಕ್ತ ಸುರಿಯುತ್ತಿತ್ತು.

ಇತ್ತ ನಟಿಯರಿಗೆ ಮುಗಿಲೇ ಹರಿದು ಬಿದ್ದಂತಾಯಿತು. ಸಂಭಾವನೆ ಕೇಳುವುದಿರಲಿ, ತುಟಿ ಪಿಟಿಕ್ಕೆಂದರೂ ಅಪಾಯವೆಂದು ಎಲ್ಲಾ ಕಲಾವಿದರೂ ರಾತ್ರೋರಾತ್ರಿ ಸಾಮಾನು ಹೊತ್ತುಕೊಂಡು ಕತ್ತಲಲ್ಲಿ ನಡೆಯುತ್ತ ಅದೋನಿಯನ್ನು ಸೇರಿದರು. ನಂತರ ಯಾರದೋ ಪರಿಚಯದ ಮನೆಯಲ್ಲಿಳಿದುಕೊಂಡು ಸರಣಿಕೆ ಗ್ರಾಮದ ಘಟನೆಯನ್ನು ಹೇಳಿದರು. ಬೆಳಗ್ಗೆ ಬಸ್ ಹತ್ತಿ ತಮ್ಮೂರು ಸೇರಿಕೊಂಡರು. ಇದೂ ಸಂಭಾವನೆ ಚಾರ್ಜ್‌ರಹಿತ ನಾಟಕವಾಯಿತು. ಮರೆಯದ ಘಟನೆಯಲ್ಲಿ ಸೇರಿಕೊಂಡಿತು.

ಮಹಾರಾಷ್ಟ್ರದ ಕೊನೆಯ ಸರಹದ್ದಿನ ಗ್ರಾಮ ಲಚ್ಯಾಣವೆಂಬ ಕುಗ್ರಾಮದಲ್ಲಿ ಕುರುಕ್ಷೇತ್ರ ನಾಟಕಕ್ಕೆ ಬುಕ್ ಮಾಡಿದ್ದರು. ಅಲ್ಲದೆ ನಾಟಕ ಪ್ರದರ್ಶನಕ್ಕೆ ಒಂದು ದಿನ ಮುಂಚೆ ಪ್ರ್ಯಾಕ್ಟೀಸಿಗೆ ಬರಲೂ ತಿಳಿಸಿದ್ದರು. ಅಂಜಲಿದೇವಿಯವರ ಜೊತೆಗೆ ಮಗಳು ವಂದನಾ ಕೂಡ ನಾಟಕಕ್ಕೆ ಬುಕ್ ಆಗಿದ್ದಳು. ತಲಾ ಹನ್ನೆರಡು ನೂರು ರೂಪಾಯಿ ಸಂಭಾವನೆ ಮಾತಾಡಿದ್ದರು. ಇಬ್ಬರ ನಡುವೆ ೨೪೦೦ ರೂ. ಸಂಭಾವನೆ. ಪ್ರ್ಯಾಕ್ಟೀಸಿಗೆ ಹೋಗಲು ನೀಲಕಂಠಪ್ಪನವರು ತಾಯಿ ಮಗಳು ಇಬ್ಬರನ್ನೇ ಕಳುಹಿಸಿದರು. ಗದಗದಿಂದ ರೈಲು ಹತ್ತಿದರು. ಲಚ್ಯಾಣದಲ್ಲಿ ಸ್ಟೇಶನ್ ಇತ್ತು. ರಾತ್ರಿ ೧೦ ಗಂಟೆಯ ಸುಮಾರಿಗೆ ಅಲ್ಲಿಳಿದರು. ಗದಗ ಬಿಟ್ಟಾಗ ಜಿಟಿಜಿಟಿ ಮಳೆ ಪ್ರಾರಂಭವಾಗಿತ್ತು. ಲಚ್ಯಾಣ ತಲುಪುವದರೊಳಗೆ ಕರೆಂಟ್ ಹೋಗಿತ್ತು. ಮಳೆಯೂ ಜೋರಾಗಿತ್ತು. ಸ್ಟೇಶನ್‌ನಲ್ಲಿಳಿದ ತಾಯಿ ಮಗಳಿಬ್ಬರೂ ಕಂಗಾಲಾದರು. ಅಲ್ಲಿ ಯಾರೂ ಇಲ್ಲ.

'ಯಾರದಿರ್‍ರೆಪಾ' ಎಂದು ಕೂಗಿದರು ಅಂಜಲಿದೇವಿ. ಯಾವ ಉತ್ತರವೂ ಬರಲಿಲ್ಲ. ಹಾಗೆ ಮೂರ್‍ನಾಲ್ಕು ಸಲ ಕೂಗಲು ದೂರದಲ್ಲಿ ಯಾರೋ ಒಬ್ಬ 'ಓ' ಎಂದ. ಬೀಡಿ ಸೇದುತ್ತ ಅದೇ ಬೆಳಕಲ್ಲಿ ಹತ್ತಿರ ಬಂದ. ಆಗ ಅಂಜಲಿದೇವಿಯವರು, 'ಕುರುಕ್ಷೇತ್ರ ನಾಟಕದವರು ಯಾರೂ ಬಂದಿಲ್ಲೆನಪಾ', ಎಂದಾಗ ಆ ಅಪರಿಚಿತ 'ಇಷ್ಟೊತ್ತು ಇಲ್ಲೇ ಇದ್ರು, ಎಂಟೂ ಮೂವತ್ತರ ತನಕ ಕಾದು ಹೋದ್ರು' ಎಂದ. ಹಾಗಂದ್ರ ನಮ್ಮನ್ನ ತಾಲೀಮಿನ ಮನಿಗೆ ಬಿಡ್ರೆಪಾ ಎಂದರು ತಾಯಿ ಮಗಳು. ಕೂಡಲೇ ಅಪರಿಚಿತ ಇನ್ನೊಬ್ಬನನ್ನು ಕೂಗಿ ಕರೆದ. ಇಬ್ಬರೂ ಬೀಡಿ ಹಚ್ಚಿದರು. 'ಸ್ವಲ್ಪ ಬ್ಯಾಗು ತಗೋಪಾ' ಎಂದರು ಅಂಜಲಿದೇವಿ. 'ನಾವ್ಯಾಕ ತಗೊಳ್ಳೂನ, ನಾಟಕಕ್ಕೆ ಹಾಂಗಾ ಬಂದಿರೇನು ರೊಕ್ಕಾ ತಗೋತಿರಿ, ನೀವಾ ಹೊತುಗೊಳ್ರಿ, ನಾವೇನೂ ನಾಟಕದವರಲ್ಲ' ಎಂದು ಮುಲಾಜಿಲ್ಲದೆ ಹೇಳಿದರು. ತಾಯಿ ಮಗಳು ತಲಾ ಒಂದೊಂದು ಬ್ಯಾಗ್ ಹೊತ್ತು ಕತ್ತಲಲ್ಲಿ ನಡೆದರು. ಊರಲ್ಲಿ ಕರೆಂಟ್ ಇರಲಿಲ್ಲ. ಮಿಂಚಿದಾಗ ಅಲ್ಲಲ್ಲಿ ದಾರಿ ಕಾಣುತ್ತಿತ್ತು. ಒಂದೆರಡು ಫರ್ಲಾಂಗ್ ನಡೆಯುವುದರೊಳಗೆ ಊರ ಹೊರಗೆ ಸಗಣಿ ಸಾರಿಸಿದ ಮನೆಯೊಂದಕ್ಕೆ ಹೋಗಿ ಅಪರಿಚಿತರು ಕದಾ ತಟ್ಟಿದರು. ಆಗ ರಾತ್ರಿ ೧೦.೩೦ ಆಗಿತ್ತು. ಮಳೆಯ ನೀರಿನಲ್ಲಿ ಒದರುವ ಕಪ್ಪೆಗಳ ಸ್ವರ ಜೋರಾಗಿ ಕೇಳುತ್ತಿತ್ತು. ಕದಾ ತಟ್ಟಿದ್ದೇ ತಡ ಕುಡಿದ ಅಮಲು ತಲೆಗೇರಿದ ನಾಲ್ಕು ಜನರು ಪೇಟಿಯ ಮೇಲೆ ಬಾಟಲ್ ಇಟ್ಟುಕೊಂಡೇ ಕದವನ್ನು ತೆರೆದರು.

ಮದ್ಯದ ವಾಸನೆ, ಸಿಗರೇಟ್ ವಾಸನೆ ಘಮ್ಮಂದು ಮೂಗಿಗೆ ಬಡಿಯಿತು. ತಾಯಿ ಮಗಳಿಬ್ಬರೂ ಒಳಗೆ ಹೋದರು. ಆಗಲೇ ಆಕಾಶದಲ್ಲಿ ಅಡ್ಡಾಡುತ್ತಿದ್ದ ನಾಟಕದ ಮಾಸ್ತರ್ ಕಲಾವಿದರನ್ನು ನೋಡಿದ ಕೂಡಲೇ ಹಾರ್ಮೋನಿಯಂ ಮೇಲೆತ್ತಿದ. 'ಹೂಂ ನಾಟಕದ ಪ್ರ್ಯಾಕ್ಟೀಸ್ ಹಚ್ಚೂನ್ರಿ' ಎಂದ. ಮಗಳು ವಂದನಾ ವಿಪರೀತ ಹಸಿವಾಗಿದೆಯಮ್ಮ ಎಂದಳು. 'ಇರು ನಾಲ್ಕು ಪದಾ ಹಾಡಿದ ಮ್ಯಾಕ ಕೇಳೂನು, ಅವರಾ ತಂದು ಕೊಡ್ತಾರೆ' ಎಂದು ಮಗಳ ಹಸಿವೆಯನ್ನು ಕಡೆಗಣಿಸಿ ಹಾಡಲು ಸಿದ್ಧಳಾದಳು ಅಂಜಲಿದೇವಿ. ಆಗ ತಾಲೀಮಿನ ಮನೆಯಲ್ಲಿ ತಬಲಾ ಮಾಸ್ತರನೂ ಇದ್ದ. ಎಲ್ಲರೂ ಕಂಠಪೂರ್ತಿ ಕುಡಿದಿದ್ದರು. ರಾಗ ಎಲ್ಲೊ, ತಾಳ ಎಲ್ಲೋ, ಸೂರು ಎಲ್ಲೂ ಎರಡು ಪದಾ ಹಾಡುವುದರೊಳಗೆ ಸಾಕುಬೇಕಾಯಿತು. ಮೊದಲೇ ಕುಡಿದ ಮಂದಿ. ಬೆಳಗಿನ ವರೆಗೂ ಹಾಡಿದರೆ ಸಾಕೆನ್ನಲಾರರು, ಊಟ ತಿಂಡಿಯ ಸುದ್ದಿಯಂತೂ ಇಲ್ಲವೇ ಇಲ್ಲ, ಆಗ ರಾತ್ರಿ ಹನ್ನೊಂದು ಗಂಟೆ ದಾಟಿತ್ತು.

'ನಾಟಕದ ಹ್ಯಾಂಡ್‌ಬಿಲ್ ಎಲ್ಲೈತ್ರಿ' ಕೇಳಿದರು ಅಂಜಲಿದೇವಿ. 'ಇಲ್ಲೇ ಅದ ತಗೊಳ್ರಿ' ಎಂದು ಎಂಟತ್ತು ಮಡಿಕೆ ಮಾಡಿ ಜೇಬಿನಲ್ಲಿಟ್ಟುಕೊಂಡಂತಹ ಭಿತ್ತಿಪತ್ರ ಕೊಟ್ಟ ಮಾಸ್ತರ್, ಅದನ್ನು ನೋಡಿ ಅಂಜಲಿದೇವಿ ಗಾಬರಿಯಾದರು. ನಾಟಕ ನಾಳೆ ಇದೆಯೆಂದು ಒಂದು ದಿನ ಮುಂಚಿತವಾಗಿ ಪ್ರ್ಯಾಕ್ಟೀಸಿಗೆ ಬಂದಿದ್ದರು. ಅವರು ಬುಕ್ ಮಾಡುವಾಗಲೂ ಕೂಡ ಈ ದಿನಾಂಕಗಳನ್ನೇ ಕ್ಯಾಲೆಂಡರದಲ್ಲಿ ಬರೆದುಬಂದಿದ್ದರು. ಆದರೆ ಇಲ್ಲಿ ಹ್ಯಾಂಡ್‌ಬಿಲ್ ನೋಡಿದರೆ ಇನ್ನೂ ಮೂರು ದಿನದ ನಂತರ ನಾಟಕವಿದೆ. ಸಂಕೋಚದಿಂದ ಅಂಜಲಿದೇವಿ 'ಅಲಿ ಇದೇ ನಾಟಕ ಇರೋದು ಯಾವಾಗ? ನಮ್ಮನ್ನು ಪ್ರ್ಯಾಕ್ಟೀಸಿಗೆ ಕರೆಸಿದ್ದು ಯಾವಾಗ' ಅಂದರು. "ಈಗೇನಾತ್ರಿ ಮೂರು ದಿನ ಪ್ರ್ಯಾಕ್ಟೀಸು ಮಾಡಿ, ನಾವೇನು ಕಲ್ಲು ಕೊಡಾಂಗಿಲ್ಲ ರೊಕ್ಕಾ ಕೊಡ್ತೀವಿ. ನೀವು ಬೆಳ್ತನಕೂ ಹಾಡ್ರಿ ಬಾಯಾರ" ಅಂದಾಗ ಮಾಸ್ತರನನ್ನು ಶಪಿಸಲಿಲ್ಲ. ತಪ್ಪು ನಮ್ಮದೆ, ಒಟ್ಟಾರೆ ನಾವು ಪ್ರ್ಯಾಕ್ಟೀಸಿಗೆ ಬರಬಾರದಾಗಿತ್ತು ಎಂದು ಮಗಳಿಗೆ ಸಮಾಧಾನ ಮಾಡಿ, ಆಗಲ್ರಿ ನಾವು ಬೆಳ್ತನಕಾನೂ ಪ್ರ್ಯಾಕ್ಟೀಸು ಮಾಡೂನು, ಈಗಾರ ಪ್ರಯಾಣ ಮಾಡಿ ಬಂದೀವಲ್ಲ. ಒಂದೀಟು ಸುಸ್ತು ಅದಂಗಾಗ್ಯೆತಿ ಒಂದರ್ಧ ಗಂಟೆ ಸುಧಾರಿಸಿಕೊಳ್ಳಿವಿ ಎಂದರು. "ಸರಿ ಹಾಂಗಾ ಮಾಡ್ರಿ" ಎಂದ ಮಾಸ್ತರ ಕಣ್ಣುಗಳು. ಆಗಲೇ ಅರ್ಧ ಮುಚ್ಚಿಕೊಂಡಿದ್ದವು.

ಒಂದು ಮೂಲೆಯಲ್ಲಿ ತಾಯಿ ಮಗಳಿಬ್ಬರೂ ಸುಮ್ಮನೆ ಕುಳಿತರು. ಆಗ ವಂದನಾ 'ಹ್ಯಾಂಗ ಮಾಡೂನಬೆ ಯವ್ವಾ" ಎಂದಾಗ ಅಂಜಲಿದೇವಿ ಏನೂ ಮಾತಾಡಬೇಡವೆಂದು ಸನ್ನೆ ಮಾಡಲು ಹಾಗೇ ಅರ್ಧ ಗಂಟೆ ಮೂಲೆಯಲ್ಲಿ ಕುಳಿತರು. ಪೇಟಿ ಬಾರಿಸಲು ಕುಳಿತ ಮಾಸ್ತರ ಪೇಟಿಯ ಮೇಲೆ ಮಲಗಿದ್ದ. ತಬಲಾ ಬಾರಿಸಲು ಕುಳಿತವ, ಅಲ್ಲೇ ಮಲಗಿದ್ದ. ಇಬ್ಬರೂ ತಮ್ಮ ತಮ್ಮ ಲೋಕ ಸೇರಿಕೊಂಡಿದ್ದರು. ಇನ್ನು ತಡ ಮಾಡುವುದು ಬೇಡವೆಂದು ತಲಾ ಒಂದೊಂದು ಭಾರವಾದಂತಹ ಬ್ಯಾಗಗಳನ್ನು ಹೊತ್ತು ಕತ್ತಲಲ್ಲೇ ಸ್ಟೇಶನ್ ಕಡೆಗೆ ನಡೆದರು.

ವಂದನಾ '"ಯವ್ವಾ ಕತ್ತಲದಾಗ ಹೆದರಿಕೆ ಆಗತೈದೆ" ಎನ್ನಲು ಅಲ್ಲಿ ಕುಡುಕರ ಕೈಯಾಗ ಇಡೀ ರಾತ್ರಿ ಕಳೆಯೋದು ಇದಕ್ಕಿಂತಲೂ ಅಪಾಯ. ಸುಮ್ನ ಅಜ್ಜನ್ನ ನೆನೆಸಿ ನಡಿ, ಎಂದು ಧೈರ್ಯ ತಂದುಕೊಂಡು ಅಪರಿಚಿತ ಸ್ಥಳದಲ್ಲಿ, ಅಮವಾಸಿ ಕತ್ತಲಲ್ಲಿ ಜಿಟಿಜಿಟಿ ಮಳೆಯಲ್ಲಿ ಸ್ಟೇಶನ್‌ಗೆ ಬಂದರು. ಅಲ್ಲಿ ಯಾವ ಜನರೂ ಇಲ್ಲ. ಒಂದೇ ಒಂದು

ತಗಡಿನ ಶೆಡ್ ಬಿಟ್ಟರೆ ಬೇರೆ ಏನೂ ಇಲ್ಲ. ಆದರೆ ಮರಳಿ ಹೋಗಲು ಟ್ರೇನ್‌ಗೆ ಚಾರ್ಜಿಲ್ಲ. ನೀಲಕಂಠಪ್ಪನವರು ಒಂದೇ ಪ್ರಯಾಣಭತ್ಯೆಯನ್ನು ಕೊಟ್ಟು ಕಳಿಸಿದ್ದರು ಹೇಗೂ ನಾಳೆಯೇ ನಾಟಕವೆಂದು. ಇಲ್ಲಿನ ಪರಿಸ್ಥಿತಿ ಅಲ್ಲಿ ಹೇಗೆ ತಿಳಿಯಬೇಕು ? 'ಹಾಂಗಾ ಗಾಡಿ ಹತ್ತೂನಬೆ ಆದದ್ದಾಗಲಿ' ಎಂದು ವಂದನಾ ಹೇಳಿದಳು. ಟಿ.ಸಿ. ಬಂದ್ರ ಮರ್ಯಾದೆ ಹೋಗುತ್ತದೆ ಎಂದರು ಅಂಜಲಿದೇವಿ. ಹಂಗೇನಾದರೂ ಟಿ.ಸಿ. ಬಂದ್ರ ಕೈಯಾಗಿನ ಉಂಗ್ರ ಕೊಡೂನು, ಬೆಳಿಗ್ಗೆ ಹಣ ತಂದು ಕೊಟ್ಟು ಬಿಡಿಸಿಕೊಂಡು ಹೋಗೂನು, ಎಂದ ಮಾತು ಅಂಜಲಿದೇವಿಯವರಿಗೆ ಸರಿಯೆನಿಸಿತು.

ರಾತ್ರಿ ೧.೩೦ ಕ್ಕೆ ರೈಲು ಬಂದಿತು. ತಾಯಿ ಮಗಳಿಗೆ ಹೋದ ಉಸಿರು ತಿರುಗಿದಂತಾಯಿತು. ಅವಸರವಾಗಿ ರೈಲು ಏರಿದರು. ಗದುಗಿನ ತನಕ ಟಿ.ಸಿ. ಬರಲಿಲ್ಲ, ಬೆಳಿಗ್ಗೆ ೬ ಗಂಟೆಗೆ ಗದಗ ತಲುಪಿದರು. ರೈಲು ಇಳಿದು ಭರಭರನೆ ನಡೆದರು. ತಾವು ವಾಸಿಸಿದ ಊರು. ಮರ್ಯಾದೆ ಹೋದೀತೆಂಬ ಭಯ. ಹಿಂದಿನ ಗೇಟು ಹತ್ತಿರದಲ್ಲೇ ಇತ್ತು. ಅದರಿಂದ ಹೊರಬಂದರು. ತಾಯಿ ಮಗಳಿಬ್ಬರು ಪ್ರ್ಯಾಕ್ಟೀಸು ಮುಗಿಸಿ ಹಾಗೇ ಬಂದಿದ್ದಾರೆಂದುಕೊಂಡು ನೀಲಕಂಠಪ್ಪ "ನಾಟಕ ಮುಂದಕ್ಕೆ ಹಾಕ್ಯಾರೇನು, ಮಂದಿ ಹ್ಯಾಂಗ ಆ ಕಡಿಗೆ" ಎಂದು ಪ್ರಶ್ನಿಸಲು ಅದೊಂದು ದೊಡ್ಡ ಕತೆ ಮಾರಾಯ. ಮೊದಲು ಸ್ನಾನ, ಟಿಫಿನ್ ಮುಗಿಸಿ ಹೇಳಾಕ ಕುಂದ್ರತೀವಿ ಎಂದರು ಅಂಜಲಿದೇವಿ. ಕೊನೆಗೆ ಆ ನಾಟಕಕ್ಕೆ ಇವರು ಹೋಗಲೇ ಇಲ್ಲ. ಅವರೂ ಕೂಡ ಕರೆಯಲು ಬರಲಿಲ್ಲ. ಅದೇನು ನಾಟಕ ಇತ್ತೋ ಇಲ್ಲೋ ಬೇಕಂತಲೇ ಹಾಗೆ ಮಾಡಿದ್ದರೋ ನಮಗರ್ಥವಾಗಲೇ ಇಲ್ಲ, ಎನ್ನುತ್ತಾರೆ.

ಪಂಚಾಕ್ಷರ ಗವಾಯಿಗಳ ಶಿಷ್ಯರೂ, ಸಂಗೀತ ನಿರ್ದೇಶಕರೂ, ಗಾಯಕರೂ ಕೆಲವು ಕಾಲ ನಾಟಕ ತಂಡ ಕಟ್ಟಿದಂತಹ ಗುರುಸ್ವಾಮಿ ಕಲಿಕೇರಿಯವರು ಒಳ್ಳೆಯ ಪ್ರವಚನಕಾರರು. ತಮ್ಮ ಸ್ವಂತ ಊರಾದ ಕಲಿಕೇರಿಯನ್ನು ಹೆಸರಿನ ಮುಂದೆ ಸೇರಿಸಿಕೊಂಡು ಗದುಗಿನಲ್ಲಿಯೇ ವಾಸವಾಗಿದ್ದಾರೆ. ಕಲಿಕೇರಿ ತಾಳೀಕೋಟೆಯಿಂದ ನಾಲ್ಕೈದು ಕಿ.ಮಿ. ದೂರವಿರುವ ಸಣ್ಣ ಹಳ್ಳಿ, ಈ ಊರಿನಲ್ಲಿಯ ಯಾವುದೋ ಒಂದು ಉತ್ಸವದ ಸಲುವಾಗಿ ಅಲ್ಲಿನ ಕಲಾವಿದರು ಒಂದು ಪೌರಾಣಿಕ ನಾಟಕ ಮಾಡಿದ್ದರು. ಯೋಗ್ಯ ನಟಿಯರನ್ನು ಹುಡುಕಿ ಕೊಡುವ ಜವಾಬ್ದಾರಿಯನ್ನು ಗುರುಸ್ವಾಮಿಯವರಿಗೆ ವಹಿಸಿದ್ದರು. ಅದರಂತೆ ಅಂಜಲಿದೇವಿಯವರನ್ನು ಬುಕ್ ಮಾಡಿ ಕಳಿಸಿದ್ದರು. ಆ ಊರಿಗೆ ಬಸ್ಸಿನ ಸೌಕರ್ಯವಿರಲಿಲ್ಲ, ಕಚ್ಚಾ ರಸ್ತೆ ಬೇರೆ. ತಾಳಿಕೋಟೆಯಿಂದ ಚಕ್ಕಡಿಯಲ್ಲಿ ಕರೆದೊಯ್ದರು. ನಾಟಕದ ಪ್ರ್ಯಾಕ್ಟೀಸು ಜೋರಾಗಿ ನಡೆದಿತ್ತು. ಇಡೀ ಊರಿಗೆ ಊರೇ ಪ್ರ್ಯಾಕ್ಟೀಸು ನೋಡಲು ನೆರೆದಿತ್ತೇನೋ ಎನ್ನುವಂತಿತ್ತು ಜನಸ್ತೋಮ, ತಾಲೀಮಿನ ರೂಮಿನೊಳಗೆ, ಹೊರಗೆ, ಮಾಳಿಗೆಯ ಮೇಲೆ, ಮುಂದೆ ಇದ್ದ ಗಿಡದ ಕೊಂಬೆಯ ಮೇಲೆ ಏರಿ ಕುಳಿತು ಪ್ರ್ಯಾಕ್ಟೀಸು ನೋಡಿ ಆನಂದಿಸುತ್ತಿದ್ದರು.

ಆ ಊರಿನಲ್ಲಿ ಎರಡು ಪಂಗಡಗಳು. ಯಾವುದೋ ಹಳೆಯ ವಿವಾದವನ್ನು ನೆನೆದು ಕಾಲು ಕೆದರಿ ಒಂದು ಪಂಗಡದವರು ಜಗಳ ತೆಗೆದರು. ಜಗಳ ಬೆಳೆದು ದೊಡ್ಡದಾಗಿ ಕೊಲೆಯೊಂದರಲ್ಲಿ ಪರ್ಯವಸನವಾಯಿತು. ಕೆಲವೇ ಗಂಟೆಗಳಲ್ಲಿ ಉತ್ಸವದ ವಾತಾವರಣವೆಲ್ಲಾ ಭಯದ ಭೀಕರತೆಯ ನೆರಳಲ್ಲಿ ನರಳತೊಡಗಿತು. ಬಣ್ಣ ಬಣ್ಣದ

ಸೀರೆಯನ್ನುಟ್ಟ ಹೆಂಗಳೆಯರ ದಂಡು ಕಾಣದಾಯಿತು. ಎಲ್ಲೆಡೆಯಲ್ಲಿಯೂ ಸ್ಮಶಾನ ಮೌನವಾವರಿಸಿತು. ರಾತ್ರಿಯ ಹೊತ್ತಿಗೆ ಪೋಲೀಸರ ದಂಡು ದೌಡಾಯಿಸಿತ್ತು.

ನಾಟಕಕ್ಕೆ ಹೋದ ಕಲಾವಿದೆಯರಿಗೆ, ಸಂಗೀತಗಾರರಿಗೆ ದಿಗಿಲುಂಟಾಯಿತು. ಇಂಥ ಪರಿಸ್ಥಿತಿಯಲ್ಲಿ ನಾಟಕವಾಗುವುದಿಲ್ಲ. ರಾತ್ರಿಯೇ ಊರು ಬಿಡಬೇಕೆಂದು ಹಾತೊರೆದರು. ಆ ನಾಟಕದ ಮ್ಯಾನೇಜರ್ ಊರಲ್ಲಿನ ಪಂಚರಲ್ಲೊಬ್ಬ, ಅವನೂ ಒಂದು ಪಂಗಡಕ್ಕೆ ಸೇರಿದವನು. ಆತ ಪ್ರತಿಷ್ಠೆಯ ಅಹಂಕಾರದ ಮೂರ್ತಿಯಾಗಿದ್ದ. ಅಂಜಲಿದೇವಿಯವರಿಗೆ ಮಾರನೆಯ ದಿನವೇ ಸಿಂಧನೂರ ತಾಲೂಕಿನ ತುರ್ವಿಹಾಳದಲ್ಲಿ ಚಿತ್ರಾಂಗದಾ ನಾಟಕವಿತ್ತು. ತಪ್ಪಿಸುವಂತಿಲ್ಲ. ದಯವಿಟ್ಟು ನಮ್ಮನ್ನು ಕಳಿಸಿಕೊಡಿರೆಂದು ಅಂಗಲಾಚಿದರು. ಇವರು ಕೇಳಿದ್ದೇ ತಡ ಮ್ಯಾನೇಜರನ ಪಿತ್ತ ನೆತ್ತಿಗೇರಿತು.

"ನೀವು ಎಲ್ಲಿಗೆ ಹೋಗೀರಿ? ಇವತ್ತು ಇಲ್ಲೇ ಇರಿ, ನಾಳಿಗೆ ನಾಟಕ ಮುಗಿಸಿಕೊಂಡು ಹೋಗುವಂತ್ರಿ, ಇವತ್ತು ರಾತ್ರಿ ಮೀಟಿಂಗ್ ಮಾಡಿ ತೀರ್ಮಾನ ಮಾಡ್ತೀವಿ, ಅಲ್ಲಿಯಮಟ ಜಾಗ ಕದಲುವಾಂಗಿಲ್ಲ" ಎಂದು ಗುಡುಗಿದ. ಅವನ ಗುಡುಗಿಗೆ ಅಂಜಲಿದೇವಿ ಮುದುಡಿಹೋದರು. ಉಸಿರು ಬಿಟ್ಟರ ಶಬ್ದವಾಗುವುದೇನೋ ಎಂಬತ್ತಿತ್ತು. ಆಗಲೇ ನಾಟಕದ ತಾಲೀಮಿನ ಕೋಣೆಯ ಮಗ್ಗುಲಲ್ಲೇ ಮೀಟಿಂಗ್ ನಡೆಯಿತು. ಅದು ರಾತ್ರಿ ೧.೩೦ ರ ತನಕ ನಡೆಯಿತು. ಯಥೇಚ್ಛವಾಗಿ ಸಿಂದಿ, ಸರಾಯಿ ಪೂರೈಕೆಯಾಯ್ತು, ಸಭೆ ರಂಗೇರಿತು, ನಂತರ ಗುಂಗೇರಿತು. "ಏನೇ ಆಗಲಿ ಆ ನನ್ಮಕ್ಕಳಿಗೆ ಹೆದರಿ ನಾವು ನಾಟಕ ನಿಲ್ಲಿಸಬಾರದು. ನಾಳಿಗೆ ಆಡೇ ತೀರೂನು" ಎಂಬ ಗಟ್ಟಿ ನಿರ್ಧಾರವಾಯಿತು. ಮಾತು ಎಲ್ಲೆಲ್ಲೋ ಹೋಯಿತು. ಆಗಲೇ ಮತ್ತೇರಿದವರು ಮತ್ತೆ ಕುಡಿಯಬೇಕೆಂದವರು, ಆಕಾಶದಲ್ಲಿ ತೂರಾಡುವವರು, ಏನೆಲ್ಲಾ ಮಾತಾಡಿದರು. ಅದರಲ್ಲೊಬ್ಬ "ನಾಳಿಗೆ ಬೆಳಿಗ್ಗೆ ನಟಿಯರೆಲ್ಲಾ ಹೋದ್ರ ಹ್ಯಾಂಗ" ಎಂದ

"ಅದ್ಯಾಂಗ ಹೋಗ್ತಾರಲೆ ಏನಂತ ತಿಳಿದಾರ ಅವರು."

"ಅದಲ್ಲಾ ಯಾಕ, ನಾಟಕದ ಮನಿಗೆ ಕೀಲಿ ಜಡಿರಲೆ" ಎಂದು ದೊಡ್ಡ ಕೀಲಿ ಹಾಕಿ ಎಲ್ಲರನ್ನೂ ಕೂಡಿ ಹಾಕಿ ತಮ್ಮ ತಮ್ಮ ಮನೆಗೆ ಹೋದರು.

ಇತ್ತ ತಾಲೀಮ ಮನೆಯೊಳಗೆ ವಿಪರೀತ ಸೊಳ್ಳೆಗಳು, ಇದ್ದ ಒಂದು ಕಿಟಕಿಯನ್ನು ಮುಚ್ಚಿದ್ದರು. ತೆರೆದರೆ ಇನ್ನೇನಾಗುವುದೋ ಎಂಬ ಭಯ. ಕೆಲವರು ನಿದ್ದೆಗೆ ಮಾರುಹೋದರು. ಆದರೆ ಅಂಜಲಿದೇವಿ ನೀಲಕಂಠಪ್ಪನವರಿಗೆ ನಿದ್ರೆ ಬರಲಿಲ್ಲ. "ಹ್ಯಾಂಗ ಮಾಡೂನ್ರಿ, ನಾಳೆ ದಿನ ನಾಟಕ ತಪ್ಪತೈತಲ್ಲಾ" ಅಂದಳು. "ಬೆಳಗಾಗಲಿ ನೋಡೂನು. ಪಂಚಾಕ್ಷರ ಅಜ್ಜ ಹ್ಯಾಂಗ ಮಾಡ್ತಾನೋ ಹಾಂಗಾಗ್ಲಿ" ಎಂದು ಸಮಾಧಾನ ಮಾಡಿದರು. ಅಂಜಲಿದೇವಿಯವರಿಗೆ ಸಮಾಧಾನವಾಗಲಿಲ್ಲ. ತುರ್ವಿಹಾಳದ ನಾಟಕ ತಪ್ಪಿದರೆ ವೃತ್ತಿಗೆ ಕೆಟ್ಟ ಹೆಸರು ಬರುತ್ತದೆ. ಇಲ್ಲಿ ನಾಳೆಯ ದಿನವೂ ನಾಟಕವಾಗಲಾರದು. ಪೋಸ್ಟ್ ಮಾರ್ಟಮ್, ಪೋಲೀಸು ಇಂಥದರಲ್ಲಿ ನಾಟಕ ಹೇಗೆ ಆಡುತ್ತಾರೆ? ಬಹುಶಃ ೧೪೪ ನೇ ಕಲಮು ಜಾರಿಯಾಗಬಹುದು ಎಂದೆಲ್ಲಾ ಯೋಚಿಸುತ್ತ ರಾತ್ರಿಯಿಡೀ ನಿದ್ದೆಗೆಟ್ಟು

ಬೆಳಕು ನೋಡಿದರು, ಅದು ಕಿಟಕಿಯ ಕಿರಣದ ಮೂಲಕ ಬೆಳಗಾಗಿ ಗಂಟೆ ಆರಾಯಿತು, ಏಳಾಯಿತು. ಎಂಟಾಯಿತು. ಕೀಲಿ ಜಡಿದು ಹೋದಂತಹ ಪಂಚರ ಪತ್ತೆಯಿಲ್ಲ. ರಾತ್ರಿ ಕೊಂಚ ಹೆಚ್ಚಿಗೆ ಕುಡಿದು ತಮ್ಮದೇ ಲೋಕದಲ್ಲಿದ್ದು ಕೌದಿಯಲ್ಲಿ ಬಿದ್ದಿದ್ದರು. ಕಿಟಕಿ ತೆಗೆದು ಹೊರಗಡೆ ಇಣುಕಿದರು ನೀಲಕಂಠಪ್ಪ, ಯಾರೋ ಒಬ್ಬ ಯಜಮಾನ ಬಹಿರ್ದೆಸೆಗೆ ಹೋಗಿ ಬರುತ್ತಿದ್ದ. ಅವರನ್ನು ಕೂಗಿ ಕರೆದು, ತಮಗಾದ ಪರಿಸ್ಥಿತಿಯನ್ನು ಹೇಳಿ ದಯವಿಟ್ಟು ಬಾಗಿಲು ತೆಗೆಯಿರೆಂದು ವಿನಂತಿಸಿಕೊಂಡರು.

"ಹುಚ್ಚಸೂಳೇಮಕ್ಕಳ ಸಹವಾಸ, ಮೊದಲೇ ಯಡವಟ್ಟು ಮುಂಡೇಮಕ್ಕಳು, ನಂತಾಕ ಕೀಲಿ ಇಲ್ಲ" ಎಂದು ಹೇಳಿದರು ಯಜಮಾನ. "ಹ್ಯಾಂಗಾನ ಮಾಡಿ ಈ ಕೋಣೆಯಿಂದ ನಮ್ಮನ್ನು ಬಿಡುಗಡೆ ಮಾಡಿ, ನಿಮಗೆ ಪುಣ್ಯ ಬರುತ್ತೆ."

''ತೆಗಿತಿದ್ದೆ, ನಂತಾಕ ಕೀಲಿ ಇಲ್ವಲ್ರಿ", "ಹ್ಯಾಂಗಾರ ಮಾಡ್ರಿ, ನೀವಾ ನಮ್ಮ ಪಾಲಿನ ದೇವರು." ಕಲಾವಿದರ ಈ ವಿನಂತಿಗೆ ಯಜಮಾನನ ಮನಸ್ಸು ಕರಗಿತು, ಮರುಗಿತು. ಕೂಡಲೇ ಪಕ್ಕದಲ್ಲಿದ್ದ ಕಲ್ಲೊಂದನ್ನು ಎತ್ತಿ ಕೀಲಿಗೆ ಹೊಡೆಯತೊಡಗಿದ. ಕೀಲಿ ಮುರಿಯಿತು. ಬಾಗಿಲು ತೆರೆದಾಗ ಕಲಾವಿದರಿಗೆಲ್ಲಾ ಆನಂದವಾಯಿತು. ನಾಟಕಕ್ಕೆ ಬಂದು ಸೆರೆಯಾಳುಗಳಾಗಿದ್ದವರೆಲ್ಲಾ ಸ್ವತಂತ್ರರಾದರು. ಇದರಿಂದ ಅಂಜಲಿದೇವಿಯವರಿಗೆ ಸೆರೆಮನೆಯ ಅನುಭವವಾಯಿತಂತೆ. ಕೋಣೆಯಿಂದ ಹೊರಬಂದುದೇ ತಡ ಮರಣದಂಡನೆಗೆ ಗುರಿಯಾದ ಕೈದಿಗಳು ಬಿಡುಗಡೆ ಹೊಂದಿದವರಂತರಾಗಿ ತಮ್ಮ ತಮ್ಮ ಬ್ಯಾಗುಗಳನ್ನು ಹೊತ್ತು ಮೈಯಲ್ಲಿನ ಇಡೀ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಮೂರು ಕಿಲೋಮೀಟರ್ ದಾರಿಯನ್ನು ಓಡಿದರು. ಅಂತೂ ಇಂತೂ ಮೇನ್ ರೋಡಿಗೆ ಬಂದರು. ಲೋಡ್ ಮಾಡಿದ ಲಾರಿಯೊಂದು ಬಂತು. ಎಲ್ಲರೂ ಕೈಮಾಡಿ ನಿಲ್ಲಿಸಿದರು. ಹೇಗಾದರೂ ಸರಿ ಮೊದಲು ಆ ಜಾಗವನ್ನು ಆದಷ್ಟು ಬೇಗ ಖಾಲಿ ಮಾಡಬೇಕಿತ್ತು. ಎಲ್ಲರೂ ಜಾಗ ಇರದಿದ್ದರೂ ಕ್ಯಾಬಿನಿನೊಳಗೆ ಏರಿದರು. ಲಾರಿ ೬೦ ಕಿ.ಮೀ. ಸ್ಪೀಡಿನಲ್ಲಿದ್ದಾಗಲೂ ಅಂಜಲಿದೇವಿಯವರು ಒಳಗೊಳಗೇ ದಿಗಿಲುಗೊಂಡು, ಲಾರಿಯಿಂದ ಕಿಟಕಿಯಿಂದ ಹಿಂದೆ ನೋಡಿ ಅವರು ಬಂದಿಲ್ಲವೆಂದು ಸಮಾಧಾನ ವ್ಯಕ್ತಪಡಿಸಿದರು. ಆದರೂ ಅವರು ಬೆನ್ನತ್ತಬಹುದೆಂಬ ಶಂಕೆ ಮಾತ್ರ ಒಳಗೊಳಗೇ ಇತ್ತು.

ಈ ಘಟನೆಯನ್ನು ಹೇಳುವಾಗ ಈಗಲೂ ನಡುಕ ಹುಟ್ಟುತ್ತದೆಂದು ಹೇಳುತ್ತಾರೆ. ಎಂತೆಂತಹ ಊರು? ಎಂಥ ಜನ? ಅಬ್ಬಾ ನೆನಸಿಕೊಂಡರೆ ಮೈ ಜುಂ ಎನ್ನುತ್ತದೆ. ಹಿಂದೆ ನಾವು ಅಷ್ಟೆಲ್ಲಾ ಊರುಗಳನ್ನು ಹೇಗೆ ತಿರುಗಿದೆವೋ ಹೇಗೆ ಬದುಕಿ ಬಂದವೋ ಎನ್ನುತ್ತಾರೆ. ಅಂತಹ ಜನರು ಹಲವರಿರಬಹುದು. ಕೆಲವರಾದರೂ ಕಲಾಪ್ರೇಮಿಗಳು, ಕಲಾ ಪೋಷಕರಿರುತ್ತಾರಲ್ಲ ಎಂಬ ಸಮಾಧಾನ ನಂಬಿಕೆಯಿಂದಲೇ ಹೋಗುತ್ತಿದ್ದೇವೆ ಎಂದೂ ಹೇಳುತ್ತಾರೆ.

ನಂತರ ಕೆಲವು ದಿನ ಗತಿಸಿದ ಮೇಲೆ ಗದುಗಿನಲ್ಲಿ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂಚಾಕ್ಷರ ಗುರುಗಳ ಗದ್ದುಗೆಗೆ ಕಾಯಿ ಕರ್ಪೂರ ಮಾಡಿಸಿ ಬರುವ ಸಂದರ್ಭದಲ್ಲಿ ಕಲಿಕೇರಿಗೆ ಬುಕ್ ಮಾಡಿ ಕಳಿಸಿದ ಗುರುಸ್ವಾಮಿ ಕಲಕೇರಿಯವರು ಕಂಡರಂತೆ. ಆಗ ಅಂಜಲಿದೇವಿಯವರು ತಮಗಾದ ಅನುಭವವನ್ನು ಹೇಳಿದರಂತೆ. ಅದನ್ನು

ಕೇಳಿದ ಗುರುಸ್ವಾಮಿಯವರು "ಆ ಕತೆ ಅಷ್ಟಕ್ಕೆ ಮುಗಿಲಿಲ್ಲವಮ್ಮ, ಇನ್ನೂ ಐತಿ, ನೀವೇನು ಇತ್ತಾಗ ಬಂದೀರಲ್ಲಾ ಮಧ್ಯಾಹ್ನ ಕೀಲಿ ಹಾಕಿದ ಮಂದಿ ಬಂದು ಒದರಾಡಿ ರೋಡಿನ ತನಕ ಹುಡುಕಾಡಲಿಕ್ಕೆ ಬಂದಿದ್ರಂತ. ನಂತರ ಒಂದು ವಾರದ ಬಳಿಕ ನನ್ನ ಹತ್ತಿರ ಬಂದ್ರು. ನನ್ನ ಜೊತೆ ಜಗಳ ತೆಗೆದಿದ್ರು ಎಂಥ ನಟಿಯನ್ನ ಕಳೀಸಿರಿ, " ಒಂದು ದಿನ ಹೆಚ್ಚಿಗೆ ಇರು ಅಂದ್ರ ಇರಲಿಲ್ಲ. ಆಕಿ ಎಂಥಾ ನಟಿ ಎಂದು ಅಂದರಂತೆ. ಆಗ ಗುರುಸ್ವಾಮಿಯವರು "ಅಂಜಲಿದೇವಿಯವರು ಶ್ರೇಷ್ಠ ಕಲಾವಿದೆ. ಅವರಿಗೆ ಒಂದು ದಿನವೂ ಖಾಲಿ ಇರೂದಿಲ್ಲ. ಮೊದ್ಲೇ ಒಪ್ಪಿಕೊಂಡಂಥ ನಾಟಕಗಳು ಇರುತ್ತವೆ. ಅದಕ್ಕವರು ಹೋಗಲೇಬೇಕಾಗುತ್ತದೆ" ಎಂದು ಹೇಳಿದರಂತೆ.

ಕರ್ನಾಟಕದವರ ಮಾತೃಭಾಷೆ ಕನ್ನಡವಾದರೂ, ಕನ್ನಡ ನುಡಿಯುವ ರೀತಿ ವೈವಿಧ್ಯಮಯವಾಗಿದೆ. ಅಕ್ಕಪಕ್ಕದ ಭಾಷೆಗಳ ಪ್ರಭಾವದಿಂದ ತೆಲುಗುಮಿಶ್ರಿತ ಕನ್ನಡ, ಮರಾಠಿ ಮಿಶ್ರಿತ ಕನ್ನಡ, ಉರ್ದೂಮಿಶ್ರಿತ ಕನ್ನಡ ಹೀಗೆ ತಮಿಳು, ಇಂಗ್ಲಿಷ್ ಮೂಲ ದ್ರಾವಿಡ ಭಾಷೆಗಳ ಕೂಡುವಿಕೆಯಿಂದ ಒಂದೊಂದು ಕಡೆ ಒಂದೊಂದು ರೀತಿ, ಧಾರವಾಡ ಜಿಲ್ಲೆಯ ಗಂಡು ಭಾಷೆ ಕನ್ನಡದವರಿಗೆ ಕೊಂಚ ಇರಿಸುಮುರಿಸು. ಸ್ವಲ್ಪ ತೊಂದರೆಯೆನಿಸಿದ್ದೂ ಉಂಟು. ಹಾಗೆಯೇ ಕಲಾವಿದರಲ್ಲೂ ವಿವಿಧ ಅಭಿರುಚಿಯುಳ್ಳ ಜನರನ್ನೂ, ವಿವಿಧ ಸ್ವಭಾವದ ಜನರನ್ನೂ ಕಂಡಿದ್ದುಂಟು. ಕೆಲವರು ಕಲಾವಿದರನ್ನು ಗಂಧರ್ವರೆಂಬಂತೆ ಕಾಣುವರು. ಇನ್ನು ಕೆಲವರು ಸಾಂಸ್ಕೃತಿಕ ಕೇಂದ್ರದ ಪ್ರತಿನಿಧಿಗಳೆಂದು ಕಾಣುವರು. ಇನ್ನೂ ಕೆಲವರು ಓ ಅವರು ನಾಟಕದವರು, ಪಾತ್ರದವರು ಎಂದು ಅಸ್ಪೃಶ್ಯರಂತೆಯೂ ಕಂಡವರಿದ್ದಾರೆ. ಮರ್ಯಾದೆ ಕೊಟ್ಟು ಮಾತಾಡಿದವರೂ ಇದ್ದಾರೆ, ಮರ್ಯಾದೆಯನ್ನು ಕಳೆದವರೂ ಇದ್ದಾರೆ ಎಂದು ತಮ್ಮ ಜೀವನದಲ್ಲಾದ ಸಿಹಿಕಹಿ ಘಟನೆಗಳನ್ನೆಲ್ಲಾ ಬಿಚ್ಚಿಟ್ಟಿದ್ದಾರೆ ಅಂಜಲಿದೇವಿಯವರು.

ಮತ್ತೊಂದು ಘಟನೆ ಹೀಗಿದೆ. ಧಾರವಾಡ ಜಿಲ್ಲೆಯ ಸವಣೂರು ಹತ್ತಿರದ ಒಂದು ಹಳ್ಳಿಗೆ ಅಡವಿಮಠ ಕೃತ 'ದುರಹಂಕಾರಿ' ಎಂಬ ಸಾಮಾಜಿಕ ನಾಟಕಕ್ಕೆ ನಾಯಕಿ ಸರೋಜಾಳ ಪಾತ್ರಕ್ಕೆ ಅಂಜಲಿದೇವಿಯವರು ಹೋಗಿದ್ದರು. ಅದು ಸಾಧ್ವಿಯ ಪಾತ್ರ. ಅಂದಿನ ನಾಟಕದ ಉದ್ಘಾಟನೆಗೆ ಯಾರೋ ಒಬ್ಬ ಮಠಾಧೀಶರು ಬಂದಿದ್ದರು. ಜ್ಯೋತಿಯನ್ನು ಬೆಳಗಿ ನಾಟಕ ಉದ್ಘಾಟಿಸಿ ಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ಪಾತ್ರವಹಿಸಿದ ಊರಿನ ಕಲಾವಿದರನ್ನು ಒಬ್ಬೊಬ್ಬರನ್ನಾಗಿ ಕರೆದು ಮಾಲಾರ್ಪಣೆ ಮಾಡಿ ಆಶೀರ್ವದಿಸುತ್ತ ಈ ಊರಿನ ಪುಣ್ಯದ ಫಲ ಇಲ್ಲಿ ದೊಡ್ಡ ದೊಡ್ಡ ಕಲಾವಿದರು ಮೈ ತಳೆದಿದ್ದಾರೆ. ಇವರು ಎರಡನೆಯ ರಾಜಕುಮಾರ ಎಂದು ಮಾಲಾರ್ಪಣೆ ಮಾಡಿದರು. ನಂತರ ಇವರು ಎರಡನೆಯ ಉದಯಕುಮಾರ, ಇವರು ಎರಡನೆಯ ಕಲ್ಯಾಣಕುಮಾರ, ಇವರು ಎರಡನೆಯ ವಜ್ರಮುನಿ ಈ ರೀತಿಯಾಗಿ ಒಂದೊಂದು ಬಿರುದನ್ನು ದಯಪಾಲಿಸಿದರು.

ಒಳಗಡೆ ಬಣ್ಣ ಹಚ್ಚಿಕೊಳ್ಳುತ್ತಿದ್ದ ಅಂಜಲಿದೇವಿ ಇಂಥ ಕಲಾವಿದರ ಜೊತೆಗೆ ಅಭಿನಯಿಸುವುದೊಂದು ಭಾಗ್ಯವೆಂದುಕೊಂಡರು. ಸ್ವಾಮಿಗಳು ಒಬ್ಬೊಬ್ಬರಿಗೆ ಬಿರುದು ಕೊಟ್ಟಂತೆಲ್ಲಾ ಪ್ರೇಕ್ಷಕರಿಂದ ಶಿಳ್ಳೆ, ಚಪ್ಪಾಳೆ

ಬೀಳುವುದರ ಜೊತೆಗೆ ಹೊರಗಡೆ ಪಟಾಕಿ ಸಿಡಿಯುತ್ತಿತ್ತು. ಸ್ವಾಮಿಗಳ ಪ್ರವೇಶ ಮುಗಿದ ಮೇಲೆ ದುರಂಹಕಾರಿ ನಾಟಕದ ಪ್ರವೇಶ ಪ್ರಾರಂಭವಾಯಿತು. ಮೊದಮೊದಲು ನಾಟಕ ಚೆನ್ನಾಗಿಯೇ ನಡೆಯಿತು. ನಂತರದ ಸನ್ನಿವೇಶಗಳಲ್ಲಿ ಖಳನಾಯಕ ಬಂದು ತನ್ನ ಇಚ್ಛೆಗೆ ಒಪ್ಪಿಕೊಳ್ಳಲು ಒತ್ತಾಯಿಸಬೇಕು. ಅಲ್ಲಿನ ಖಳನಾಯಕ ಹಾಗೆ ಮಾಡಲಿಲ್ಲ. ಬಂದವನೇ ಅಂಜಲಿದೇವಿಯವರ ಕೈ ಹಿಡಿದು ಬಲತೋಳಿನ ಜಂಪರನ್ನು ಹರಿದುಬಿಟ್ಟ, ಅಂಜಲಿದೇವಿಯವರ ಬಾಯಿಂದ ಮಾತು ಹೊರಡಲಿಲ್ಲ. ಕಕ್ಕಾಬಿಕ್ಕಿಯಾಗಿ ನಿಂತರು. ಹಿಂದೆ ಪ್ರಾಮ್ಪ್ಟ್ ಮಾಡುವವ ಮಾತು ಎತ್ತಿಕೊಡಲು ತಮ್ಮ ಕೊನೆಯ ಸಂಭಾಷಣೆಯನ್ನು ಹೇಳಿ ಒಳಗೆ ಬಂದಳು. ಒಳಗೆ ಬಂದ ಕೂಡಲೇ ಖಳನಾಯಕ "ಎದಕ್ಕ ಬಂದೀರಿ ನೀವು ಪಾತ್ರ ಮಾಡಲಿಕ್ಕ ಬಂದೀರಾ ಇಲ್ಲಾ, ನನ್ನ ಮಾತು ಕೊಲ್ಲಿ ಬಿಟ್ರಲ್ಲಾ" ಎಂದನು. ಅಂಜಲಿದೇವಿ ಸಾವಕಾಶವಾಗಿ ಬಾಡಿದ ಮುಖದಿಂದ ಕಣ್ಣೀರು ಒರೆಸಿಕೊಂಡು "ಏನಣ್ಣಾ ಹೀಂಗ ಮಾಡಿದರಲ್ಲಾ" ಎಂದಾಗ ಖಳನಾಯಕ "ನಾನೇನು ಮಾಡೀನಿ? ಹಾಂ ನನ್ನ ಪಾತ್ರ ಯಾವುದು? ರೇಪ್ ಮಾಡೋದು, ರೇಪ್ ಮಾಡೋದು ಬಿಟ್ಟು ನಿನ್ನ ಕಾಲಿಗೆ ನಮಸ್ಕಾರ ಮಾಡಬೇಕಿತ್ತೇನು?" ಎಂದು ಗದರಿಸಿದ. ಮೈ ಕೊರೆಯುವ ಅಂತಹ ಛಳಿಯಲ್ಲೂ ಬೆವತುಹೋದರು ಅಂಜಲಿದೇವಿ, ಅಂದಿನ ನಾಟಕಕ್ಕೆ ತಮ್ಮ ಪತಿಯು ಬೇರೆ ಬಂದಿರಲಿಲ್ಲ. ಅಲ್ಲದೆ ಮುಂದೆ ಇನ್ನೊಂದು ದೃಶ್ಯದಲ್ಲಿ ಬಲಾತ್ಕಾರ ಮಾಡಲು ಬರುವುದಿದೆ. ಆಗಿನ ಪರಿಸ್ಥಿತಿಯನ್ನು ನೆನೆದು ಭೂಮಿಗಿಳಿದು ಹೋದರು ಸಾಧ್ವಿ ಸರೋಜಾ .

ನಾಟಕದ ಮ್ಯಾನೇಜರ್ ಆಳಿನೊಡನೆ ಚಹಾ ಕಳಿಸಿ, ಒಂದು ಕೈಯಲ್ಲಿ ಚಹಾದ ಕಪ್ಪನ್ನು ಇನ್ನೊಂದು ಕೈಯಲ್ಲಿ ಸಿಗರೇಟನ್ನು ಹಿಡಿದು ಗ್ರೀನ್ ರೂಮಿನ ಪರದೆಯನ್ನೆತ್ತಿ ಒಳಬಂದು, ಅಂಜಲಿದೇವಿಯವರಿಗೆ ಹ್ಯಾಂಗ ನಮ್ಮ ಕಲಾವಿದರು? ದೃಶ್ಯ ಹ್ಯಾಂಗಾತು? ಎಂದು ತಮ್ಮ ಕಲಾವಿದರ ನಟನೆಯನ್ನು ಸಮರ್ಥಿಸಿಕೊಂಡ. ಆಗ ಅಂಜಲಿದೇವಿಯವರು 'ಅಲ್ಲಣ್ಣಾ ಇದು ನಾಟಕ, ನಟನೆಯ ಮೂಲಕ ಪ್ರೇಕ್ಷಕರನ್ನು ರಂಜಿಸಬೇಕು' ಎಂದಾಗ ಮ್ಯಾನೇಜರ್ 'ನಮಗೂ ತಿಳಿತೈತಿ, ಕಲಾವಿದ ಪಾತ್ರದಲ್ಲಿ ತಲ್ಲೀನನಾಗಬೇಕು ಅಂದಾಗ ಆ ಪಾತ್ರ ಸಕ್ಸಸ್ ಆಗುತ್ತದೆ. ಈಗ ಅಳುವ ದೃಶ್ಯ ಬಂದಾಗ ನ್ಯಾಚುರಲ್ಲಾಗಿ ಅಳಬೇಕು, ನ್ಯಾಚುರಲ್ಲಾಗಿ ನಗಬೇಕು ಹೌದಿಲ್ಲಾ? ಹಾಂಗಾ ರೇಪ್ ಸೀನೂ ನ್ಯಾಚುರಲ್ಲಾಗಿ ಬರಬೇಕು. ನಮ್ಮೂರು ಕಲಾವಿದರ ಊರು, ಎಂದು ಸಿಗರೇಟ ಹಿಡಿದ ಬೆರಳಿನಿಂದ ಚಿಟಕಿ ಹೊಡೆದ. ಹೊರಗಿಂದ ದುರಹಂಕಾರಿ ನಾಟಕದ ಪುಸ್ತಕ ತಂದು ಪೂರ್ತಿ ನಾಟಕ ಪುಸ್ತಕ ಓದೀರಿಲ್ಲಾ, ನೋಡ್ಯಾರ ನೋಡ್ರಿ. ಕಂಸಿನಾಗ ಬಲಾತ್ಕರಿಸಲು ಬರುವನು ಎಂದು ಮಾತ್ರ ಇತ್ತು. ಆದರೆ ಜಂಪರ್ ಹರಿಯುವನು ಎಂದು ಇರಲಿಲ್ಲವೆಂದು ಹೇಳಬೇಕೆನಿಸಿತಾದರೂ ಹೇಳಲಾಗಲಿಲ್ಲ. ಒಟ್ಟಾರೆ ತಮಗಿನ್ನು ಉಳಿಗಾಲವಿಲ್ಲವೆಂದು ಕೊಂಡರು ಅಂಜಲಿದೇವಿ.

ಕೆಲವು ನಿಮಿಷಗಳಲ್ಲಿ ಮುಂದಿನ ಬಲಾತ್ಕಾರದ ದೃಶ್ಯವೂ ಬಂದೇಬಿಟ್ಟಿತು. ಆ ದೃಶ್ಯ ಹೀಗಿದೆ. ಸಾಧ್ವಿ ಸರೋಜಾ ಮಂಚದ ಮೇಲೆ ಮಲಗಿದ್ದಾಳೆ. ಮನೆಯಲ್ಲಿ ಯಾರೂ ಇರದ ಸಮಯ ತಿಳಿದು ಖಳನಾಯಕ ಒಳಗೆ ಬರುತ್ತಾನೆ. ಬಂದವನೇ ಮಂಚದ ಮೇಲೆ ಕೈಯೂರಿ ಬಾಗಿ ಅವಳ ಮುಖ ನೋಡಿ ಸೌಂದರ್ಯವನ್ನು ಬಣ್ಣಿಸುವ ಸ್ವಗತ

ಸಂಭಾಷಣೆಯನ್ನು ಹೇಳಬೇಕು. ಖಳನಾಯಕ ಹಾಗೆ ಮಾಡಲಿಲ್ಲ. ದೃಶ್ಯಗಳು ನೈಜವಾಗಿ ಮೂಡಿ ಬರಲೆಂದು ಬಂದವನೇ ಬಾಗಿ ನೋಡಿ, ತನ್ನ ಎರಡೂ ಕೈಗಳಿಂದ ಅಂಜಲಿದೇವಿಯವರ ಎರಡೂ ಭುಜಗಳನ್ನು ಹಿಡಿದುಕೊಂಡು ಕೆನ್ನೆಯನ್ನು ರಕ್ತ ಬರುವಂತೆ ಕಚ್ಚಿಬಿಟ್ಟ. ಇದರಿಂದ ನಾಯಕಿ ಪಾತ್ರಧಾರಿ ಅಂಜಲಿದೇವಿ ಹೆದರಲಿಲ್ಲ. ಸಾಧ್ವಿಯ ಪಾತ್ರ, ಧೈರ್ಯದಿಂದ ಎದ್ದು ಪ್ರತಿಭಟಿಸಿ ಖಳನಾಯಕನ ಮೇಲೆ ಉಗುಳುವುದಿತ್ತು. ದೃಶ್ಯ ಸಹಜವಾಗಿ ಬರಲಿ ಎಂದು ಬಾಗಿದ ಖಳನಾಯಕನ ಎದೆಗೆ ಜೋರಾಗಿ ಒದ್ದು ಬಿಟ್ಟಳು. ಖಳನಾಯಕ ನೈಜವಾಗಿ ಹಿಂದೆ ಬಿದ್ದು ಬಿಟ್ಟ. ನೈಜವಾಗಿ ತಲೆ ಒಡೆಯಿತು ಕೂಡ. ಇನ್ನು ಮುಂದಿನ ಎಲ್ಲಾ ಘಟನೆಗಳೂ ತೆರೆಯ ಹಿಂದೆ ನೈಜವಾಗತೊಡಗಿದವು. ರಂಗಭೂಮಿಯಲ್ಲಿದ್ದ ಕಲ್ಲಿಗೆ ಬಿದ್ದ ರಭಸಕ್ಕೆ ತಲೆ ಒಡೆದುಕೊಂಡ ಖಳನಾಯಕ ಮೇಲೇಳಲೇ ಇಲ್ಲ. ಪ್ರೇಕ್ಷಕರಿಂದ ಶಿಳ್ಳೆ, ಚಪ್ಪಾಳೆಯೇನೋ ಬಿದ್ದವು. ಮುಂದಿನ ಮಾತು ಹೇಳದೆ ಬಿದ್ದ ಖಳನಾಯಕನನ್ನು ಎಬ್ಬಿಸಲು ಪರದೆ ಬಿಟ್ಟರು. ಆಗ ಬೆಳಗಿನ ಜಾವ ೩.೩೦ರ ಸಮಯ. ಮುಂದೆ ಇನ್ನೂ ಒಂದು ಅಂಕ ನಾಟಕ ಇತ್ತು.

ಕೆಳಗೆ ಬಿದ್ದ ನೈಜ ಕಲಾವಿದ ಖಳನಾಯಕನನ್ನು ಬದಿಗೆ ಎತ್ತಿಕೊಂಡು ಬಂದು ಉಪಚರಿಸತೊಡಗಿದರು. ಬಿದ್ದ ಏಟಿಗೆ ಪ್ರಜ್ಞೆ ತಪ್ಪಿದಂತಾಗಿತ್ತು. ತಲೆ ಒಡೆದು ರಕ್ತ ಚಿಮ್ಮುತ್ತಿತ್ತು. ಒತ್ತಿ ಹಿಡಿದು ಬಟ್ಟೆ ಬಿಗಿದರು. ಹ್ಯಾಂಡ್‌ಬಿಲ್ ತುಂಬಾ ಹೆಸರು ಹಾಕಿಸಿಕೊಂಡ ನಟರು, ಸಹನಟರು, ಮಾಲಿಕರು, ಮ್ಯಾನೇಜರರು ಟಿಕೆಟ್ ಬುಕ್ಕಿಂಗ್ ಆಫೀಸರರು ಏನೆಲ್ಲಾ ಪದವಿಯಲ್ಲಿದ್ದ ಕಾಗೆ ಬಳಗವೆಲ್ಲಾ ಅಂಜಲಿದೇವಿಯವರನ್ನು ಸುತ್ತುವರಿಯಿತು. ಬಾಯಿಗೆ ಬಂದಂತೆ ಒದರಾಡತೊಡಗಿತು. "ಹ್ಯಾಂಗ ಒದ್ಲು ಆಕಿ" ಎಂದು ಒಬ್ಬ ಆರ್ಭಟಿಸಿದ, ನಾವಂದ್ರ ಏನಂತ ತಿಳಿದಾಳ ಈಕೆ, 'ಇಡೀ ಈ ನಾಡಿಗೇ ಹೆಸರಾದ ಕಲಾವಿದರು ನಾವು" ಎಂದ ಮತ್ತೊಬ್ಬ ನೈಜಕಲಾವಿದ. "ನಮ್ಮಂಗ ಪಾರ್ಟು ಮಾಡೋರು ಯಾರೂ ಇಲ್ಲ ಈ ನಾಡಿನಾಗ." ಒಂದೇ ಎರಡೇ ಮಾತುಗಳು, ಎಲ್ಲವನ್ನೂ ಕೇಳುತ್ತ ಸುಮ್ಮನೇ ಕುಳಿತಿದ್ದರು ಅಂಜಲಿದೇವಿ. ಸ್ಟೇಜ್ ಒಳಗೆ ನಡೆದ ಗಲಾಟೆಯು ಮೈಕ್ ಮೂಲಕ ಹೊರಗಡೆ ಕೇಳಿಸಿ ಹೊರಗಡೆಯ ಪ್ರೇಕ್ಷಕ ವೃಂದವೂ ಒಳಸೇರಿತು. "ಬಾಯಿ ತೆಗಿವಲ್ಲಳಲ್ಲ ಆಕಿ ಕೇಳಲೆ" ಎಂದ ಒಬ್ಬ ಕಲಾಭಿಮಾನಿ ಮುದುಕ, ಹ್ಯಾಂಗ ಒದ್ದಿ ಎಂದ ಮತ್ತೊಬ್ಬ.

ಇದೆಲ್ಲವನ್ನೂ ನೋಡಿ ಅಂಜಲಿದೇವಿಯವರು ಹೆದರಲಿಲ್ಲ. ಗುರುಗಳ ಸ್ಮರಣೆ ಅದೆಂಥ ಬಲವನ್ನು ತಂದುಕೊಟ್ಟಿತ್ತೋ ಸಾವಕಾಶವಾಗಿ ಮಾತಾಡತೊಡಗಿದರು. "ಸಾಧ್ವಿಯ ಮೇಲೆ ಖಳನಾಯಕ ಬಲಾತ್ಕರಿಸಲು ಬಂದಾಗ ಅಮಾಯಕ ಹೆಣ್ಣು ಏನು ಮಾಡುತ್ತಾಳೆ, ಕೈ ಕೊಸರುತ್ತಾಳೆ, ಚೀರುತ್ತಾಳೆ, ಅಳುತ್ತಾಳೆ, ಯಾರಾದರೂ ಕಾಪಾಡಿ ಎಂದು ಅಂಗಲಾಚುತ್ತಾಳೆ, ನಂತರ ಶೀಲ ಕಾಪಾಡಿಕೊಳ್ಳುವುದಕ್ಕಾಗಿ ಒದೆಯುತ್ತಾಳೆ. ಕಂಸಿನಲ್ಲಿ ಹಾಗೆ ಬರೆದಿದ್ದಾರೆ. ನಾಟಕದ ಪುಸ್ತಕ ಓದಿ ನೋಡ್ರಿ. ಸೀನು ನೈಜವಾಗಿ ಬರಲಿ ಅಂತ ನಾನು ಒದ್ದು ಬಿಟ್ಟೆ. ನಿಮ್ಮ ಪುಣ್ಯ ಅದರಲ್ಲಿ ಕೊಲೆ ಮಾಡುವಳು ಎಂದು ಬರೆದಿಲ್ಲ, ಇಲ್ಲದಿದ್ದರೆ ಆ ಸನ್ನಿವೇಶವನ್ನೂ ನೈಜವಾಗಿ ಮೂಡಿಸಿಬಿಡುತ್ತಿದ್ದೆ. ಆ ಮಾತೇ ಬೇರೆಯಿತ್ತು' ಎಂದುಬಿಟ್ಟರು. ಕೆಲವು ನೈಜಕಲಾವಿದರ ಮುಖ ಕಪ್ಪಿಟ್ಟಿತು.

ಆಗ ಗುಂಪಿನಲ್ಲಿದ್ದವನೊಬ್ಬ ಒರಟ "ಒಹೋ ಇಲ್ಲೀ ಮಟ ಮಾತಾಡ್ತಾಳೇನು ಈಕಿ, ಎಳೆದು ಕಂಬಕ್ಕೆ ಕಟ್ಟಿರೆಲೆ ಈಕಿನ್ನ, ಯಾವನು ಬಿಡಿಸಿಕೊಳ್ಳಾಕ ಬರ್ತಾನ ನೋಡೂನ" ಎಂದಾಗ ಅಂಜಲಿದೇವಿ ಸೆಟೆದುನಿಂತು "ಬರಿ, ಒಬ್ಬರಾದ್ರೂ ಮುಂದಕ್ಕೆ ಬರಿ, ನಿಮಗೇನು ಅಕ್ಕತಂಗಿಯರು ಅದಾರ ಇಲ್ವಾ?'' ಎಂದು ವೀರಾವೇಶದ ಚನ್ನಮ್ಮನಂತಾದಳು. ಕೂಡಲೇ ಸಂಗೀತಗಾರರೂ, ಸಹನಟಿಯರೂ ಸೇರಿ, ಕಲಾವಿದರು ಅಂದ್ರ ಏನಂತ ತಿಳದೀರಿ ನೀವು. ನಮಗೂ ಮಾನ ಮರ್ಯಾದೆ ಐತ್ರಿ, ಈ ಇಡೀ ಊರಾಗ ಯಾರೂ ಹಿರೇರು ಇಲ್ಲೇನು, ಈಗ್ಲೆ ಪೋಲೀಸ್ ಕಂಪ್ಲೇಂಟ್ ಕೊಡ್ತಿವಿ ಎಂದು ಒಂದೇ ಸ್ವರದಲ್ಲಿ ಹೇಳಿದರು. ಒಳಗೆ ಬಂದಂತಹ ಪ್ರೇಕ್ಷಕ ಸಮೂಹ 'ನೈಜ ಕಲಾವಿದರಿ'ಗೆ ಛೀಮಾರಿ ಹಾಕಿದರು. ಅಂಜಲಿದೇವಿಯವರಿಗೆ ಶಹಬಾಸಗಿರಿ ಕೊಟ್ಟರು. "ಚೊಲೊ ಕೆಲಸ ಮಾಡೀಯಮ್ಮಾ ನೀನು" ಎಂದರು. ಕೆಲವರು "ನಾಟಕ ಪೂರ್ತಿ ಆಗಿಲ್ಲ, ನಮ್ಮ ರೊಕ್ಕಾ ಹೊಳ್ಳಿ ಕೊಡಿರಿ" ಎಂದು ಕೂಗತೊಡಗಿದರು, ಸ್ಟೈಲ್ ಮಾಡಿ ಸಿಗರೇಟ್ ಸೇದುತ್ತಿದ್ದ ಮ್ಯಾನೇಜರ್ ಓಡಿ ಹೋದ. ತಮ್ಮ ಸಂಭಾವನೆಯನ್ನು ಪಡೆದು ಊರು ಸೇರಿದರು.

ಈ ಹೀಗೆ ಒಂದೊಂದು ಊರಿನಲ್ಲಿ ಒಂದೊಂದು ರೀತಿಯಲ್ಲಾದಂತಹ ಅನುಭವಗಳನ್ನು ಹೇಳುತ್ತಾರೆ. ಕೆಲವೆಡೆ ಹೇಮರಡ್ಡಿ ಮಲ್ಲಮ್ಮನ ಪಾತ್ರಧಾರಿಯಾದ ಅಂಜಲಿದೇವಿಯವರನ್ನು ಕರೆಯಿಸಿ ಆಕೆ ಸ್ವತಃ ಮಲ್ಲಮ್ಮನೇ ಎಂಬಂತೆ ಕಂಡು ಉಡಿ ತುಂಬಿದ ಉದಾಹರಣೆಗಳೂ ಉಂಟು. ವೀರಾವೇಶದ ಚಿತ್ರಾಂಗದೆಯ ಪಾತ್ರವನ್ನು ನೋಡಿ, ಕಿತ್ತೂರ ರಾಣಿ ಚನ್ನಮ್ಮನ ಪಾತ್ರ ನೋಡಿ ಈಕೆ ದುಷ್ಟ ಸಂಹಾರಿ, ಶಿಷ್ಟ ರಕ್ಷಿಣಿ, ಕಾಳಿಯ ಅವತಾರಿಯೆಂದು ಗೌರವಿಸಿದವರೂ ಉಂಟು. ಭೀಮಾಂಬಿಕೆಯ ಭಕ್ತಿ ಪಾತ್ರ ಕಂಡು ಆ ಅಮ್ಮನೇ ಈ ಅಂಜಲಿದೇವಿಯೆಂದು ನಮಿಸಿದವರೂ ಉಂಟು. ಸವಣೂರಿನ ನೈಜ ಕಲಾವಿದರಂತೆ ಕೆನ್ನೆ ಕಚ್ಚಿದವರೂ ಉಂಟು. ಲೋಕೋ ಭಿನ್ನರುಚಿಯಲ್ಲವೆ? ಅದಕ್ಕಾಗಿ ಕಲಾಜೀವನ ಹೂವಿನ ಹಾಸಿಗೆಯೆಂದು ಹೇಳುವಂತಿಲ್ಲ. ಮುಳ್ಳಿನ ಹಾಸಿಗೆಯೆಂತಲೂ ಹೇಳಲಾಗದು ಎನ್ನುತ್ತಾರೆ.

ಮಾನ, ಸನ್ಮಾನ, ಹೂಮಾಲೆ, ಶಾಲು ಸ್ವೀಕರಿಸುವ ನಾವುಗಳು ಕೆಲವೆಡೆ ಎರಡು ಪಾರ್ಟಿಗಳಾದ ಊರುಗಳಲ್ಲಿ ನಾಟಕವಾಡುವಾಗ ಕಲ್ಲೇಟನ್ನೂ ಸ್ವೀಕರಿಸಿದ್ದೇವೆ ಎನ್ನುತ್ತಾರೆ. ಮಹಾಮೌನಿ ಪೂಜ್ಯ ಚಿಕ್ಕೇನಕೊಪ್ಪದ ಚೆನ್ನವೀರ ಶರಣರು ನಡೆದಾಡುವ ದೇವರು ಎಂಬ ಕೀರ್ತಿಗೆ ಭಾಜನರಾಗಿದ್ದರು. ಅಂಥವರು ಈ ಭಾಗದಲ್ಲಿ ರಾಯಚೂರು, ಕೊಪ್ಪಳ, ಬಳ್ಳಾರಿ ಹವ್ಯಾಸಿ ಕಲಾತಂಡಗಳನ್ನು ಪೋಷಿಸಿ ಬೆಳೆಸಿದರು. 'ಹೇಮರೆಡ್ಡಿ ಮಲ್ಲಮ್ಮ' ನಾಟಕವನ್ನು ಸಾವಿರಾರು ಸಲ ಪ್ರಯೋಗ ಮಾಡಿಸಿದರು. 'ಎಮ್ಮಿಗನೂರ ಜಡೇ ಸಿದ್ದೇಶ್ವರ ಶಿವಯೋಗಿ ' ನಾಟಕವನ್ನು, ಕಾಮದಹನ ಮಾಡುವ 'ಗಿರಿಜಾ ಕಲ್ಯಾಣ' ಬಯಲಾಟವನ್ನೂ ನೂರಾರು ಸಲ ಪ್ರಯೋಗ ಮಾಡಿಸಿದ್ದರು.

'ಸಮಾಜದಲ್ಲಿ ಭಕ್ತಿ ಬೆಳೆಯಲು, ನೀತಿ ಉಳಿಯಲು, ಪ್ರೀತಿ ಕಾಣಲು ಸಾಂಸ್ಕೃತಿಕ ರಂಗ ಅನಿವಾರ್ಯ. ಸಮಾಜದ ಸುಧಾರಣೆಗೆ ನಾಟಕಗಳ ಪಾತ್ರ ಅತೀ ಮುಖ್ಯ. ಶ್ರವ್ಯಕಾವ್ಯಗಳಾದ ಪುರಾಣ ಪ್ರವಚನಗಳಂತೆ ದೃಶ್ಯ ಕಾವ್ಯವಾದ ನಾಟಕವೂ ಪರಿಣಾಮಕಾರಿ. ಹಾಗೆ ಪೂಜ್ಯವೆಂದು ನಾಟಕರಂಗವನ್ನು ಪೋಷಿಸಿ ಬೆಳೆಸಿದಂತಹ ಮಹಾತ್ಮರು,

ಶರಣರು ಮೇಲಿಂದ ಮೇಲೆ ಹೇಳುತ್ತಿದ್ದರು. 'ಕಾಳಿದಾಸ ಮಹಾಕವಿ ಕಾವ್ಯೇಷು ನಾಟಕಂ ರಮ್ಯಂ' ಅಂದಾನ್ರೆಪಾ. ಕಲಾವಿದರಂದ್ರ ಗಂಧರ್ವರಿದ್ದಾಂಗ, ಗಂಧರ್ವರು ಎಂದು ಸಂಬೋಧಿಸಿ ಗಂಧರ್ವ ಕಲೆಯನ್ನು ನಾವು ಉಳಿಸಬೇಕು ಬೆಳೆಸಬೇಕು. ಹಣ ಕೊಟ್ಟು ನೋಡಬೇಕು. ಅವರಿಗೂ ದೇವರು ಕಲೆಯ ಜೊತೆಗೆ ಹೊಟೇನೂ ಕೊಟ್ಟಾನ್ರೆಪಾ' ಎಂದು ಉಪದೇಶಿಸುತ್ತಿದ್ದರು.

ಅಂಥ ಗಂಧರ್ವ ಕಲೆಯನ್ನು ಸಾಕಾರ ಮಾಡಿಕೊಂಡ ಕಲಾವಿದ, ಅಭಿನೇತ್ರಿ ಅಂಜಲಿದೇವಿ ನಾಟಕದಲ್ಲಿ ಎಲ್ಲಾ ಬಗೆಯ ಪಾತ್ರಗಳನ್ನೂ ಮಾಡಿ ಸೈ ಎನ್ನಿಸಿಕೊಂಡಿದ್ದಾಳೆ. ಕೆಲವು ಕಲಾವಿದರು ಒಂದೊಂದೇ ಪಾತ್ರಕ್ಕೆ ಬ್ರ್ಯಾಂಡ್ ಆಗಿರುತ್ತಾರೆ. ನಾಯಕಿ, ಖಳನಾಯಕಿ, ಹಾಸ್ಯ, ಪೋಷಕ ಎಲ್ಲಾ ಪಾತ್ರಗಳಲ್ಲೂ ಮಿಂಚಿ ಸೈ ಎನಿಸಿಕೊಂಡವರು. ಪಾತ್ರ ಮಾಡುವಾಗ ಆ ಪಾತ್ರವೇ ತಾವಾಗುತ್ತಿದ್ದರು. ಆರೋಗ್ಯವಾಗಿರಲಿ, ಅನಾರೋಗ್ಯದಿಂದಿರಲಿ ರಂಗಪ್ರವೇಶಿಸಿದ ಮೇಲೆ ಮುಗಿಯಿತು, ಅದರ ಪರಿವೆಯೇ ಇರುತ್ತಿರಲಿಲ್ಲ.

ಅಂಜಲೀದೇವಿಯವರಿಗೆ ಜನಿಸಿದ್ದು ಏಕೈಕ ಮಗಳು, ಪಡೇಸೂರ ಕಂಪನಿಯಲ್ಲಿದ್ದಾಗ, ಮದುವೆಯಾಗಿ ಒಂದು ವರುಷದಲ್ಲೇ ಕೂಸು ಜನಿಸಿತ್ತು. ಮೂರು ತಿಂಗಳು ಬಾಣಂತಿತನ ಆಗಬೇಕೆಂದು ನೀಲಕಂಠಪ್ಪ ಕಂಪನಿಯವರಿಗೆ ತಿಳಿಸಿದ್ದ. ಕಂಪನಿ ಗದಗ ಕ್ಯಾಂಪ್ ಮುಗಿಸಿ ಬಾಗಲಕೋಟೆಗೆ ಸ್ಥಳಾಂತರಿಸಿತ್ತು. ಆಗ ಅಂಜಲಿದೇವಿ ಹಡೆದು ಕೇವಲ ಇಪ್ಪತ್ತು ದಿನವಾಗಿತ್ತು. ಇನ್ನೂ ಹಸಿಮೈ, ಹೊರಗೆ ಬರುವಂತಿಲ್ಲ. ಅಂತಹದರಲ್ಲಿ ಕಂಪನಿ ಮಾಲಿಕನು ಅಂಜಲಿದೇವಿಯಿರದ ಹೇಮರಡ್ಡಿ ಮಲ್ಲಮ್ಮ ನಾಟಕ ಕಳೆಕಟ್ಟದು ಎಂದು ಗದುಗಿಗೆ ಕರೆಯಲು ಬಂದರು. ವಿಧಿಯಿಲ್ಲದೆ ಅಂಜಲಿದೇವಿ ಬಾಗಲಕೋಟೆಗೆ ಹೋಗಿ ಮುಖಕ್ಕೆ ಬಣ್ಣ ಹಚ್ಚಿಕೊಂಡರು. ಒಂದು ದಿನವಲ್ಲ, ತಿಂಗಳುಗಟ್ಟಲೆ ನಟಿಸಿದರು.

ಹೀಗೆ ಸಂಪೂರ್ಣವಾಗಿ ತಮ್ಮನ್ನು ರಂಗಕಲೆಗೆ ಸಮರ್ಪಿಸಿಕೊಂಡು ಕಲೆಯಲ್ಲಿಯೆ ಕರುಣಾಕರನಾದ ಶಿವನನ್ನು ಕಂಡವರು. ಈ ನಾಟಕರಂಗವನ್ನು ಹೊಟ್ಟೆಬಟ್ಟೆಗಾಗಿ, ಮೋಜಿಗಾಗಿ ಮನೋರಂಜನೆಗಾಗಿ ಸ್ವೀಕರಿಸಲಿಲ್ಲ. ತಮ್ಮ ಮನೋವಿಕಾಸಕ್ಕಾಗಿ ಅದನ್ನು ಬಳಸಿಕೊಂಡರು. ಹಾಗೆಯೇ ಬೆಳೆಸಿಕೊಂಡರು. ರಂಗಕಲೆ ಅದೊಂದು ತಪಸ್ಸೆಂದು, ಪೂಜೆಯೆಂದು ತಿಳಿದರು. ಅದಕ್ಕಾಗಿಯೇ ಅದರಲ್ಲುಳಿದರು. ಅದರಲ್ಲೇ ಬೆಳೆದರು.

ಅಂಜಲಿದೇವಿಯವರು ಗಂಗಾವತಿ ತಾಲೂಕಿನ ಅನೇಕ ಹಳ್ಳಿಗಳಿಗೆ ಬಂದು ತಮ್ಮ ಛಾಪನ್ನು ಒತ್ತಿ ಹೋದರು. ಸುಳೇಕಲ್ ಬೃಹನ್ಮಠದ ಪದ್ಮಾಕ್ಷಯಸ್ವಾಮಿಗಳು ರಚಿಸಿದ ಅಭಯಪ್ರಧಾನ, ತ್ಯಾಗವೀರ ಮಯೂರಧ್ವಜ ಪೌರಾಣಿಕ ನಾಟಕಗಳು ಅಚ್ಚಾಗದಿದ್ದರೂ ಕಂದಗಲ್ ರಾಯರ ಸಾಹಿತ್ಯಕ್ಕೆ ಹತ್ತಿರವಾಗಿವೆ. ಅಷ್ಟೊಂದು ಖ್ಯಾತಿ ಗಳಿಸಿದವು. ಗಂಗಾವತಿ ತಾಲೂಕಿನಲ್ಲಿ ಸಾಮಾಜಿಕ, ಐತಿಹಾಸಿಕ ಪೌರಾಣಿಕ ನಾಟಕಗಳನ್ನು ನಿರ್ದೇಶಿಸಿ ರಾಯರ 'ಬಡತನ ಭೂತ' ನಾಟಕದ ಶ್ರೇಷ್ಠ ನಾಯಕ ನಟನೆಂಬ ಖ್ಯಾತಿಗೆ ಒಳಗಾಗಿದ್ದ ಕಲ್ಮಂಗಿ ಭೋಗಪ್ಪ ಮಾಸ್ತರರು 'ಖೋಟಾ ನೋಟು', 'ಗಂಡುಗಲಿ ಕುಮಾರರಾಮ' ಬರದು ಪ್ರದರ್ಶಿಸಿದ ಗಂಗಾವತಿಯ ಕಟ್ಟಿಮನಿ ವೆಂಕಟೇಶ,

ಹತ್ತಾರು ನಾಟಕ ಬರೆದು ಸಾವಿರಾರು ರಂಗಗೀತೆಗಳನ್ನು ರಚಿಸಿ ರಾಗ ಸಂಯೋಜಿಸಿದ ಕಂಪ್ಲಿ ವಾದಿರಾಜರಿಗೆ ಅತ್ಯಂತ ಅಭಿಮಾನದ ನಟಿಯಾಗಿದ್ದರು ಅಂಜಲಿದೇವಿಯವರು.

ಮರಿಯಮ್ಮನಹಳ್ಳಿಯ ಹತ್ತಿರದ ಬಸಾಪುರ ಗ್ರಾಮದಲ್ಲಿ ಕುರುಕ್ಷೇತ್ರ ನಾಟಕ. ಆ ಭಾಗದಲ್ಲಿ ಅನೇಕ ಜನ ಅಂಜಲಿದೇವಿಯವರ ಅಭಿಮಾನಿಯಾಗಿದ್ದರು. ಅಲ್ಲದೆ ಅತ್ಯಂತ ಗೌರವ ಕೊಡುತ್ತಿದ್ದರು. ಎರಡು ದಿನದಿಂದ ಅಲರ್ಜಿಯಾಗಿ ಅವರಿಗೆ ಮೈಯೆಲ್ಲಾ ತಿಂಡಿಬಿಟ್ಟಿತ್ತು. ಕೆರೆದಂತೆಲ್ಲಾ ಬಾವು ಬರುತ್ತಿತ್ತು. ಗದಗದಲ್ಲಿ ಡಾಕ್ಟರ ಹತ್ತಿರ ತೋರಿಸಲು ಅವರು ಇಂಜೆಕ್ಷನ್ ಕೊಟ್ಟು ಮಾತ್ರೆ ಬರೆದುಕೊಟ್ಟರು. ಅಲ್ಲದೆ ಈಗ ವಿಶ್ರಾಂತಿಯ ಆವಶ್ಯಕತೆಯಿದೆ, ಊಟ, ನೀರು ಏನೊಂದೂ ಬದಲಾವಣೆ ಆಗಬಾರದು ಎಂದು ಎಚ್ಚರಿಸಿದ್ದರು. ಅಭಿಮಾನ ಬಹಳ ದೊಡ್ಡದಲ್ಲವೆ. ಈ ಸಣ್ಣ ಕಾರಣಕ್ಕಾಗಿ ನಾಟಕ ತಪ್ಪಿಸಿದರೆ ಅವರೇನೆಂದುಕೊಂಡಾರು ಎಂದು ಹೊರಟರು. ಅಂಜಲಿದೇವಿಯವರ ಜೊತೆ ವಂದನಾ, ಸಾವಿತ್ರಿ ನಡೆದರು. ವಂದನಾ ಸ್ವಂತ ಮಗಳಾದರೆ ಸಾವಿತ್ರಿ ಅಕ್ಕನ ಮಗಳು. ಆಕೆ ಕೂಡ ಒಳ್ಳೆಯ ಕಲಾವಿದೆ. ಎಲ್ಲರೂ ಬಸಾಪುರಕ್ಕೆ ಬಂದರು. ಅಂದು ಆ ಊರಲ್ಲಿ ಒಂದು ಉತ್ಸವವಿತ್ತು. ಹೀಗಾಗಿ ನಾಟಕದ ಪಾತ್ರಧಾರಿಗಳ ಮನೆಯಲ್ಲಿ ಸಿಹಿ ಊಟ. ಎಲ್ಲರ ಮನೆಯಲ್ಲೂ ಹೋಳಿಗೆ, ಕರಿಗಡಬು ಮಾಡಿದ್ದರು. ಅದರಲ್ಲಿನ ಒಬ್ಬ ಪಾತ್ರಧಾರಿ ''ಅಂಜಲಿದೇವಿಯವರೇ, ನಮ್ಮನಿಗೆ ನಿಮ್ಮನ್ನು ಊಟಕ್ಕೆ ಕರಕೊಂಡು ಬರ್ತಿನಂತ ಹೇಳಿ ಬಂದೀನಿ, ನಡಿ, ಕರಿಗಡಬು ತಿಂದು ಬರುವಂತ್ರಿ''ಎಂದು ಕರೆದ. ಆತನ ಮಾತಿಗೆ ಅಂಜಲಿದೇವಿಯವರು ತಮಗಾದ ಪರಿಸ್ಥಿತಿಯನ್ನು ಹೇಳಿದರು. ಕರಿಗಡಬು ತಿನ್ನದಿದ್ರ ಒಂದು ಹೋಳಿಗೆ ಉಣ್ರಿ, ಇಲ್ಲಾ ಸಾರು ಅನ್ನ ಶಂಡಿಗೆ ತಿನ್ನುವಂತ್ರಿ, ಅದೇನು ಮಾಡುತ್ತ ಬರಿ' ಎಂದು ಒತ್ತಾಯಿಸಿದ. ಹೊಟ್ಟೆ ಬೇರೆ ಚುರಗುಟ್ಟುತ್ತಿತ್ತು ಎಲ್ಲರೂ ಆ ವ್ಯಕ್ತಿಯ ಮನೆಯಲ್ಲಿ ಊಟ ಮಾಡಿದರು. ಅಂಜಲಿದೇವಿಯವರು ಅನ್ನ, ಕಟ್ಟಿನ ಸಾರು, ಒಂದೇ ಒಂದು ಶಂಡಿಗೆ ತಿಂದರು. ಒಂದು ತಾಸು ಮಲಗುತ್ತೇನೆಂದು ಮಲಗಿದರು. ಛಳಿ ಆದಂತಾಯಿತು, ನಡುಗತೊಡಗಿದರು. ಮಗಳು ದೊಡ್ಡ ಶಾಲು ಹೊದಿಸಿ ಮಲಗಿಸಿದರು. ಊಟಕ್ಕೆ ಹೋಗುವ ಮೊದಲೇ ಪ್ರ್ಯಾಕ್ಟೀಸು ಮುಗಿದಿತ್ತು.

ಕಲಾವಿದರು ತಮ್ಮ ಉಡುಗೆ ತೊಡುಗೆ ಹೊಂದಿಸಿಕೊಳ್ಳಲು ನಡೆದರು. ಹಾರ್ಮೋನಿಯಂ ಮಾಸ್ತರ್ ಪೇಟಿ ಹೊರಿಸಿಕೊಂಡು ಹೋದ. ಬಸಾಪುರ ಯಾವುದೇ ನಾಗರಿಕ ಸೌಲಭ್ಯವಿರದ ಕಾಡುಹಳ್ಳಿ. ಅಂಥದರಲ್ಲಿ ಹದಿನೈದು ಸಾವಿರ ರೂಪಾಯಿ ಕಲೆಕ್ಷನ್ ಮಾಡಿದ್ದರಂತೆ. ಬಣ್ಣ ಬಳಿದುಕೊಳ್ಳಲು ಹೊತ್ತಾದೀತೆಂದು ವಂದನಾ, ಸಾವಿತ್ರಿ ಬ್ಯಾಗ್ ತಯಾರಿ ಮಾಡಿಕೊಳ್ಳತೊಡಗಿದರು. ಅಂಜಲಿದೇವಿ ಇದ್ದಕ್ಕಿದಂತೆ ಚೀರಿದರು. ಗಾಬರಿಯಿಂದ ಇಬ್ಬರೂ ಮಕ್ಕಳು ಅದೇನಾಯಿತೆಂದು ಹೊದಿಸಿದ ಶಾಲು ತೆಗೆದು ನೋಡುತ್ತಾರೆ. ಇಬ್ಬರಿಗೂ ಮಾತೇ ಬಾರದು. ಇವರು ತಮ್ಮ ತಾಯಿ ಅಂಜಲಿದೇವಿಯವರೂ ಅಥವಾ ಶಾಪಗ್ರಸ್ತವಾಗಿ ಮಾನವಾಕೃತಿಯಲ್ಲಿನ ಯಾವುದಾದರೂ ರಾಕ್ಷಸಿಯೋ ಎಂಬಂತಾಗಿತ್ತು ಅವರ ಆಕಾರ, ಹಿಡಿಗಾತ್ರ ಒಂದೊಂದು ತುಟಿಗಳು, ಕಣ್ಣು ಹುಬ್ಬುಗಳು ದೊಡ್ಡವಾಗಿ ಕಣ್ಣು ಮುಚ್ಚಿ ಬಿಟ್ಟಿವೆ. ಇದೇನಾಯಿತೆಂದು ರೋದಿಸತೊಡಗಿದರು. ಅಲ್ಲಿಗೆ ಬಂದ ಮ್ಯಾನೇಜರ್ ಅಂಜಲಿದೇವಿಯವರ ಸ್ಥಿತಿಯನ್ನು ನೋಡಿ ಹೌಹಾರಿದ. ಬರೀ ಡ್ರಾಯರ್ ಮೇಲೆ ಮೇಕಪ್ಪಿಗೆ ಕುಳಿತ ಪುರುಷ

ಕಲಾವಿದರೆಲ್ಲಾ ನಾಟಕದ ಮನೆಗೆ ಓಡೋಡಿ ಬಂದರು. ಅಂಜಲಿದೇವಿಯವರಿಗೆ ಸೀರಿಯಸ್ಸಾಗಿದೆ. ಅವರು ಬದುಕುಳಿಯುವುದು ಕಷ್ಟ ಎನ್ನುವ ಮಾತು ಇಡೀ ಪ್ರೇಕ್ಷಕ ಸಮೂಹವನ್ನು ತಲುಪಿತು. 'ನಾಟಕ ಚಾಲೂ ಮಾಡ್ರಿ, ನಾವು ರೊಕ್ಕ ಕೊಟ್ಟು ಬಂದೀವಿ' ಎಂದು ಯಾರೂ ಹೇಳಲಿಲ್ಲ. ಇಡೀ ಅಖಂಡ ಜನಸ್ತೋಮವೆಲ್ಲಾ 'ಅಯ್ಯೋ ಪಾಪ ಹೀಗಾಗಬಾರದಿತ್ತು' ಎಂದು ಎಲ್ಲರೂ ನಾಟಕದ ಪ್ರ್ಯಾಕ್ಟೀಸನ ಮನೆಯ ಸುತ್ತ ನೆರೆದರು. ಕಲಾವಿದ ಶಿರಹಟ್ಟಿ ಭಾರತಿಯವರ ಮಗ ಮಂಜುನಾಥ ಗಿಟಾರ್ ನುಡಿಸಲು ಬಂದಿದ್ದ. 'ಹೇಗಾದರೂ ಮಾಡಿ ಡಾಕ್ಟರನ್ನು ಕರಕೊಂಡು ಬರಿ' ಎಂದು ಕೂಗಾಡಿದ. ಡ್ರಾಯರ್ ಮೇಲೆ ಬಣ್ಣ ಹಚ್ಚಿಕೊಂಡಿದ್ದ ಶ್ರೀಕೃಷ್ಣನ ಪಾತ್ರಧಾರಿ ಹಾಗೆಯೇ ಅವಸರದಿಂದ ಗಾಡಿ ತೆಗೆದುಕೊಂಡು ಹೋಗಿ ರಾತ್ರಿ ಒಂದು ಗಂಟೆಯ ಹೊತ್ತಿಗೆ ಡಾಕ್ಟರನ್ನು ಕರೆತಂದ. ಕೂಡಿದ ಜನ ಒಬ್ಬರೂ ಗಲಾಟೆ ಮಾಡಲಿಲ್ಲ. ಯಾರೂ ಮನೆಗೆ ಹೋಗಲಿಲ್ಲ. ಎಲ್ಲರ ಬಾಯಲ್ಲೂ ಒಂದೇ ಮಾತು 'ಪಾಪ ಹೀಗಾಗಬಾರದಿತ್ತು, ಒಳ್ಳೆಯ ಕಲಾವಿದೆ, ಎಂದು ಮರುಗಿದರೇ ಹೊರತು ಕೂಗಾಡಲಿಲ್ಲ. ಅಂಜಲಿದೇವಿಯವರ ಮೇಲಿನ ಅಪಾರವಾದ ಅಭಿಮಾನವನ್ನು ಕಂಡು ಅಕ್ಕನ ಮಗಳು ಕಲಾವಿದೆ ಸಾವಿತ್ರಿ 'ಚಿಕ್ಕಮ್ಮ ನಿನ್ನ ಬಾಳು ಧನ್ಯ' ಎಂದು ಕಣ್ಣೀರಿಟ್ಟಳಂತೆ.

ಡಾಕ್ಟರ್ ಮೂರ್‍ನಾಲ್ಕು ಇಂಜೆಕ್ಷನ್ ಮಾಡಿದರು. ಅಂಜಲಿದೇವಿಯವರಿಗೆ ಬಾವು ಇಳಿಯಲಿಲ್ಲ. ಕೊಂಚ ಮಾತಾಡತೊಡಗಿದರು. ತಮಗಾದ ಸ್ಥಿತಿಯ ಬಗ್ಗೆ ಊರಿನ ಕಲಾವಿದರಿಗಾದ ತೊಂದರೆಯ ಕುರಿತು ವಿಷಾದ ವ್ಯಕ್ತಪಡಿಸುತ್ತ ದಯವಿಟ್ಟು ನನ್ನನ್ನು ಕ್ಷಮಿಸಿ ಎಂದರಂತೆ. ಆಗ ಗುಂಪಿನಲ್ಲಿದ ಹಿರಿಯರು, "ಕ್ಷಮಾ ಮಾಡಲಿಕ್ಕೆ ನೀನೇನು. ತಪ್ಪು ಮಾಡೀಯಮ್ಮಾ, ಜೀವ ಉಳಿದ್ರ ಇಂಥಾ ನೂರು ನಾಟಕ ಆಡೀರಿ. ನಮಗೆ ನಾಟಕ ಮುಖ್ಯ ಅಲ್ಲ, ನೀನು ಮುಖ್ಯ" ಎಂದರಂತೆ.

ಬೆಳಗಾಗತೊಡಗಿದಂತೆ ಅಂಜಲಿದೇವಿ ಚಡಪಡಿಸಿದರು. ಯಾಕೆಂದರೆ ಗದಗ ಹತ್ತಿರ ಹಳ್ಳಿಯೊಂದರಲ್ಲಿ ಕಂದಗಲ್ ಹನುಮಂತರಾಯರ 'ಮಾತಂಗ ಕನ್ಯಾ ನಾಟಕವಿತ್ತು. ಆ ಹಳ್ಳಿ ಕೂಡ ಇಂಥದೇ ಅಭಿಮಾನ ಹೊಂದಿದಂಥದು. ಇಲ್ಲಂತೂ ಒಂದು ನಾಟಕ ತಪ್ಪಿ ಹೋಯಿತು. ಕೊನೆಗೆ ಅದಾದೂ ತಪ್ಪಬಾರದೆಂದು ಡಾಕ್ಟರಿಗೆ ಬೇಡಿಕೊಂಡರಂತೆ, 'ಸರ್ ನನಗೆ ಹೇಗಾದರೂ ಮಾಡಿ ಈ ಬಾವು ಇಳಿಸ್ರಿ, ಇವತ್ತಾದರೂ ನಾನು ನಾಟಕದಲ್ಲಿ ಭಾಗವಹಿಸಬೇಕು' ಎಂದಾಗ ಡಾಕ್ಟರ್ 'ನೀನಗೇನು ಹುಚ್ಚೇನಮ್ಮ, ಇಂಥ ಸ್ಥಿತಿಯಾಗ ಪಾತ್ರ ಮಾಡ್ತೀಯಾ?' 'ನಿನಗೆ ಜೀವ ದೊಡ್ಡದೋ ಕಲೆ ದೊಡ್ಡದೋ? ಎಂದು ಪ್ರಶ್ನಿಸಲು 'ನನಗೆ ಕಲೆಯೆ ದೊಡ್ಡದು ಡಾಕ್ಟ್ರೆ, ಅದರಿಂದ ತಾನೇ ನನಗೆ ಇಷ್ಟೆಲ್ಲಾ ಮಾನ, ಸನ್ಮಾನ, ಅಭಿಮಾನ ಲಭಿಸಿದ್ದು,' 'ನೋಡಮ್ಮ ಸಾಯಂಕಾಲ ೭.೦೦ ಗಂಟೆಗೆ ಬಾವು ಇಳಿದ್ರ ಪಾತ್ರ ಮಾಡು' ಎಂದರಂತೆ. ಬಸಾಪೂರಿನ ಹಿರಿಯರು ಅಂಜಲಿದೇವಿಯವರು ಪಾತ್ರ ವಹಿಸದಿದ್ದರೂ ಕೂಡ ಸಂಭಾವನೆಯನ್ನು ಕೊಟ್ಟು ಏಳೆಂಟು ಜನ ಹಿರಿಯರೂ ಅಂಜಲಿದೇವಿಯವರೊಡನೆ ಬಸ್ ಹತ್ತಿದರಂತೆ. 'ಮಾತಂಗ ಕನ್ಯಾ' ನಾಟಕ ಇರುವ ಹಳ್ಳಿಗೆ ಹೋಗಿ ಬಸಾಪೂರದಲ್ಲಾದ ಪರಿಸ್ಥಿತಿಯನ್ನು ವಿವರಿಸಲು. ಅಂದು ನೀಲಕಂಠಪ್ಪನವರು ಇವರೊಡನೆ ಬಂದಿರಲಿಲ್ಲ. ಗದಗದಲ್ಲಿಳಿದಾಗ ಎಲ್ಲರೂ ಮನೆಗೆ ಹೋದರು. ಪತ್ನಿಯ ಈ

ಆಕಾರ ಕಂಡು ನೀಲಕಂಠಪ್ಪ ದಿಗಿಲುಗೊಂಡರು. ಆಗ ಬಸಾಪುರದ ಹಿರಿಯರೇ ಮನೆಯವರನ್ನು ಸಮಾಧಾನ ಮಾಡಿದರಂತೆ.

ನಂತರ ಸಾಯಂಕಾಲ ಮಾತಂಗ ಕನ್ಯಾ ನಾಟಕದ ಹಳ್ಳಿಗೆ ಹೋದರು. ಸಂಜೆ ೫.೦೦ ಗಂಟೆಯಾದರೂ ಸಂಪೂರ್ಣ ಬಾವು ಇಳಿಯಲಿಲ್ಲ. ಅಲ್ಲಿನ ಎಲ್ಲಾ ಕಲಾವಿದರಿಗೂ ಅಂಜಲಿದೇವಿಯವರ ಪರಿಸ್ಥಿತಿಯನ್ನು ಹೇಳಿದರು. ಬಸಾಪುರ ಗ್ರಾಮದವರಂತೆ ಇಲ್ಲಿಯ ಜನರೂ ಸ್ಪಂದಿಸಿದರು. 'ಇಂಥ ಪರಿಸ್ಥಿತಿಯಲ್ಲಿ ಯಾಕ ಬರಲಿಕ್ಕೆ ಹೋಗಿದ್ರಮ್ಮಾ' ನಿಮ್ಮ ಬದಲು ಬೇರೆ ಯಾರನ್ನಾದರೂ ಕಳಿಸಬೇಕಿತ್ತು ಎನ್ನಲು 'ಹೆಸರು ಕೆಡಿಸಿಕೊಳ್ಳಬಾರದು ಅಂತ ಬಂದನ್ರೆಪಾ' ಎಂದರು ವಿನಯದಿಂದ, ಆ ನಾಟಕದ ಕಲೆಕ್ಷನ್ ಕೂಡ ಚೆನ್ನಾಗಿತ್ತು. ಆಗ ವೇದಿಕೆ ಮೇಲೆ ಬಂದು ನಾಟಕದ ಮ್ಯಾನೇಜರ್ ಮಾತಾಡಿ ಲೆಕ್ಚರ್ ಮಾಡಿದ. 'ನಮ್ಮೆಲ್ಲರ ಅಭಿಮಾನದ ನಟಿ ಅಂಜಲಿದೇವಿಯವರು ಇವತ್ತು ತೀವ್ರ ಅನಾರೋಗ್ಯದಿಂದಿದ್ದಾರೆ. ಅಲರ್ಜಿಯಾಗಿ ಮುಖ ವಿಕಾರವಾಗಿದೆ. ದಯವಿಟ್ಟು ಸಹಕರಿಸಬೇಕು' ಎಂದನು. ಕೂಡಿದ ಜನಸ್ತೋಮ "ನಮಗೆ ಹಣ ವಾಪಸ್ ಬೇಕು", "ನಾವು ನಾಟಕ ನೋಡಲೇಬೇಕು", "ಅಂಜಲಿದೇವಿಯವರನ್ನು ಸ್ಟೇಜಿಗೆ ಕರೆಸಬೇಕು" ಈ ಯಾವ ಮಾತುಗಳೂ ಅವರಿಂದ ಬರಲಿಲ್ಲ. ಎಲ್ಲರ ಪರವಾಗಿ ಒಬ್ಬ ವ್ಯಕ್ತಿ ಸ್ಟೇಜ್ ಏರಿ ಮೈಕ್ ಮುಂದೆ ಬಂದು "ಅಂಜಲಿದೇವಿಯವರು ನಮ್ಮೆಲ್ಲರ ಅಭಿಮಾನದ ನಟಿ. ಶ್ರೇಷ್ಠ ಕಲಾವಿದೆ, ಅವರ ಅನಾರೋಗ್ಯಕ್ಕೆ ನಮ್ಮೆಲ್ಲರ ಸಹಾನುಭೂತಿಯಿದೆ. ದೇವರು ಬೇಗನೆ ಆರೋಗ್ಯ ದಯಪಾಲಿಸಲಿ ಎಂದು ಬೇಡುತ್ತೇವೆ. ಅಂಜಲಿದೇವಿಯವರು ಸ್ಟೇಜಿಗೆ ಬಂದು ಮಾತು ಹೇಳುವುದಾಗದಿದ್ದರೆ ಒಳಗಡೆ ನಿಂತು ಎರಡು ಹಾಡು ಹಾಡಿದರೆ ಸಾಕು, ಎರಡು ಹಾಡು ಹಾಡಲಾಗದಿದ್ದರೆ ಒಂದೇ ಸಾಕು. ನಮ್ಮ ಹಣ ಮುಟ್ಟುತ್ತದೆ ಏನೊಪಾ" ಎಂದು ಜನರನ್ನು ಕೇಳಲು "ಹೌದು ಹೌದು" ಎಂದರು. ಕೂಡಲೇ ಅಂಜಲಿದೇವಿಯವರು ಪರದೆಯ ಹಿಂದೆ ನಿಂತು ಎರಡು ಹಾಡು ಹಾಡಿ ಪ್ರೇಕ್ಷಕರನ್ನು ರಂಜಿಸಿದರು. ರಾತ್ರಿ ೧೦.೦೦ ಗಂಟೆಯಾದರೂ ಮುಖದ ಬಾವು ಇಳಿದಿರಲಿಲ್ಲ. ಕೇವಲ ಅಂಜಲಿದೇವಿಯವರ ಎರಡು ಹಾಡಿನಲ್ಲಿ ಅಂದಿನ ಮಾತಂಗ ಕನ್ಯಾ ನಾಟಕ ಮುಗಿಯಿತು. ಎಲ್ಲಾ ಕಲಾವಿದರಿಗೂ ಸರಿಯಾದ ಸಂಭಾವನೆ ಕೊಟ್ಟು ಕಳಿಸಿದರು. ಅದರಲ್ಲೂ ಅಂಜಲಿದೇವಿಯವರಿಗೆ ಸಂಭಾವನೆಯಲ್ಲದೆ ೫೦೦ ರೂ. ಹೆಚ್ಚಿಗೆ ಹಣವನ್ನು ನೀಡಿ ಗದುಗಿನ ತನಕ ಕಳಿಸಲು ಬಂದರು. ಅಂಜಲಿದೇವಿಯವರು ಬಸಾಪುರದ ಜನರ ಅಭಿಮಾನ ಕಂಡು ಎಂಥ ಅಭಿಮಾನ ನಿಮ್ಮದು, ನನ್ನಿಂದ ಅಷ್ಟೊಂದು ತೊಂದರೆಯಾದರೂ ಮನೆಯ ಮಗಳ ಹಾಗೆ ಜೋಪಾನ ಮಾಡಿದಿರಲ್ಲ, ನಾನೇನಾದರೂ ಅಲ್ಲೇ ಸತ್ತಿದ್ದರೆ ಎಂದು ದುಃಖಿಸಲು ಬಸಾಪುರದ ಹಿರಿಯನೊಬ್ಬ "ದೇವರು ಹಾಂಗ್ಯಾಕ ಮಾಡ್ತಾನಮ್ಮಾ, ಒಂದು ವೇಳೆ ನಮ್ಮೂರಾಗ ನಿಮ್ಮ ಪ್ರಾಣ ಹೋಗಿದ್ರ ಹೂವಿನ ತೇರು ಮಾಡಿಕೊಂಡು ಮೆರವಣಿಗೆಯಿಂದ ಗದಗಿಗೆ ತಂದು ಸಂಸ್ಕಾರ ಮಾಡತಿದ್ವಿ" ಎಂದಾಗ ಅಂಜಲಿದೇವಿಯವರಿಗೆ ಜನ್ಮ, ಧನ್ಯ ಎನಿಸಿತು. ಪಕ್ಕದಲ್ಲೇ ಇದ್ದ ಸಾವಿತ್ರಿ, ''ಚೆಗವ್ವಾ ನಿನ್ನ ಬಾಳು ಸಾರ್ಥಕ ಆತಬೆ'' ಎಂದಳು.

ಅದೆಂಥ ಅಭಿಮಾನ, ಅಂತಹ ಅಭಿಮಾನ ಬರಬೇಕಾದರೆ ಅಂಜಲಿದೇವಿಯವರ ಗುಣ, ನಡತೆ, ಅಭಿನಯ ಎಷ್ಟು ಎತ್ತರದಲ್ಲಿರಬೇಕು. ಊರ ಉತ್ಸವಕ್ಕೆ ನಾಟಕ ಹಮ್ಮಿಕೊಂಡಾಗ ನೆಂಟರು ಬೀಗರು ಎಲ್ಲರೂ ಬಂದಿರುತ್ತಾರೆ. ಅದರಲ್ಲೂ ೧೫೦೦೦ ರೂ. ಕಲೆಕ್ಷನ್ ಆಗಿದ್ದಾಗ ಅಂಜಲಿದೇವಿಯವರ ಅನಾರೋಗ್ಯವನ್ನು ಕಡೆಗಾಣಿಸಿ ಇನ್ನೊಬ್ಬ ನಟಿಯಿಂದ ಎರಡು ಪಾತ್ರಗಳನ್ನು ಮಾಡಿಸಿ ಹೇಗೂ ನಿಭಾಯಿಸಬಹುದಿತ್ತು. ಕಲಾವಿದರು ಹಾಗೆ ಮಾಡಲಿಲ್ಲ. ಹಣ ಕೊಟ್ಟು ಬಂದಂತಹ ಪ್ರೇಕ್ಷಕರೂ ಹಾಗೆ ಮಾಡಲಿಲ್ಲ. ತಮ್ಮ ಕುಟುಂಬದ ಸೋದರಿಯೆಂಬಂತೆ ಆರೈಕೆ ಮಾಡಿ, ಹಿಂದೆ ಬಂದು ಉಪಚರಿಸಿ ಶುಭ ಕೋರಿದ ಇವರು ಯಾವ ಜನ್ಮದ ಸಂಬಂಧಿಕರು.

'ಮಾತಂಗ ಕನ್ಯಾ' ನಾಟಕ ನಿಂತರೂ ಕೇವಲ ಎರಡೇ ಹಾಡು ಹಾಡಿಸಿ ಸಂಭಾವನೆಗಿಂತಲೂ ಹೆಚ್ಚಿಗೆ ಐದುನೂರು ರೂಪಾಯಿ ಹಣ ಕೊಟ್ಟು ಆರೋಗ್ಯ ಕೋರಿದ ಇವರು ಯಾವ ಜನ್ಮದ ತಂದೆ ತಾಯಿಗಳೋ. ಅಭಿಮಾನ ಎಲ್ಲಾ ಸಂಬಂಧಕ್ಕಿಂತಲೂ ದೊಡ್ಡದಲ್ಲವೆ ! ಅಂಥ ಅಭಿಮಾನವನ್ನು ಎಷ್ಟು ಜನ ನಟಿಯರು ಪಡೆಯಲು ಸಾಧ್ಯ? ಈ ಎಲ್ಲಾ ಕಾರಣಕ್ಕಾಗಿಯೇ ಅಂಜಲಿದೇವಿ ಬಹಳ ದೊಡ್ಡವರಾಗಿ ಕಾಣುತ್ತಾರೆ.

ಇಷ್ಟೆಲ್ಲಾ ದೊಡ್ಡ ಸಾಧನೆಯನ್ನು ಮಾಡಿ ರಾಷ್ಟ್ರದಾದ್ಯಂತ ಸಂಚರಿಸಿ ಕಲೆಯನ್ನು ಪ್ರದರ್ಶಿಸಿ ಬಹು ಎತ್ತರಕ್ಕೆ ಏರಿದಾಗ್ಯೂ ತಾನಿನ್ನೂ ಸಣ್ಣವಳು, ಕಲಿಯತಕ್ಕಂಥವಳು ಎನ್ನುವ ವಿನಯವಂತಿಕೆಯಂತೂ ಕಿರಿಯರಿಗೆ ಮಾರ್ಗದರ್ಶನವೆನ್ನುವಂತಿದೆ. ಯಾವ ನಟರ ನಟಿಯರ ಕವಿಗಳ ಬಗ್ಗೆ ಒಂದಾದರೂ ಕೆಟ್ಟ ಮಾತನ್ನು ಆಡಿದವರಲ್ಲ. ಅದರಿಂದ ಅವರು ಬಹು ದೂರ. ಒಮ್ಮೆ ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ಬರುವ ಮುನ್ನ ೧೯೯೮ ರಲ್ಲಿ ನಾನೊಮ್ಮೆ ಈ ಪ್ರಶ್ನೆ ಕೇಳಿದ್ದೆ, "ಅಂಜಲಿದೇವಿಯವರೇ, ನಿಮಗಿಂತಲೂ ಕಿರಿಯರಿಗೆ ಅಕಾಡೆಮಿಯ ಪ್ರಶಸ್ತಿಗಳು ಬಂದಿವೆ, ನಿಮಗೇಕೆ ಬರಲಿಲ್ಲ" ಎಂದಾಗ ಅಷ್ಟೇ ಶಾಂತಿ, ಸಹನೆಯಿಂದ "ಇಲ್ಲಮ್ಮ, ಅದಕ್ಕೂ ಭಾಗ್ಯ ಬೇಕು. ಕಲೆ ಇದ್ದರೆ ಸಾಲದು, ಅದೃಷ್ಟವೂ ಬೇಕು" ಎಂದು ನಕ್ಕಿದ್ದರು. ಇದರಿಂದ ಅವರ ಹೃದಯ ವೈಶಾಲ್ಯತೆ ಅರ್ಥವಾಗುತ್ತದೆ.

ನೀಲಕಂಠಪ್ಪ ಮಾಸ್ತರರು ಹಳ್ಳಿಗಳಿಗೆ ನಾಟಕ ಕಲಿಸಲು ಹೋಗುತ್ತಿದ್ದರು. ಪಂಚಾಕ್ಷರ ಗವಾಯಿಗಳ ಗರಡಿಯಲ್ಲಿ ತಯಾರಾದ ಇವರು ಕಂದಗಲ್ ಹನುಮಂತರಾಯರ ಪಟ್ಟಶಿಷ್ಯರೂ ಹೌದು. ಅಭಿನಯ, ನಿರ್ದೇಶನ, ಹಾಡುಗಾರಿಕೆ ಎಲ್ಲದರಲ್ಲೂ ಸೈ ಎನಿಸಿಕೊಂಡಿದ್ದರು. ನಾಟಕದಂತೆ ಸಿನಿಮಾದ ಬಗ್ಗೆ ಕೂಡ ದೊಡ್ಡ ಗೀಳನ್ನೇ ಅಂಟಿಸಿಕೊಂಡಿದ್ದರು. ಆಗಾಗ ಸಿನಿಮಾ ನಿರ್ದೇಶಕರ, ಕಂಪನಿಯಲ್ಲಿ ನಟಿಸಲು ಬರುತ್ತಿದ್ದ ನಟರ ಜೊತೆಗೆ ಸಂಪರ್ಕವನ್ನಿಟ್ಟುಕೊಂಡಿದ್ದರು. ಹೀಗಾಗಿ 'ಲಕ್ಷ್ಮೀ ಸರಸ್ವತಿ', 'ಮಹಡಿಮನೆ' ಚಿತ್ರಗಳಲ್ಲಿ ಪಾತ್ರವಹಿಸಿದ್ದರು.

ಅಂಜಲಿದೇವಿಯವರೂ ಕೂಡ ಹಿಂದೊಮ್ಮೆ ಸಂಗೊಳ್ಳಿ ರಾಯಣ್ಣ ಚಲನಚಿತ್ರದಲ್ಲಿ ಕಾಣಿಸಿಕೊಂಡಿದ್ದರು. ಮತ್ತೊಮ್ಮೆ ಒಂದು ಪ್ರಖ್ಯಾತ ಚಿತ್ರ ನಿರ್ಮಾಣ ಸಂಸ್ಥೆಯಿಂದ ಪೂರ್ಣ ಪ್ರಮಾಣದ ನಾಯಕಿಯ ಪಾತ್ರಕ್ಕೆ ಕರೆ ಬಂತು. ಆದರೆ ಆ ಕರೆಯನ್ನು ಅಷ್ಟೇ ವಿನಯದಿಂದ ತಿರಸ್ಕರಿಸಿದರು ಅಂಜಲಿದೇವಿಯವರು. ಇವರು ಚಲನಚಿತ್ರಕ್ಕಿಂತ ರಂಗಭೂಮಿಯನ್ನೇ ಹೆಚ್ಚಾಗಿ ಇಷ್ಟಪಟ್ಟವರು. ರೀಲ್‌ಗಿಂತ ರಿಯಲನ್ನೇ ಆರಿಸಿಕೊಂಡವರು. ಅದಕ್ಕಾಗಿ ಮುಂದೆಂದೂ ಸಿನಿಮಾ ರಂಗದ ಬಗ್ಗೆ ಆಶೆ ಆಕಾಂಕ್ಷೆಗಳನ್ನಿಟ್ಟುಕೊಳ್ಳಲಿಲ್ಲ.

ದಿನವಿಡೀ ನಿದ್ದೆಗೆಟ್ಟು ನಟಿಸುವ ನಟರು ನಾಟಕರಂಗದಲ್ಲಿ ಎಷ್ಟೋ ಚಟಗಳಿಗೆ ದಾಸರಾಗಿರುತ್ತಾರೆ. ಅದರಲ್ಲೂ ಕುಡಿತ ಸಾಮಾನ್ಯವೆಂಬಷ್ಟರ ಮಟ್ಟಿಗೆ ವ್ಯಾಪಿಸಿರುತ್ತದೆ. ಇಂತಹದರಲ್ಲಿ ನೀಲಕಂಠಪ್ಪನವರಿಗೆ ಯಾವುದೇ ಚಟವಿರಲಿಲ್ಲ, ಥಳಕು ಬೆಳಕಿನ ಈ ರಂಗವನ್ನು ಅಂಜಲಿದೇವಿ ನೀಲಕಂಠಪ್ಪನವರು ಅದೊಂದು ಅಧ್ಯಾತ್ಮ ರಂಗವೆಂಬಂತೆ ಪೂಜ್ಯವೆಂದು ಕಂಡರು. ಅಂಜಲಿದೇವಿ ನೀಲಕಂಠಪ್ಪನವರಿಗೆ ಎರಡನೆಯ ಹೆಂಡತಿ. ಚಿಕ್ಕ ವಯಸ್ಸಿನಲ್ಲಿ ಮೊದಲನೆಯ ಹೆಂಡತಿ ತೀರಿಕೊಂಡಿದ್ದರಿಂದ ತಮ್ಮ ಬಾಳಸಂಗಾತಿಯನ್ನು ಕಲಾರಂಗದಲ್ಲಿ ಆರಿಸಿಕೊಂಡಿದ್ದರು.

ಅಂಜಲಿದೇವಿ ಹುಟ್ಟಿದ್ದೆಲ್ಲೊ, ಬೆಳೆದದ್ದೆಲ್ಲೋ, ಸುತ್ತಾಡಿದ್ದು ಇಡೀ ಕರ್ನಾಟಕದಲ್ಲಿ. ಆದರೆ ನೆಲೆ ನಿಂತದ್ದು ಗದಗದಲ್ಲಿ. ವೃತ್ತಿ ಸಂಸ್ಥೆಗಳನ್ನು ಬಿಟ್ಟ ಮೇಲೆ ಹವ್ಯಾಸಿ ನಾಟಕಗಳಿಗೆ ಹೋಗುತ್ತಿದ್ದರಷ್ಟೆ. ತಂದೆ ತಾಯಿ ಮಾತ್ರ ಸಿರಗುಪ್ಪದಲ್ಲಿ ವಾಸಿಸಿದ್ದರು. ತಿಂಗಳಿಗೆ ಎರಡು ತಿಂಗಳಿಗೆ ತಂದೆ ತಾಯಿಗಳಿಗೆ ಉಪಜೀವನಕ್ಕಾಗಿ ಹಣ ಕಳಿಸುವ ಸಂಪ್ರದಾಯವನ್ನಿಟ್ಟು ಕೊಂಡಿದ್ದಳು. ತನ್ನ ಸಂಸಾರ ತೂಗಿಸಿಕೊಂಡು ಮಗಳ, ಪತಿಯ ಯೋಗಕ್ಷೇಮದ ಜೊತೆಗೆ ಹೆತ್ತ ಮಾತಾಪಿತರ ಜವಾಬ್ದಾರಿಯನ್ನೂ ಹೊತ್ತಿದ್ದಳು. ಅಂಜಲಿದೇವಿಯೆಂದರೆ ತಂದೆ ತಾಯಿಗಳಿಗೆ ಪ್ರಾಣ. ತಂದೆ ತಾಯಿಗಳ ಬಗ್ಗೆ ಮಗಳಿಗೆ ಅಷ್ಟೇ ಗೌರವ, ಪ್ರೀತಿ, ಮೇಲಿಂದ ಮೇಲೆ ಸಂಧಿಸುವ ಸೌಭಾಗ್ಯ ಸಿಗದಿದ್ದರೂ ಕೂಡ ಪತ್ರ ವ್ಯವಹಾರ ಮಾತ್ರ ಸಾಂಗವಾಗಿ ನಡೆದಿರುತ್ತಿತ್ತು. ತಂದೆ ತಿಪ್ಪಣ್ಣನವರಿಗೆ ಕೊಂಚ ಅನಾರೋಗ್ಯವೆಂದು ಪತ್ರದಿಂದ ತಿಳಿದಾಗ ಏಕೋ ತಂದೆಯನ್ನು ನೋಡಬೇಕೆನಿಸಿತು. ಆದರೆ ಹೋಗುವಂತಿಲ್ಲ. ಮೊದಲೇ ಒಪ್ಪಿಕೊಂಡಂತಹ ನಾಟಕಗಳು, ಒಂದು ದಿನವೂ ಬಿಡುವಿರಲಿಲ್ಲ. ಯಾವುದಾದರೂ ಕುಂಟು ನೆಪ ಹೇಳಿ ಒಂದಾದರೂ ನಾಟಕವನ್ನು ತಪ್ಪಿಸಿಕೊಂಡಿರಲಿಲ್ಲ. ಒಂದೊಂದು ಹಳ್ಳಿಯಲ್ಲಿ ಮಾತಾಡಿ ನಿಗದಿಪಡಿಸಿದ ಸಂಭಾವನೆಯನ್ನು ಸಂಪೂರ್ಣವಾಗಿ ಕೊಡದವರೆಷ್ಟೋ ಜನ. ಅಂಥ ಕಾರಣಗಳನ್ನು ಮುಂದು ಮಾಡಿ ಹಣವನ್ನೇ ಪ್ರಧಾನವಾಗಿಟ್ಟುಕೊಂಡು ವ್ಯವಹಾರ ಬದ್ಧವಾಗಿ, ಕರಾರುವಾಕ್ಕಾಗಿ ಮಾತನಾಡಿ ಯಾರ ಮನವನ್ನೂ ನೋಯಿಸಿದವರಲ್ಲ. ಕೊಟ್ಟವರೂ ನಮ್ಮವರೇ, ಕೊಡದವರೂ ನಮ್ಮವರೇ, ಎಲ್ಲವನ್ನೂ ಶಿವನು ನೋಡುತ್ತಾನೆ ಎಂದು ಕಾಣದ ಶಿವನ ಮೇಲೆ ಭಾರ ಹಾಕಿ ಕೂಡುತ್ತಿದ್ದರು. ಅನ್ನ ಕೊಟ್ಟು ಎರಡು ಕುಟುಂಬಗಳನ್ನು ಅಂದರೆ ತನ್ನ ಹಾಗೂ ತನ್ನ ತಾಯಿ ತಂದೆಗಳ ಕುಟುಂಬ ಸಲುಹುತ್ತಿದ್ದ ನಾಟಕ ರಂಗ ಅಂಜಲಿದೇವಿಯವರಿಗೆ ನಿಜದೈವವಾಗಿತ್ತು. ಅನುವು ಆಪತ್ತಿಗಾಗಿ, ಅನಾರೋಗ್ಯಕ್ಕಾಗಿ ಯಾವ ಒಂದು ನಾಟಕಕ್ಕೂ ಕೈಕೊಡಲಿಲ್ಲ. ನಾಟಕ ಎಂಥ ಕಗ್ಗ ಹಳ್ಳಿಯಲ್ಲಿರಲಿ, ಅಲ್ಲಿಗೆ ಮುಟ್ಟಿಬಿಡುತ್ತಿದ್ದರು. ಇತ್ತೀಚಿಗೆ ಖರ್ಚು ಹೆಚ್ಚಾಗಿದ್ದರಿಂದ ಎತ್ತಿನ ಗಾಣದಂತೆ ದುಡಿಯುತ್ತಿದ್ದರು.

ಹೂವಿನ ಹಡಗಲಿ ತಾಲೂಕಿನ ನಾಗ್ತಿಬಸಾಪುರ ಗ್ರಾಮಕ್ಕೆ ನಾಟಕವೊಂದಕ್ಕೆ ಹೋದರು. ಆದರೆ ಅಂದು ನಾಟಕ ನಡೆಯುವ ಸೂಚನೆಗಳು ಕಂಡು ಬರಲಿಲ್ಲ. ಎಡೆಬಿಡದೆ ಜಿಟಿಜಿಟಿ ಮಳೆ ಬೀಳುತ್ತಿತ್ತು. ಪ್ರ್ಯಾಕ್ಟೀಸು ಮಾಡಿಯಾಯ್ತು. ಮಳೆ ಬರುಬರುತ್ತ ಹೆಚ್ಚಾಯಿತು. ಮಾರನೆಯ ದಿನಕ್ಕೆ ನಾಟಕ ಮುಂದೂಡಿದರು. ಪಾತ್ರ ಮಾಡಿದ ಒಬ್ಬ ವ್ಯಕ್ತಿ

ರಾತ್ರಿ ಅಂಜಲಿದೇವಿಯವರನ್ನು ಊಟಕ್ಕೆ ಕರೆದೊಯ್ದನು. ಅಲ್ಲಿ ಸಿಹಿ ಅಡುಗೆ, ಹಪ್ಪಳ, ಸಂಡಿಗೆ ಏನೆಲ್ಲಾ ಮಾಡಿದ್ದಾರೆ. ಹಸಿವೆಯೇನೋ ವಿಪರೀತವಾಗಿದೆ. ಆದರೆ ಊಟ ಸೇರಲಿಲ್ಲ. ಬಾಯೆಲ್ಲಾ ವಿಷ, ಆರೋಗ್ಯವೂ ಸರಿಯಾಗಿದೆ. ಆದರೆ ಅದೆಂತಹುದೋ ಹೇಳಿಕೊಳ್ಳಲಾರದಂತಹ ಕಳವಳ, ಯಾತನೆ ಮನದಲ್ಲಿ ಮನೆ ಮಾಡಿತ್ತು. ಕುಳಿತರೂ ನೆಮ್ಮದಿಯಿಲ್ಲ, ನಿಂತರೂ ನೆಮ್ಮದಿಯಿಲ್ಲ, ಮಲಗಿದರೂ ನೆಮ್ಮದಿಯಿಲ್ಲ. ನಾಟಕದ ಮ್ಯಾನೇಜರರನ್ನು ಕಂಡು ತಮಗಾದ ಪರಿಸ್ಥಿತಿಯನ್ನು ಹೇಳಿ ಕೂಡಲೇ ತಮ್ಮನ್ನು ಗದುಗಿಗೆ ಕಳಿಸಲು ಕೇಳಿಕೊಂಡರು. ಆದರೆ ಅವರು ಸುತಾರಾಂ ಒಪ್ಪಲಿಲ್ಲ. ಆ ಮ್ಯಾನೇಜರ್ ('ಅಮ್ಮಾ, ನಿಮ್ಮಿಂದಾನ ಈ ನಾಟಕ. ಅದ್ರಾಗ ಇವತ್ತು ಮಳೆ ಬಂದು ನಿಂತು ಹೋತು. ನೀವಿಲ್ಲಾ ಅಂದ್ರ ಜನ ಬಂದಾರ?''

''ನಾನು ಬೇಕಂತ್ಲೆ ಹೋಗೋದಿಲ್ಲ. ನನ್ನ ಮನಸ್ಸಿಗೇಕೋ ನೆಮ್ಮದಿಯಿಲ್ಲ. ನಮ್ಮ ಕುಟುಂಬದಲ್ಲಿ ಏನೋ ಕಹಿ ಘಟನೆ ನಡೆದಿರಬೇಕು. ನನಗೆ ಸಂಭಾವನೆ ಬೇಡ, ಬಸ್ ಚಾರ್ಜ್ ಕೊಡರಿ ಸಾಕು'' ಎಂದು ಅಂಗಲಾಚಿದರು. ಊಹುಂ, ಆ ಮ್ಯಾನೇಜರ್ ಕೇಳಲಿಲ್ಲ, ''ನೋಡಮ್ಮ ನಿಮಗೆ ನೆಮ್ಮದಿಯಿಲ್ಲ ಅನ್ನೋದು ನಿಮಗಷ್ಟೆ ಸಮಸ್ಯೆ. ಆದ್ರೆ ನಾಳೆ ನೀವಿಲ್ಲದೆ ನಾಟಕ ನಿಂತರೆ ಅದು ಇಡೀ ಊರಿನ ಸಮಸ್ಯೆಯಾಗುತ್ತದೆ. ನಮ್ಮ ಊರಿನ ಮಾನ ಹೋಗುತ್ತದೆ. ಆದ ಕಾರಣ ಊರಿಗೆ ಹೋಗುವ ವಿಚಾರ ಸಂಪೂರ್ಣ ಬಿಡಿರಿ. ನಾಳೆ ನಾಟಕ ಬಿಟ್ಟ ತಕ್ಷಣ ಬೆಳಗಿನ ಜಾವವೆ ಕಳಿಸ್ತೀವಿ' ಎಂದು ಸಮಾಧಾನ ಮಾಡಿ ಮನೆಗೆ ನಡೆದ. ಉಳಿದ ನಟಿಯರೊಡನೆ ಅಂಜಲಿದೇವಿ ಪ್ರ್ಯಾಕ್ಟೀಸ್ ಮನೆಯಲ್ಲಿ ಮಲಗಿದರು. ಕಣ್ಣು ಮುಚ್ಚಲಿಲ್ಲ. ನನಗೇಕೆ ಹೀಗಾಗುತ್ತಿದೆ, ಏನಾಗಿರಬಹುದು, ಯಜಮಾನರಿಗೆ ಬೇರೆ ಸಕ್ಕರೆ ಖಾಯಿಲೆ ಹೆಚ್ಚಾಗಿತ್ತು. ಅವರಿಗೇನಾದರೂ..... ಥೂ. ಈ ಹಾಳು ಯೋಚನೆ ಮಗಳಿಗೇನಾದರೂ ಆಕ್ಸಿಡೆಂಟ್, ಅದು ಇದೂ ಛೀ ಛೀ ಎಂದು ತಲೆ ಕೊಡವಿಕೊಂಡರು. ಏನೊಂದೂ ಹೊಳೆಯಲಿಲ್ಲ. ಹೊಳೆಯದ ವಿಚಾರವೊಂದು ಇದ್ದೇ ಇತ್ತು. ಕಹಿ ಘಟನೆಯ ಪರಿಣಾಮವನ್ನು ಮಾತ್ರ ಅನುಭವಿಸಿದರು. ಕಹಿ ಘಟನೆ ಯಾವುದೆಂದು ಹೊಳೆಯಲಿಲ್ಲ.

ಅಂಜಲಿದೇವಿಯವರು ನಾಗ್ತಿಬಸಾಪುರ ನಾಟಕಕ್ಕೆ ಹೋಗಲು ಬಸ್ಸು ಹತ್ತಿರಬೇಕು. ಅಷ್ಟರಲ್ಲಿ ಮನೆಗೆ ಟೆಲಿಗ್ರಾಂ ಬಂದಿತ್ತು, ಸಿರಗುಪ್ಪಾದಲ್ಲಿ ತಂದೆ ತಿಪ್ಪಣ್ಣನವರು ಅಸುನೀಗಿದ್ದಾರೆಂದು, ತಮ್ಮ ಹೆಂಡತಿ ಇನ್ನೂ ಬಸ್‌ಸ್ಟಾಂಡ್‌ನಲ್ಲಿ ಇರಬಹುದೆಂದು ನೀಲಕಂಠಪ್ಪನವರು ಓಡೋಡಿ ಬಂದರು. ಆದರೆ ಅಂಜಲಿದೇವಿಯವರನ್ನು ಕೂಡಿಸಿಕೊಂಡ ಬಸ್ ಆಗಲೇ ಹೊರಟುಹೋಗಿತ್ತು. ವಾಪಸ್ ಮನೆಗೆ ಬಂದ ನೀಲಕಂಠಪ್ಪ ತಮ್ಮ ಮನೆಯಲ್ಲಿದ್ದ ಒಡಹುಟ್ಟಿದ ತಂಗಿಗೆ ಟೆಲಿಗ್ರಾಂ ಕೊಟ್ಟು ಅಂಜಲಿದೇವಿ ಬಂದಾಗ ಯಾವುದೇ ಕಾರಣಕ್ಕೂ ಈ ವಿಷಯವನ್ನು ಹೇಳಬೇಡ, ಸಮಯ ನೋಡಿ ನಾನೇ ಹೇಳುತ್ತೇನೆಂದು ತಾಕೀತು ಮಾಡಿದರು.

ಅತ್ತ ನಾಗ್ತಿಬಸಾಪುರದಲ್ಲಿ ಮಾರನೆಯ ದಿನ ಮಳೆರಾಯನ ಆರ್ಭಟವಿರಲಿಲ್ಲ. ಶುಭ್ರ ನೀಲಾಕಾಶದಲ್ಲಿ ಪೂರ್ಣಚಂದ್ರ ಹೊಳೆಯುತ್ತಿದ್ದ. ತಿಂಗಳ ಬೆಳಕಿನ ಆಹ್ಲಾದದ ಜೊತೆಗೆ ಅಂಜಲಿದೇವಿಯವರ ಇಂಪಾದ ಕಂಠದಿಂದ ಹೊರಹೊಮ್ಮಿದ ಗಾನಸುಧೆಯನ್ನು ಜನರು ಸವಿಯುತ್ತ ಮನದಣಿಯೆ ಆನಂದವನ್ನನುಭವಿಸುತ್ತಿದ್ದರು. ಶಕ್ತಿಮಿರಿ

ಅಂಜಲಿದೇವಿಯವರು ಆ ಪಾತ್ರಕ್ಕೆ ನ್ಯಾಯ ಒದಗಿಸಿದರು. ಅದರ ಪರಿಣಾಮವಾಗಿ ಪ್ರೇಕ್ಷಕರಿಂದ ಚಪ್ಪಾಳೆಗಳ ಸುರಿಮಳೆಯ ಜೊತೆ ಆಹೇರ ಕೂಡ ಬಂದಿತು. ನಾಟಕ ಯಶಸ್ವಿಯಾಯಿತು. ಎಲ್ಲರಿಗೂ ಸಮಾಧಾನವಾಯಿತು. ಆದರೆ ಅಂಜಲಿದೇವಿಯವರ ಮನಕ್ಕೆ ಮಾತ್ರ ಸಮಾಧಾನವಿರಲಿಲ್ಲ. ನಾಟಕ ಮುಗಿಸಿ ನಸುಕಿನಲ್ಲಿ ಲಾರಿ ಏರಿ ಪ್ರಯಾಣ ಬೆಳೆಸಿದರು. ಮಧಾಹ್ನದ ಹೊತ್ತಿಗೆ ಗದಗಿಗೆ ಬಂದರು.

ಮನೆಯಲ್ಲಿ ಪತಿ ನೀಲಕಂಠಪ್ಪ, ಮಗಳು ವಂದನಾ ಆರೋಗ್ಯವಾಗಿದ್ದಾರೆ. ತಮಗಾದ ನಿಲ್ಲದ ಯಾತನೆಯ ಬಗ್ಗೆ ಹೇಳಿದರು. "ನನಗ್ಯಾಕ ಹಿಂಗಾಗುತ್ತೀರಿ?" ನೀಲಕಂಠಪ್ಪನವರು ಸಮಾಧಾನದಿಂದ ನಿನಗೆ ಬಿಡುವಿಲ್ಲದಾಂಗ ನಾಟಕ ಬಂದವಲ್ಲ ಅದಕ್ಕಾಗಿರಬೇಕು, ಹೋಗು ಹೋಗು, ಜಲ್ದಿ ಸ್ನಾನ ಮಾಡು, ಊಟ ಮಾಡು' ಎಂದು ಒತ್ತಾಯಪಡಿಸಿದರು. ನೀಲಕಂಠಪ್ಪನವರ ತಂಗಿ ಬಾಯಿಬಿಡುವುದರಲ್ಲಿದ್ದಳು. ಹೇಳಬಾರದೆಂದು ಸಂಜ್ಞೆ ಮಾಡಿದರು. ಅಂಜಲಿದೇವಿ ಸ್ನಾನ ಮಾಡಿದಳು, ಊಟ ಮತ್ತೆ ಸೇರಲಿಲ್ಲ. ಆಗ ಪತಿಯೆದುರು ಕಣ್ಣೀರು ಹಾಕಲು, ಇನ್ನು ಮುಚ್ಚಿಟ್ಟು ಪ್ರಯೋಜನವಿಲ್ಲವೆಂದು ಮೊನ್ನೆ ಬಂದಂತಹ ಟೆಲಿಗ್ರಾಂ ವಿಷಯವನ್ನು ಸಮಾಧಾನದಿಂದ ಹೇಳಿದರು. ಈ ವಿಷಯ ಕೇಳಿದ ಅಂಜಲಿದೇವಿಯವರಿಗೆ ಸಾವಿರ ಸಿಡಿಲು ಒಮ್ಮೆಗೆ ಬಡಿದಂತಾಗಿ, ನಿಂತ ನೆಲದಲ್ಲಿಯೇ ಕುಸಿದುಬಿಟ್ಟರು.

"ಹಿಂಗ್ಯಾಕ ಮಾಡಿದ್ರಿ ಆ ಹೊತ್ತಾ ಹೇಳಿ ಕಳಿಸಬೇಕಿತ್ತು."

"ನೀನು ಹೋಗಿ ಮಾಡೋದಾದ್ರೂ ಏನಿತ್ತು ಹುಡುಗಿ. (ಇದು ನೀಲಕಂಠಪ್ಪನವರು ತಮ್ಮ ಹೆಂಡತಿಯನ್ನು ಸಂಬೋಧಿಸುತ್ತಿದ್ದ ರೀತಿ) ಪಂಚಾಕ್ಷರ ಗುರುಗಳ ಕೃಪೆಯಿಂದ ಬಂದದ್ದು ಈ ರಂಗಭೂಮಿ, ನಮಗೆ ಅದರ ಸೇವಾನ ಮುಖ್ಯ.''

"ಹಂಗಾದ್ರ ಏನು ಮಾಡೂನ್ರಿ?'

"ಇನ್ನೇನು ಮಾಡೂದೈತಿ, ನಾಳಿಗೆ ಹ್ಯಾಂಗೂ ಮೂರು ದಿನಾಗುತ್ತ, ಯಿಸಬಾಯಿ ತೊಳಿಸಿ ನೋಡಿದರೂನು, ಅತ್ತೇನ ಮಾತಾಡಿಸಿ ಬರೂನು" ಎಂದರು ನೀಲಕಂಠಪ್ಪ,

"ಯಾವ ಮುಖ ಇಟುಗೊಂಡು ಅಲ್ಲಿಗೆ ಹೋಗೂನ್ರಿ, ಜನರಾದ್ರೂ ಏನಂದಾರು, ಸ್ವಂತ ತಂದಿ ತೀರಿದ್ರೂ ಮಣ್ಣಿಗಾಗದ ಮಗಳು ಎಂಥಾಕಿ ಅನ್ನಲಿಕ್ಕಿಲ್ಲ, ನಮ್ಮಪ್ಪನ ಕೊನಿ ಮುಖ ದರ್ಶನಾನೂ ಇಲ್ಲದಾಂಗ ಮಾಡಿದರಲ್ರಿ" ಎಂದು ಕಣ್ಣೀರಿಟ್ಟಳು ಅಂಜಲಿದೇವಿ.

ತಾನು ಅತ್ಯಂತ ಗೌರವಿಸುತ್ತಿದ್ದ, ಪ್ರೀತಿಸುತ್ತಿದ್ದ ತಂದೆಯ ಕೊನೆಗಾಲದಲ್ಲಿ ಸೇವೆ ಮಾಡಲಾಗಲಿಲ್ಲವೆಂಬ ಕೊರಗು, ಕೊನೆಯ ಮುಖದರ್ಶನವಾಗಲಿಲ್ಲವೆಂಬ ಕೊರಗಿನಿಂದ ದುಃಖಿಸುತ್ತ ಪತಿಯೊಡನೆ ಸಿರಗುಪ್ಪಾಕ್ಕೆ ಹೋದರು. ಅಲ್ಲಿ

ತಾಯಿಯನ್ನು ಕಂಡೊಡನೆ ತಬ್ಬಿಕೊಂಡು ಬಿಕ್ಕಳಿಸಿದಳು. ಹೃದಯದ ಭಾರ ಇಳಿಯುವಷ್ಟು ಅತ್ತು ಕೊನೆಗೆ ತಾಯಿಯನ್ನು ತಾನೇ ಸಾಂತ್ವನ ಮಾಡಿದಳು.

ತಮ್ಮ ತಾಯಿ ನರಸಮ್ಮ ಎಂದೂ ಪತಿಯಿಂದ ಅಗಲಿದವರಲ್ಲ. ತಂದೆ ತಾಯಿ ವೃದ್ಧಾಪ್ಯದಲ್ಲಿದ್ದಾಗ್ಯೂ ಒಬ್ಬರನ್ನೊಬ್ಬರು ಅಗಲಿರದಂಥ ಅಗಾಧವಾದ ಪ್ರೇಮದಲ್ಲಿ ಅವರು ಬಂಧಿತರಾಗಿದ್ದರು. ಪತಿಯ ಅಗಲಿಕೆಯಿಂದ ನರಸಮ್ಮ ಮೂರ್ನಾಲ್ಕು ದಿನಗಳಲ್ಲಿ ಸಂಪೂರ್ಣ ಇಳಿದುಹೋಗಿದ್ದಳು. ತಮ್ಮ ತಾಯಿಯ ಆರೋಗ್ಯ ಕೂಡ ಸರಿಯಿಲ್ಲವೆಂಬ ಸಂಗತಿಯನ್ನು ಹಿತೈಷಿಯೊಬ್ಬರಿಂದ ಕೇಳಿ ತಿಳಿದ ಅಂಜಲಿದೇವಿ ದಂಪತಿಗಳು ತಾಯಿಯ ಆರೋಗ್ಯಕ್ಕಾಗಿ ಕೊಂಚ ಹಣ ನೀಡಿ ತಂದೆಯ ಎಲ್ಲಾ ಕರ್ಮಾದಿ ದಿವಸ ಮಾಡಿ ಗದುಗಿಗೆ ಪ್ರಯಾಣಿಸಿದರು. ತಂದೆಯನ್ನು ಕಳೆದುಕೊಂಡ ಅಂಜಲಿದೇವಿಗೆ ಕೊಂಚ ದಿನಗಳಲ್ಲಿ ತಾಯಿಯನ್ನು ಕಳೆದುಕೊಳ್ಳುತ್ತೇನೆಂಬ ಭಯವೂ ಕಾಡತೊಡಗಿತು.

ಹಾಗೂ ಹೀಗೂ ಒಂದು ತಿಂಗಳ ಕಾಲ ಗತಿಸಿತು. ಮನಸ್ಸು ಸರಿಯಿಲ್ಲವೆಂದು ಮನೆಯಲ್ಲಿ ಕುಳಿತುಕೊಳ್ಳಲಿಲ್ಲ. ಮತ್ತೆ ಯಥಾರೀತಿ ಹವ್ಯಾಸಿ ತಂಡಗಳ ನಾಟಕಗಳಿಗೆ ಹೋಗತೊಡಗಿದಳು. ಹೊಸ ಹೊಸ ಜನರ ಮಧ್ಯೆ ಪಾತ್ರಗಳಲ್ಲಿ ತಲ್ಲೀನಳಾದಾಗ ತಂದೆಯ ನೆನಪು ಸ್ವಲ್ಪ ಸ್ವಲ್ಪ ದೂರವಾಗುತ್ತಿತ್ತು. "ಹೋದವರು ಮರಳಿ ಬರುವರೇನು, ಅವರು ಮುಂದೆ, ನಾವು ಹಿಂದೆ ಇಲ್ಲಿ ಯಾರೂ ಶಾಶ್ವತರಲ್ಲ. ದೇವರು ಮನುಷ್ಯರಿಗೆ ನೀಡಿದಂಥ ಮಹೋನ್ನತವಾದಂತಹ ವರವೆಂದರೆ ಈ ಮರೆವು, ಮರಿಬೇಕು ಹುಡುಗಿ" ಎಂದು ಹೆಂಡತಿಯನ್ನು ಸಾಂತ್ವನ ಮಾಡಿ ನಾಟಕಗಳಿಗೆ ಕಳಿಸುತ್ತಿದ್ದ ನೀಲಕಂಠಪ್ಪನವರಿಗೆ ಒಂದು ದಿನ ಸಿರಗುಪ್ಪಾದಿಂದ ಮತ್ತೊಂದು ಟೆಲಿಗ್ರಾಂ ಬಂದಿತು,

ಅಂಜಲಿದೇವಿ ಗದಗ ಹತ್ತಿರದ ಹಳ್ಳಿಯೊಂದರಲ್ಲಿ ನಾಟಕದಲ್ಲಿ ಭಾಗವಹಿಸಿದ್ದರು. ಹಿಂದೆ ತಂದೆಯವರು ತೀರಿದ ವಿಷಯದ ಟೆಲಿಗ್ರಾಂನ್ನು ಕೊಡದಿದ್ದಕ್ಕೆ ಬಹಳ ಬೇಸರ ಮಾಡಿಕೊಂಡು ಮನ ನೊಂದಿದ್ದರು ಅಂಜಲಿದೇವಿ. ಈ ಸಲವೂ ಅಂಥ ನೋವನ್ನು ಕೊಡುವುದು ಬೇಡವೆಂದು ನೀಲಕಂಠಪ್ಪನವರು ತಾವೇ ಟೆಲಿಗ್ರಾಂನ್ನು ತೆಗೆದುಕೊಂಡು ಹೋದರು. ನಾಟಕ ಮುಗಿದ ಕೂಡಲೇ ಟೆಲಿಗ್ರಾಂ ತೋರಿಸಿದರು. ತಂದೆಯ ದುಃಖ ಮಾಸದ ಮುನ್ನ ತಾಯಿಯ ತೀವ್ರ ಅನಾರೋಗ್ಯದ ಆಘಾತ “ಸಹಿಸಿಕೊಳ್ಳುವಷ್ಟು ಹೃದಯ ಬಲಾಢ್ಯವಾಗಿರಲಿಲ್ಲ. ಸುಮ್ಮನೆ ಕಣ್ಮುಚ್ಚಿ ಕುಳಿತರು. ಕಣ್ಣೀರು ಧಾರಾಕಾರವಾಗಿ ಹರಿದ ಮೇಲೆ ಹೃದಯ ಹಗುರ ಮಾಡಿಕೊಂಡು ತಮ್ಮ ಸಹ ನಟಿಯೋರ್ವಳಿಗೆ ಮೇಕಪ್ ಸಾಮಾನು ಒಯ್ಯಲು ಹೇಳಿದರು. ಕೂಡಲೇ ನೀಲಕಂಠಪ್ಪ - "ಹೀಂಗಾ ಹೋಗೋದು ಬ್ಯಾಡ, ಮನಿಗೆ ಹೋಗಿ ಇನ್ನೊಂದಿಷ್ಟು ಡ್ರೆಸ್ ತಗೊಂಡು ಹೋಗೂನು" ಎಂದರು.

"ಅವ್ವನ್ನ ನೋಡಾಕ ಡ್ರೆಸ್ ಯಾಕ್ರಿ....."

"ನಾಳೆಯಿಂದ ಆಲೂರ ಹತ್ತಿರ ಒಂದು ಹಳ್ಳಿಯಾಗ ನಾಟಕ ಐತೆಲ್ಲ, ಒಂದು ವಾರ ಜಾತ್ರಿ ಕಾರ್ಯಕ್ರಮ."

"ಅಧ್ರ ಇಂಥದ್ರಾಗ ನಾಟಕಕ್ಕೆ ಹ್ಯಾಂಗ ಹೋಗೋದು. ಹಿಂದ ಅಪ್ಪನ ಮುಖ ಕಾಣದಾಂಗ ಆತಲ್ಲ, ಹಾಂಗ ಆದ್ರ ಗತಿ?"

"ಮೊದಲು ಸಿರಗುಪ್ಪಕ್ಕೆ ಹೋಗೂನು, ಈಗ್ಲೇ ವಿಚಾರ ಮಾಡೋದು ಬ್ಯಾಡ" ಎಂದು ಹೆಂಡತಿಗೆ ಸಾಂತ್ವನ ಮಾಡಿ ಧೈರ್ಯ ತುಂಬಿ ಗದಗಗೆ ಬಂದು ಒಂದು ವಾರದ ಕಾಲ ನಾಟಕಕ್ಕೆ ಬೇಕಾದ ಡ್ರೆಸ್‌ಗಳನ್ನು ತುಂಬಿಕೊಂಡು ಸಿರಗುಪ್ಪಾಕ್ಕೆ ಬಂದರು. ಮಗಳು ಬಂದಿಳಿದು ತನ್ನ ಪರಿಸ್ಥಿತಿಯನ್ನು ಹೇಳಿಕೊಳ್ಳುವುದಾಗಲೀ ನಾಲ್ಕು ಹಿತವಚನವನ್ನು ಹೇಳಿ ಮಗಳಿಗೆ ಧೈರ್ಯ ತುಂಬುವುದನ್ನಾಗಲೀ ಮಾಡುವಂತಹ ಸ್ಥಿತಿಯಲ್ಲಿ ತಾಯಿ ನರಸಮ್ಮ ಇರಲಿಲ್ಲ. ಬಾಹ್ಯ ಪ್ರಪಂಚದ ಅರಿವಿಲ್ಲದ ಜೀವಂತ ಹೆಣವಾಗಿ, ಉಸಿರಾಡುವ ಹೆಣವಾಗಿ ಮಲಗಿದ್ದಳು. ಅಂಜಲಿದೇವಿ ತಾಯಿ ಮೇಲೆ ಬಿದ್ದು ಜೋರಾಗಿ ಅತ್ತಳು. ಅದಾವುದೂ ತಾಯಿಗೆ ಗೊತ್ತಾಗಲೇ ಇಲ್ಲ. ತಾಯಿಯನ್ನು ನೋಡಿಕೊಳ್ಳುತ್ತಿದ್ದ ಡಾಕ್ಟರ್ ಬಂದರು, ಇಂಜೆಕ್ಷನ್ ಮಾಡಿದರು. ಮತ್ತೊಂದಿಷ್ಟು ಮಾತ್ರೆಗಳನ್ನು ಬರೆದುಕೊಟ್ಟರು. ಅಂಜಲಿದೇವಿ ತಾಯಿಯ ಬಗ್ಗೆ, ಆರೋಗ್ಯ ಸುಧಾರಿಸುವ ಬಗ್ಗೆ ಕೇಳಿದಳು.

"ನಮ್ಮ ಕೈಯಾಗ ಏನೈತ್ರಿ, ನಾವು ಮಾಡೋ ಪ್ರಯತ್ನ ಮಾಡೂನು" ಎಂದು ಹೇಳಿ ಹೋದರು. ಸಾಯಂಕಾಲದ ಹೊತ್ತಿಗೆ ಅಂಜಲಿದೇವಿಯ ಕಲಾಬಂಧುಗಳಾದ ಪುಷ್ಪಮಾಲಾ, ಅಬ್ದುಲ್‌ಸಾಬ ಅಲ್ಲಿಗೆ ಬಂದರು.

ಒಂದು ದಿನ ಕಳೆಯಿತು. ಮಾರನೆಯ ದಿನದಿಂದಲೇ ಆಲೂರ ಹತ್ತಿರ ಒಂದು ವಾರ ಕಾಲ 'ಕುರುಕ್ಷೇತ್ರ' ನಾಟಕ. ವಿಷಯ ತಿಳಿದ ಆ ಊರ ನಟರೂ ಸಿರಗುಪ್ಪಾಕ್ಕೆ ಬಂದರು. ಅಂಜಲಿದೇವಿಯವರಿಗೆ ಸಾಂತ್ವನ ಮಾಡಿದರು. ಹಾಗೆಯೇ ಮುಂದಿನ ಕಾರ್ಯಕ್ಕಾಗಿ ಜಾಗೃತಗೊಳಿಸಿದರು. ಅಂಜಲಿದೇವಿ "ದಯವಿಟ್ಟು ನನ್ನನ್ನು ಕ್ಷಮಿಸಿ, ಇಂಥ ಪರಿಸ್ಥಿತಿಯಾಗ ನನ್ನ ತಾಯಿ ಒಬ್ಬಾಕೀನ ಬಿಟ್ಟು ನನಗೆ ಬರಲಿಕ್ಕಾಗೋದಿಲ್ಲ" ಎಂದಾಗ ಊರವರ ಸಹಾಯಕ್ಕೆ ಕಲಾವಿದರಾದ ಅಬ್ದುಲಸಾಬ ಬಂದರು.

'ಅಲ್ಲಮ್ಮ, ನೀನು ಇಲ್ಲಿ ಇದ್ದಾದ್ರೂ ಏನು ಮಾಡ್ತಿ, ನಿನ್ನ ಪಾತ್ರ ಸರಿತೂಗಿಸೋರು ಯಾರೂ ಇಲ್ಲಮ್ಮ, ಅಲ್ಲಿ ಸಾವಿರಾರು ಜನರಿಗೆ ನಿರಾಸೆ ಆಗ್ತದ, ಪುಷ್ಪಮಾಲಾ ಕೂಡ, "ಹೌದು ಅಂಜಲಿ, ನಿನ್ನ ದುಃಖದಾಗ ನಾವೆಲ್ಲಾ ಭಾಗಿಗಳೇ, ಕಲಾವಿದೆ ತನ್ನ ನೋವನ್ನು ನುಂಗಿಕೊಂಡು ಜನರನ್ನು ರಂಜಿಸಬೇಕು, ಅವಳೇ ನಿಜವಾದ ಕಲಾವಿದೆ. ಒಂದು ದಿನದ ನಾಟಕವಲ್ಲ ಒಂದು ವಾರ ನಾಟಕ ಆಡಬೇಕು. ಅಲ್ಲದೆ ಸಿರಗುಪ್ಪಾಕ್ಕೆ ಆಲೂರ ಬಹಳ ದೂರವೇನಲ್ಲಾ, ಹಂಗೇನಾದರೂ ಕಹಿ ಪ್ರಸಂಗ ಬಂದ್ರ ಎಲ್ಲರೂ ಬರೂನು" ಎಂದರು. ಒಬ್ಬರಲ್ಲ ಇಬ್ಬರಲ್ಲ ಎಲ್ಲರೂ ನಾಟಕಕ್ಕೆ ಹೋಗಲು ಒತ್ತಾಯಪಡಿಸುವವರೆ.

ಒಂಬತ್ತು ತಿಂಗಳು ಹೊತ್ತು ಹೆತ್ತ ಮಾತೆಯ ಅಂತಿಮ ಸೇವೆಯಲ್ಲಿ ಹತ್ತಿರವಿರಬೇಕೆಂದು ಒಬ್ಬರೂ ಹೇಳಲಿಲ್ಲ. ಅವರೆಲ್ಲಾ ಹೇಳುವುದು ಕಲಾವಿದೆಯ ಬದುಕಿಗೆ ನಿಜವಿರಬಹುದು. ಆದರೆ ಕಲಾಬದುಕಿನ ಹೊರಗೆ ಇನ್ನೊಂದು ಸಂಬಂಧವಿದೆಯಲ್ಲ ಕರುಳಿನ ಸಂಬಂಧ, ಕರುಳಿನ ಸಂಬಂಧ ದೊಡ್ಡದೋ ಕಲಾ ಸಂಬಂಧ ದೊಡ್ಡದೋ ತನಗೆ

ತಾನೇ ಪ್ರಶ್ನೆ ಮಾಡಿಕೊಂಡಳು. ಉತ್ತರ ಹೊಳೆಯಲಿಲ್ಲ. ಹೆಚ್ಚು ಯೋಚಿಸಲಿಕ್ಕೂ ಅಲ್ಲಿ ಸಮಯವಿರಲಿಲ್ಲ. ಮನೆಯ ಅಕ್ಕಪಕ್ಕದವರೂ ಅಂಜಲಿದೇವಿಯವರಿಗೆ ಧೈರ್ಯ ತುಂಬಿದರು. "ನಾವೆಲ್ಲಾ ಇದ್ದೇವೆ, ನೀವೇನೂ ಭಯ ಪಡದಿರಿ. ನಿಮ್ಮ ಕಾಯಕಕ್ಕೆ ನೀವು ಹೋಗಿರಿ. ನಿಮ್ಮ ತಂದೆ ತಾಯಿ ಕೂಡ ಕಲಾವಿದರೆ. ಕಾಯಕ ಮಾಡೇ ಬದುಕಿದವರು. ಕಾಯಕ ದೊಡ್ಡದು. ಚಿಂತಿಸದೆ ಹೋಗಿರೆಂದು ಹೇಳಿದರು. ವಿಧಿಯಿಲ್ಲದೆ ತಾಯಿಯ ಪಾದಗಳನ್ನು ಹಣೆಗೆ, ತಲೆಗೆ ಒತ್ತಿಕೊಂಡು ಮುತ್ತಿಟ್ಟು ತಾಯಿಯ ಆರೋಗ್ಯದ ಖರ್ಚಿಗೆಂದು ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು, ಆಲೂರಿಗೆ ಪ್ರಯಾಣಿಸಿದರು.

ಒಂದು ವಾರ ಆಲೂರ ಹತ್ತಿರದ ಹಳ್ಳಿಯಲ್ಲಿ ನಾಟಕಗಳು ಜಯಭೇರಿ ಮೊಳಗಿಸಿದವು. ಅಂಜಲಿದೇವಿಯವರು ಬಹಳ ಚೆನ್ನಾಗಿ ಅಭಿನಯಿಸಿದರು. ಸಿರಗುಪ್ಪಾದಿಂದ ಯಾವ ವಿಷಯವೂ ತಿಳಿಯಲಿಲ್ಲ ಏನಾದರೂ ಅಹಿತಕರ ಘಟನೆ ನಡೆದಿದ್ದರೆ ಊರಿನವರು ತಿಳಿಸುತ್ತಿದ್ದರು. ಇನ್ನೇನು ತಾಯಿ ಆರೋಗ್ಯವಾಗಿರಬೇಕು. ದೇವರ ಕೃಪೆ, ದೇವರು ನಮ್ಮ ಪಾಲಿಗೆ ಬಂದನೆಂದು ಸಂತೋಷದಿಂದ ಸಿರಗುಪ್ಪಾಕ್ಕೆ ಹೋಗಿ ತಾಯಿಯನ್ನು ಮಾತಾಡಿಸಬೇಕು. ಅವೊತ್ತು ನಿನಗೆ ಪ್ರಜ್ಞೆ ಇರಲಿಲ್ಲವಮ್ಮಾ ನಿನ್ನನ್ನು ನೋಡಿ ಅತ್ತು ಹೊದೆ ಎಂದು ಅಮ್ಮನ ಹತ್ತಿರ ಹೇಳಬೇಕು, ಬಹಳ ಮಾತಾಡಬೇಕು, ಕೊನೆಗಾಲಕ್ಕೆ ಅಪ್ಪ ಏನು ಹೇಳಿ ಹೋದರು, ಅಪ್ಪ ನನ್ನನ್ನು ನೆನಸಿದರೆ ಹೀಗೆ ತಾಯಿಯನ್ನು ಕಂಡು ಕೇಳಬೇಕಾದ ಪ್ರಶ್ನೆಗಳ ಪಟ್ಟಿಯನ್ನೇ ಮನದಲ್ಲಿ ಮಾಡಿಕೊಂಡರು. ಕನ್ನಡದಲ್ಲಿ ಒಂದು ಗಾದೆ ಮಾತಿದೆ ಮನದಲ್ಲಿ ಮಂಡಿಗೆ ಮಾಡಿದರೆ ಗೋದಿ ರೊಕ್ಕ ಕೊಡುವವರಾರೆಂದು. ನೀಲಕಂಠಪ್ಪನವರು ಬೇಗ ರೆಡಿಯಾಗಲು ಹೇಳಿದರು. "ನಾನು ರೆಡಿಯಾಗೇ ಅದೀನಿ, ಸಿರಗುಪ್ಪಾ ಎಷ್ಟು ದೂರ ಐತಿ, ಸಾಕಷ್ಟು ಬಸ್ ಅದಾವು" ಎಂದು ಉತ್ತರಿಸಲು, ಅಲ್ಲೇ ಹುಡುಗಿ, ಇವತ್ತು ಸಿಂಧನೂರ ಆಚೆ ತುರ್ವಿಹಾಳದಲ್ಲಿ ನಾಟಕ ಐತೆಲ್ಲಾ ಪ್ರ್ಯಾಕ್ಟೀಸಿಗೆ ಹೋಗಬೇಕಾಗಿತ್ತು. ಆಲೂರ ನಾಟಕದ ಸಲುವಾಗಿ ಬರೋಂಗಿಲ್ಲಾಂತ ಹೇಳಿದ್ವಿ, ಈಗ ಹೋಗಬೇಕಲ್ಲಾ" ಈ ಮಾತನ್ನು ಹೇಳಿದಾಗ ಅಂಜಲಿದೇವಿಯವರಿಗೆ ಮಾತು ಭಾರವಾಯ್ತು. ಆದರೂ ಸಣ್ಣ ಸ್ವರದಲ್ಲಿ, "ಅಲ್ರಿ ಸಿಂಧನೂರಿಗೆ ಹೋಗಬೇಕಾದ್ರೆ ಸಿರಗುಪ್ಪಾದಿಂದಾನೇ ಹೋಗಬೇಕು. ಅಲ್ಲಿ ಇಳಿದು ನೋಡಿಕೊಂಡು ಹೋಗೂನು." "ಈಗಾಗ್ಲೆ ಸಮಯವಾಯ್ತು, ಹೊಸ ನಾಟಕ ಅಲ್ವೇನೆ, ಅತ್ತೆಯವರು ಆರೋಗ್ಯವಾಗೇ ಇದ್ದಾರೆ, ಇಲ್ಲದಿದ್ರೆ ಹೇಳಿ ಕಳಿಸುತ್ತಿದ್ದರು' ಎಂದರು ನೀಲಕಂಠಪ್ಪನವರು. ವಿಧಿಯಿಲ್ಲದೆ ಪತಿಯ ಮಾತಿಗೆ ತಲೆ ಹಾಕಿ ಬಸ್ ಹತ್ತಿದರು.

ತುರ್ವಿಹಾಳ ತಲುಪಿದಾಗ ಸಾಯಂಕಾಲ ೪.೦೦ ಗಂಟೆಯ ಹೊತ್ತಾಗಿತ್ತು. ನಾಟಕದ ಪಾತ್ರಧಾರಿಗಳು ಅಂಜಲಿದೇವಿಯವರ ಸಲುವಾಗಿ ಬಸ್ ಸ್ಟಾಂಡ್‌ನಲ್ಲಿ ಕಾಯ್ದಿದ್ದರು. ಒಬ್ಬ ಕಲಾವಿದ ಅಂಜಲಿದೇವಿಯವರನ್ನು ನೋಡಿ ಒಡೋಡಿ ಬಂದು ಅವರ ಸೂಟಕೇಸ್ ಹಿಡಿದು ಈಗ ನಮಗ ಉಸಿರು ಬಂತು ನೋಡಿ ಎಂದು ಕರೆದೊಯ್ದು, ಮಾರ್ಗಮಧ್ಯದಲ್ಲಿಯೇ ಸೋಡಾ ಅಂಗಡಿಯ ಹುಡುಗ ಗದುಗಿನವನು ಓಡೋಡಿ ಬಂದು, ಯಕ್ಕಾ ನಾನು ನಿನ್ನ ಗದುಗಿನಿಂದ ಬಂದೆ ಎಂದ, ಅಂಜಲಿದೇವಿ ಮತ್ತೇನಪಾ ಎಲ್ಲರೂ ಆರಾಮ ಅದಾರಿಲ್ಲ ಅಂದಾಗ, ನಮ್ಮನಿಯಾಗೇನು ಆರಾಮ ಆದಾರ್‍ರಿ, ನೀವು ಸುದ್ದಿ ಕೇಳಿರಿಲ್ಲಾ, ಹುಡುಗ ಕೇಳಿದ. ಸುದ್ದಿ, ಯಾವ ಸುದ್ದಿ,

ನಡೆಯುತ್ತ ಕೇಳಿದರು ಅಂಜಲಿದೇವಿ. ನಿಮ್ಮ ತಾಯಿಯವರು ನಾಲ್ಕು ದಿವಸದ ಹಿಂದೆ ಹೋಗಿಬಿಟ್ರಂತಲ್ಲಾ. ಈ ಮಾತು ಕೇಳಿದ್ದೇ ತಡ, ಅಂಜಲಿದೇವಿ ಕುಸಿದು ಬಿದ್ದು ಬಿಟ್ಟರು, ನೀಲಕಂಠಪ್ಪನವರಿಗೆ ಸಿಡಿಲು ಬಡಿದಂತಾಯಿತು. ಅವರು

ಸುತ್ತಲೂ ಜನರು ಸೇರಿದರು. ವಿಷಯ ತಿಳಿದು ಕೆಲವರು ಕನಿಕರಪಟ್ಟರು. ಇನ್ನೂ ಕೆಲವರು ಈ ವಿಷಯವಾಗಿ ನಾಟಕ ಎಲ್ಲಾ ಎಲ್ಲಿ ನಿಂತು ಹೋಗುವುದೋ ಎಂದು ಕಳವಳಗೊಂಡರು. ಕೊನೆಗೆ ನೀಲಕಂಠಪ್ಪನವರು ಅಂಜಲಿದೇವಿಯವರ ತಲೆ ನೇವರಿಸುತ್ತ, "ಏಳು ಹೋಗೋಣ" ಎಂದರೆ, "ನನ್ನ ಸರ್ವಸ್ವ ಎಲ್ಲಾ ಹೋತಲ್ರಿ, ಹಡದವ್ವ ಸಿಗ್ತಾಳೇನ್ರಿ, ಅಯ್ಯೋ ನಾನೆಂಥ ನತದೃಷ್ಟೆ' ಎಂದು ಅತ್ತರು. ಆಕಾಶವೇ ಹರಿದು ಮೇಲೆ ಬಿದ್ದಂತಾಗಿತ್ತು. "ನಾನೆಲ್ಲಿಗೂ ಬರೋದಿಲ್ರಿ, ನಾನೆಲ್ಲಿಗೂ ಬರೋದಿಲ್ಲ" ಎಂದು ಹಠ ಹಿಡಿದರು. "ಈ ರೀತಿ ಹಠ ಮಾಡೋದ್ರಿಂದ ಏನು ಪ್ರಯೋಜನ ಹೇಳು? ಸತ್ತು ಹೋದ ತಾಯಿ ತಿರುಗಿ ಬರ್ತಾಳೇನು?" ನೀಲಕಂಠಪ್ಪನವರ ಈ ಮಾತಿಗೆ "ತಿರುಗಿ ಬರೋದಿಲ್ರಿ, ಕೊನೆಯ ಮುಖ ದರ್ಶನವಾದರೂ ಆಗುತಿತ್ತಿಲ್ರಿ". ಅಪ್ಪನ ಕೊನೆಯ ಮುಖ ಕಾಣಲಿಲ್ಲ. ಈಗ ಹೆತ್ತ ಮಾತೆಯ ಮುಖ ದರ್ಶನವೂ ಆಗಲಿಲ್ಲ. ಯಾರಾರೋ ಮಣ್ಣಿನ ಋಣ ತೀರಿಸ್ತಾರೆ, ಜನ್ಮ ನೀಡಿದ ತಂದೆ ತಾಯಿಗಳಿಗೆ ಹಿಡಿ ಮಣ್ಣು ಹಾಕದಂಥ ನಂದೂ ಒಂದು ಜನ್ಮಾನ ! ಧಿಕ್ಕಾರ ನನ್ನ ಜನ್ಮಕ್ಕ ಎಂದು ಹಳಿದುಕೊಂಡರು. "ಆಗಿದ್ದು ಆಗಿ ಹೋಯಿತು. ನಿನ್ನ ದುಃಖ ನುಂಗಿಕೊಂಡು ಇಂದಿನ ನಾಟಕ ನಡೆಸಿಕೊಡು. ಇದೂ ಕೂಡ ನಿನ್ನ ಸತ್ವ ಪರೀಕ್ಷೆ, ನಾವು ಪಂಚಾಕ್ಷರ ಅಜ್ಜನವರ ಕರಸಂಜಾತರು. ಅಜ್ಜನ ಅಪ್ಪಣೆಯ ಮೇರೆಗೆ ಕಲಾರಂಗಕ್ಕೆ ಬಂದವರು. ಯೋಚಿಸಿ ನೋಡು, ಈಗ ನಾವು ಹಿಂದಿರುಗಿ ಹೋದರೆ ನಾಟಕ ನಿಲ್ಲುತ್ತದೆ.ನಮಗೆ ದುಃಖವಾದರೂ ಚಿಂತಿಯಿಲ್ಲ. ಇನ್ನೊಬ್ಬರಿಗೆ ಸಂತೋಷ ನೀಡಬೇಕು" ಎಂದಾಗ ನಿಟ್ಟುಸಿರಿಟ್ಟು ಮೇಲೆದ್ದು ನಾಟಕದ ಮನೆಯ ಕಡೆಗೆ ಹೆಜ್ಜೆ ಹಾಕಿದರು.

ತಾಯಿ ಸತ್ತ ದುಃಖದಲ್ಲೇ ಪ್ರ್ಯಾಕ್ಟೀಸು ಮಾಡಿದರು. ಹೊಸ ನಾಟಕದ ಮಾತು ಸರಿಯಾಗಿ ಬರಲಿಲ್ಲ. ಇವತ್ತಿನ ನಾಟಕ ಸರಿಯಾಗಿ ಆಗದೆಂಬ ನಿರ್ಧಾರವನ್ನು ಕಲಾವಿದರು ಮಾಡಿದರು. ಕಲೆಕ್ಷನ್ ಎಣಿಕೆಗೂ ಮೀರಿತ್ತು. ಜನರು ಟಿಕೆಟ್ ತೆಗೆಯಿಸಿ ಥೇಟರ್ ತುಂಬಿ ನಿಂತುಕೊಂಡರು. ನಾಂದಿಯಾಯಿತು. ಈಗಾಗಲೇ ನಾಟಕದ ಮನೆಯಲ್ಲಿ ಕನವರಿಸಿದ ಅಂಜಲಿದೇವಿಯವರನ್ನು ಕಂಡ ಕಲಾವಿದರು ಮೊದಲನೆಯ ದೃಶ್ಯವೇ ಬಿದ್ದು ಹೋಗುವುದೆಂದು ಅಂಜಿದರು.

ಅಂಜಲಿದೇವಿಯವರು ರಂಗದ ಮೇಲೆ ಬಂದರು. ತಾಯಿಯನ್ನು ಕಳೆದುಕೊಂಡು ದುಃಖದಲ್ಲಿದ್ದ ಅನಾಥ ಮಗಳಾಗಿ ಅಲ್ಲ, ಆ ಪಾತ್ರವೇ ತಾವಾಗಿ ಬಂದರು. ಕದಲದೆ, ತೊದಲದೆ ಒಂದೊಂದು ಸಂಭಾಷಣೆ ಹೇಳುತ್ತಿದ್ದರೆ ಪ್ರೇಕ್ಷಕರಿಂದ ಕಿವಿಗಡಚಿಕ್ಕುವ ಕರತಾಡನ. ಒಂದು ದೃಶ್ಯಕ್ಕಲ್ಲ, ಪ್ರತಿಯೊಂದು ದೃಶ್ಯಕ್ಕೂ ಇದೇ ಕರತಾಡನ. ಪ್ರೇಕ್ಷಕರಿಂದ ಶಹಬಾಸಗಿರಿ. ದೂರದಲ್ಲಿ ನೆಲದ ಗೇಟಿನಲ್ಲಿ ಕುಳಿತು ನಾಟಕ ನೋಡುತ್ತಿದ್ದ ನೀಲಕಂಠಪ್ಪನವರು ಜೋರಾಗಿ

ಅಳತೊಡಗಿದರು. ತಾಯಿ ಸತ್ತ ದುಃಖ ನುಂಗಿ ಪಾತ್ರವೇ ತಾನಾಗಿ ಅಭಿನಯಿಸಿದ ಅಂಜಲಿದೇವಿಯವರಿಗೆ ಒಬ್ಬ ಅಭಿಮಾನಿ ಐವತ್ತು ರೂಪಾಯಿ ಆಹೇರ ಮಾಡಿ ಸ್ಟೇಜ್ ಮೇಲೆ ಬಂದು ಎಲ್ಲಾ ಪ್ರೇಕ್ಷಕರಿಗೆ ವಿಷಯ ತಿಳಿಸಿದ.

"ಕಲಾಭಿಮಾನಿಗಳೇ, ಇವತ್ತು ಅಂಜಲಿದೇವಿಯವರ ಅಭಿನಯವನ್ನು ನೋಡಿ ಎಲ್ಲರೂ ಚಪ್ಪಾಳೆ ಮೂಲಕ ಅವರಿಗೆ ಮೆಚ್ಚುಗೆ ಸೂಚಿಸಿದಿರಿ. ಇವತ್ತು ಅಂಜಲಿದೇವಿಯವರು ಪಾತ್ರ ಮಾಡುವಂತಿರಲಿಲ್ಲ. ಹೆತ್ತ ತಾಯಿ ಸತ್ತ ಸುದ್ದಿ ಕೇಳಿ ಕುಸಿದುಬಿದ್ದ ಅವರನ್ನು ಅವರ ಪತಿ ಸಮಾಧಾನ ಮಾಡಿ ಕರೆತಂದರು. ಅಂತಹ ದುಃಖವನ್ನು ಒಡಲೊಳಗೆ ನುಂಗಿ ಅಭಿನಯಿಸಿದ ಅಭಿಜಾತ ಕಲಾವಿದೆ ಅಂಜಲಿದೇವಿಯವರು" ಎಂದಾಗ ಹರ್ಷೋದ್ಗಾರದ ನಡುವೆ ಕರತಾಡನ ಮಾಡಿ ಕಲಾವಿದೆಯನ್ನು ಸನ್ಮಾನಿಸಿದರು. ಈ ಅಂಜಲಿದೇವಿಯವರು ಪಾತ್ರಗಳಲ್ಲಿ ನಟಿಸಲಿಲ್ಲ. ಪಾತ್ರವೇ ತಾನಾಗಿ ಪರಕಾಯ ಪ್ರವೇಶ ಮಾಡುತ್ತಿದ್ದರು. ಇಂಥ ಸಂದಿಗ್ಧ ಎಷ್ಟು ಜನ ಕಲಾವಿದರ ಬದುಕಲ್ಲಿ ಬರುತ್ತದೆ, ಕಲೆ ಅನ್ನುವುದು ಎಲ್ಲರನ್ನೂ ಕೈಬೀಸಿ ಕರೆಯುತ್ತದೆ, ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎನ್ನುವಂತೆ, ಅಂಥ ಕೆಲವರಲ್ಲಿ ಒಬ್ಬರು ಅಂಜಲಿದೇವಿಯವರು.

## ರಂಗದ ಕುರಿತು ಅಂಜಲಿದೇವಿಯವರ ಅನಿಸಿಕೆಗಳು

ನಾವು ನಿರ್ವಹಿಸುವ ಪಾತ್ರ ಎಂಥದೇ ಇರಲಿ ಕಥಾನಾಯಕಿ, ನಾಯಕಿ, ಖಳನಾಯಕಿ, ಪೋಷಕ, ಹಾಸ್ಯ ಯಾವುದಾದರೂ ಸರಿ ಆ ಪಾತ್ರಕ್ಕೆ ನ್ಯಾಯ ಒದಗಿಸುವುದೊಂದೇ ನಮ್ಮ ಗುರಿಯಾಗಿರಬೇಕು. ಜೊತೆಗೆ ನಮ್ಮ ಕರ್ತವ್ಯ ಕೂಡ. ನಮಗೆ ಅನ್ನ ಹಾಕುವ ಯಾವ ತಂಡಗಳೇ ಇರಲಿ, ಅದು ವೃತ್ತಿ ಸಂಸ್ಥೆ ಇರಬಹುದು, ಹವ್ಯಾಸಿ ತಂಡ ಇರಬಹುದು. ನಮ್ಮ ಪಾತ್ರಕ್ಕೆ ನಾವು ಎಷ್ಟರ ಮಟ್ಟಿಗೆ ನ್ಯಾಯ ಒದಗಿಸಿದ್ದೇವೆ ಎನ್ನುವುದರ ಬಗ್ಗೆ ಮಾತ್ರ ಆಲೋಚಿಸುತ್ತಿರಬೇಕು.

ನಾಟಕರಂಗ ನಮಗೆ ಅನ್ನ ಹಾಕಿದೆ. ಯಶಸ್ಸನ್ನೂ ತಂದು ಕೊಟ್ಟಿದೆ. ಹಿಂದೆ ನಮ್ಮ ತಂದೆಯವರ ಕಾಲದಿಂದ ನಾವು ಈ ರಂಗಕ್ಕೆ ಒಗ್ಗಿದವರು, ಇದನ್ನು ಬಿಟ್ಟರೆ ನಮಗೆ ಬೇರೆ ವೃತ್ತಿಯೇ ಇರಲಿಲ್ಲ. ನಮ್ಮ ಯಜಮಾನರು ಹಾಗಲ್ಲ. ಸಿಕ್ಕಂತಹ ಸರಕಾರಿ ನೌಕರಿಯನ್ನು ಬಿಟ್ಟು ಈ ರಂಗಕ್ಕೆ ಬಂದವರು. ಮನಸ್ಸು ಮಾಡಿದ್ದರೆ ಆಗಿನ ವಾತಾವರಣದಲ್ಲಿ ನಾವು ಬೇಕಾದಷ್ಟು ಹಣವನ್ನು ಗಳಿಸಬಹುದಿತ್ತು. ಮನುಷ್ಯ ಜನ್ಮದ ಸಾರ್ಥಕತೆ ಸಾಕು ಅನ್ನುವುದರಲ್ಲಿದೆ. ಬರೀ ಬೇಕು, ಬೇಕು ಅಂದರೆ ಇದಕ್ಕೆ ಕೊನೆಯಿಲ್ಲ. ಆದರೆ ನಾವು ಹಣವನ್ನು ಗಳಿಸಲಿಲ್ಲ. ಜನರನ್ನು ಗಳಿಸಿದವು. ಒಂದು ನಾಟಕಕ್ಕೆ ಎಷ್ಟೇ ಸಂಭಾವನೆ ಕೊಟ್ಟರೂ ಇನ್ನಷ್ಟು ಕೊಡಬೇಕಾಗಿತ್ತು ಎನ್ನಿಸುತ್ತದೆ. ಇನ್ನಷ್ಟು ಕೊಟ್ಟರೂ ಕೂಡ ಸಾಕೆನಿಸುವುದಿಲ್ಲ. ಅದರಿಂದ ನೆಮ್ಮದಿಯೂ ದೊರೆಯುವುದಿಲ್ಲ. ನೆಮ್ಮದಿ ಸಿಗುವುದು ನಮ್ಮ ಕಲೆಯನ್ನು ನೋಡಿ ಪ್ರೇಕ್ಷಕ ಚಪ್ಪಾಳೆಯನ್ನು ತಟ್ಟಿದಾಗ ಮಾತ್ರ. ಅದೇ ನಮಗೆ ಶಾಶ್ವತವಾದಂತಹ ಸಂಪತ್ತು.

ಆಗಿನ ನಾಟಕ ಈಗಿನ ನಾಟಕಕ್ಕೆ ವ್ಯತ್ಯಾಸವೇನೂ ಇಲ್ಲ. ಇತ್ತೀಚೆಗೆ ವರ್ಣ, ವಸ್ತ್ರ ಹಾಗೂ ವಿದ್ಯುತ್‌ನಲ್ಲಿ ಹಿಂದಿಗಿಂತಲೂ ರಂಗವನ್ನು ಆಕರ್ಷಿಸಬಹುದು. ಆದರೆ ಆಗಿನ ಕಲಾವಿದರಲ್ಲಿದ್ದ ಶಿಸ್ತು, ವಿನಯವಂತಿಕೆ, ತಾಳ್ಮೆ ಈಗಿನ ಕಲಾವಿದರಲ್ಲಿ ಬಹಳವಾಗಿ ಕಂಡುಬರುತ್ತಿರಲಿಲ್ಲ. ಆಗ ಸೌಂದರ್ಯದ ಜೊತೆ ಕಲೆಗೂ ಬೆಲೆಯಿತ್ತು. ಈಗ ಸೌಂದರ್ಯಕ್ಕೆ ಬೆಲೆ ಹೆಚ್ಚಾಗಿದೆ.

ನಾನು ವೃತ್ತಿ ಸಂಸ್ಥೆಗಳನ್ನು ಇಷ್ಟಪಡುತ್ತೇನೆ, ಗೌರವಿಸುತ್ತೇನೆ. ಹಾಗೆಯೇ ಹವ್ಯಾಸಿ ತಂಡಗಳನ್ನೂ ಇಷ್ಟ ಪಡುತ್ತೇನೆ, ಗೌರವಿಸುತ್ತೇನೆ. ವೃತ್ತಿ ಸಂಸ್ಥೆಯಲ್ಲಿ ಕಲೆಯ ಮೆರುಗಿದೆ. ಹವ್ಯಾಸಿ ತಂಡಗಳಲ್ಲಿ ಹಣದ ಮೆರುಗಿದೆ. ಹಾಗಂತ ಕೇವಲ ಹಣಕ್ಕಾಗಿ ನಾನೆಂದೂ ಪಾತ್ರವಹಿಸಿಲ್ಲ. ಕಲೆಯೇ ನನ್ನ ಸತ್ಯಶುದ್ಧ ಕಾಯಕವೆಂದು ನಂಬಿ ನಡೆದಿದ್ದೇನೆ. ಮನದ ಆನಂದಕ್ಕಾಗಿ ವೃತ್ತಿ ಸಂಸ್ಥೆಯಲ್ಲಿ ದುಡಿದಿದ್ದೇನೆ. ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಹವ್ಯಾಸಿ ತಂಡಗಳಲ್ಲಿ ದುಡಿದಿದ್ದೇನೆ.

ಹಿಂದೆ ಯಾವುದೇ ನಾಟಕ ಪ್ರದರ್ಶಿಸುವ ಮುನ್ನ ಸಾಕಷ್ಟು ತರಬೇತಿ ಪ್ರ್ಯಾಕ್ಟೀಸು ಮಾಡುತ್ತಿದ್ದೆವು. ಈಗ ಹಾಗಲ್ಲ, ಮೊದಲೇ ದಿನಾಂಕವನ್ನು ನಿಗದಿಪಡಿಸಿ ಸ್ವಲ್ಪೇ ಅವಧಿಯಲ್ಲಿ ನಾಟಕವಿಡುತ್ತಾರೆ. ವಾರವಿರುವಾಗ ನಟಿಯರನ್ನು ಗೊತ್ತು ಮಾಡುತ್ತಾರೆ. ಅವಸರದಲ್ಲಿ ಅವರೂ ಸರಿಯಾಗಿ ಮಾತು ಕಲಿತಿರುವುದಿಲ್ಲ. ಇನ್ನು ನಟರೂ ಕಲಿತಿರುವುದಿಲ್ಲ. ಹಿಂದಿನ ಪ್ರಾಂಪ್ಟ್‌ನವರು ಹೇಳಿದಂತೆ ಮೈಕ್ ಮುಂದೆ ಮಾತಾಡುತ್ತಾರೆ. ತಮ್ಮ ಹಾಡನ್ನು ತಾವೇ ಹಾಡುವ ಪರಿಪಾಠವು ತಪ್ಪಿದೆ. ರೆಡಿಮೇಡ್ ಹಾಡುಗಳನ್ನು ಹೆಣ್ಣು ಗಂಡು ಸ್ವರ ಮಾಡಿ ಹಾಡುವ ಕಲಾವಿದರನ್ನು ಗೊತ್ತು ಮಾಡಿ ಹಾಡಿಸುತ್ತಾರೆ. ಹಿನ್ನೆಲೆ ಗಾಯಕರು ಹಾಡುತ್ತಿರುತ್ತಾರೆ. ರಂಗದ ಮೇಲಿರುವ ನಟರು ನಟಿಯರು ಬಾಯಿ ಮುಚ್ಚಿಕೊಂಡಿರುತ್ತಾರೆ. ಯಾಕೆಂದರೆ ಆ ಹಾಡಿನ ಸಾಹಿತ್ಯವೇ ಇವರಿಗೆ ತಿಳಿದಿರುವುದಿಲ್ಲ.

ನಾಟಕವಾಡುವ ನಟನಟಿಯರಿಗೆ ಸಂಪೂರ್ಣವಾಗಿ ಆ ನಾಟಕದ ಪರಿಚಯವೇ ಇರುವುದಿಲ್ಲ. ಹಿಂದೆ ನಾವು ಅಭಿನಯಿಸುವ ನಾಟಕಗಳನ್ನು ಸಂಪೂರ್ಣವಾಗಿ ಅಭ್ಯಸಿಸುತ್ತಿದ್ದವು. ಅವುಗಳಲ್ಲಿನ ಸಾಹಿತ್ಯವನ್ನು ಆಸ್ವಾದಿಸಿ ಕವಿಗಳನ್ನು ಕೊಂಡಾಡುತ್ತಿದ್ದೆವು.

ನಾನು ಬಡವಿ
ಆತ ಬಡವರ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು "

ಎನ್ನುವ ಕವಿವಾಣಿಯಂತೆ ನಾವು (ಸತಿ ಪತಿ) ಇದ್ದೆವು. ಹಣದಿಂದಲೇ ನೆಮ್ಮದಿ ಸಿಗುವಂತಿದ್ದರೆ, ಶ್ರೀಮಂತರೆಲ್ಲಾ ಹಣ ಕೊಟ್ಟು ನೆಮ್ಮದಿಯನ್ನು ಕೊಂಡೊಯ್ಯುತ್ತಿದ್ದರು. ಇದ್ದುದರಲ್ಲಿಯೇ ತೃಪ್ತಿ ಪಟ್ಟರೆ ಆ ಕ್ಷಣವೇ ನಮಗೆ ನೆಮ್ಮದಿ ಸಿಗುತ್ತದೆ.

ನಾನೊಂದು ಸ್ವಂತ ಮನೆ ಮಾಡಬೇಕಿತ್ತು, ಕಾರು ಮಾಡಬೇಕಿತ್ತು, ಬ್ಯಾಂಕಿನಲ್ಲಿ ಹಣವಿಡಬೇಕಿತ್ತು, ಹಾಗೆ ಹೀಗೆ ಎಂದು ಯೋಚಿಸಲೇ ಇಲ್ಲ. ಇನ್ನೂ ದೊಡ್ಡ ದೊಡ್ಡ ನಟರ ಜೊತೆ ಅಭಿನಯಿಸಿ ಅಭಿನಯ ಕಲೆಯನ್ನು ಕಲಿಯಬಹುದಿತ್ತೇನೋ ಎಂದು ಮಾತ್ರ ಯೋಚಿಸುತ್ತಿರುತ್ತೇನೆ. ಆದರೂ ಕೂಡ ಆ ನಿಟ್ಟಿನಲ್ಲಿ ನಾನು ಪುಣ್ಯವಂತೆಯೇನೋ ಅನ್ನಿಸುತ್ತದೆ. ಕಂದಗಲ್ ಹನುಮಂತರಾಯರ, ನಲವಡಿ ಶ್ರೀಕಂಠಶಾಸ್ತ್ರಿಗಳ, ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ, ಎಚ್.ಎನ್. ಹೂಗಾರರ, ಮೃಡದೇವ ಗವಾಯಿಗಳ, ಎಲಿವಾಳ ಸಿದ್ದಯ್ಯಸ್ವಾಮಿಗಳ, ಓಬಳೇಶ್ವರ, ದೊಡ್ಡವಾಡ ಶಿವಪುತ್ರಯ್ಯ, ಸಂಕನೂರ ಶಿವಲಿಂಗಶಾಸ್ತ್ರಿಗಳಂಥವರ ಜೊತೆಗಿನ ಒಡನಾಟ, ಅವರಿಂದ ಕಲಿತದ್ದು ನನಗೆ ನೆಮ್ಮದಿ ತಂದಿದೆ.

ಅಂಜಲಿದೇವಿ ನೀಲಕಂಠಪ್ಪನವರದು ಒಂದು ಆದರ್ಶ ಕುಟುಂಬವಾಗಿತ್ತು. ಸತಿಪತಿಯರಿಬ್ಬರೂ ಆಗಾಗ ತಮ್ಮ ಕಲಾಬದುಕಿನ ಬಗ್ಗೆ ಚಿಂತನೆಯನ್ನು ನಡೆಸುತ್ತಿದ್ದರೇ ಹೊರತು ಸಾಂಸಾರಿಕ ತಾಪತ್ರಯಗಳಿಗಾಗಿ ಚಿಂತಿಸುತ್ತಿರಲಿಲ್ಲ. ತೇಲಿಸುವುದು ಅಥವಾ ಮುಳುಗಿಸುವುದು ಎಲ್ಲವೂ ಪಂಚಾಕ್ಷರ ಗುರುಗಳಿಗೇ ಸೇರಿದ್ದು ಎಂದು ಎಲ್ಲದನ್ನೂ ಗುರುವಿಗೇ ಸಮರ್ಪಿಸಿಬಿಡುತ್ತಿದ್ದರು. ನೀಲಕಂಠಪ್ಪನವರಿಗೆ ಇತ್ತೀಚೆಗೊಂದು ಬೆಂಬಿಡದ ಸಂಗಾತಿಯಾಗಿತ್ತು. ಅದು ಸಕ್ಕರೆ ಖಾಯಿಲೆ, ನಾಟಕಗಳಿಗಾಗಿ ಊರಿಂದೂರಿಗೆ ಅಲೆಯುವುದು, ಸಮಯಕ್ಕೆ ಸರಿಯಾಗಿ ಊಟವಿಲ್ಲ. ಅದೂ ಸರಿಯಾದ ಊಟವಿಲ್ಲ, ದಿನಂಪ್ರತಿ ನಿದ್ದೆಗೆಡುವುದು. ಇದರಿಂದಾಗಿ ಸಕ್ಕರೆ ಖಾಯಿಲೆ ಹೆಚ್ಚಾಯಿತು. ಎಲ್ಲಾ ವಿಧದ ಔಷಧೋಪಚಾರವೂ ನಡೆಯಿತು. ಅಲೋಪತಿಕ, ಆಯುರ್ವೇದಿಕ, ಹೋಮಿಯೋಪತಿಕ್ ಏನೆಲ್ಲಾ ಮಾಡಿದರೂ ರಕ್ತದಲ್ಲಿನ ಸಕ್ಕರೆಯ ಅಂಶ ಕಡಿಮೆಯಾಗಲೇ ಇಲ್ಲ. ಹೀಗಾಗಿ ಕಣ್ಣುಗಳು ಮಂಜಾಗತೊಡಗಿದವು. ಪತಿಯ ಈ ಸ್ಥಿತಿಯಿಂದ ಅಂಜಲಿದೇವಿ ಕಂಗಾಲಾದರು. ಪ್ರತಿಯೊಂದು ಗಳಿಗೆಯೂ ತಮ್ಮನ್ನು ಬಿಡದ, ಎಲ್ಲಾ ಕೆಲಸಕ್ಕೂ ಪ್ರೇರಣೆಯಾಗಿ ಧೈರ್ಯ ತುಂಬುತ್ತಿದ್ದ ನೀಲಕಂಠಪ್ಪನವರು ಹಾಸಿಗೆ ಹಿಡಿದರು.

ಇದೇ ಸಂದರ್ಭದಲ್ಲಿ ಗಂಗಾವತಿ ತಾಲೂಕಿನ ಪ್ರಮುಖ ವಾಣಿಜ್ಯ ಕೇಂದ್ರವಾದ ಕಾರಟಗಿಯಲ್ಲಿ ರಕ್ತರಾತ್ರಿ ನಾಟಕಕ್ಕೆ ಬುಕ್ ಮಾಡಲು ಬಂದರು. ಅಂಜಲಿದೇವಿಯವರು ಪತಿಯನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗಲು ಸುತಾರಾಂ ಒಪ್ಪಲಿಲ್ಲ. ಈ ಹಿಂದೆ ಹೆತ್ತವರನ್ನು ಹೀಗೆಯೇ ಮುಖ ಕಾಣದೆ ಕಳೆದುಕೊಂಡೆನೆಂಬ ದುಃಖ ಆಗಾಗ ಮರುಕಳಿಸುತ್ತಿತ್ತು. ಬುಕ್ ಮಾಡಲು ಬಂದವರಿಗೆ "ಅಣ್ಣಾ, ಇದೊಂದು ಸಲ ದಯವಿಟ್ಟು ಕ್ಷಮಾ ಮಾಡ್ರಿ ನನಗಾಗೋದಿಲ್ಲ" ಎಂದರು. ಹಾಸಿಗೆಯ ಮೇಲೆ ನರಳುತ್ತ ಮಲಗಿದ್ದ ನೀಲಕಂಠಪ್ಪನವರು ಆ ಸ್ಥಿತಿಯಲ್ಲೂ ಹಾಸ್ಯ ಚಟಾಕಿ ಹಾರಿಸಿ, "ಇದಾ ಅಲ್ಲ ನೋಡು ಹುಡುಗಿ, ನನಗೇನಾಗ್ಯೆತಿ ಹಾಂ ನಾವು ಕಲಾವಿದರು. ಎಂಥ ಸ್ಥಿತಿಯಲ್ಲೂ ಧೃತಿಗೆಡಬಾರದು. ಇದು ನಮ್ಮ ಕಾಯಕ ಅಲ್ಲೇನು? ನೀನು ಇಲ್ಲಿದ್ದರೆ ಏನು ಮಾಡ್ತಿದಿ? ನನಗೆ ಉಪಚಾರ ಮಾಡ್ತಿದಿ ಅಷ್ಟಾ, ನನ್ನ ನೋವು ತಗೊಂತಿಯೇನು, ಅದನ್ನು ನಾನು ಅನುಭವಿಸಬೇಕಲ್ಲಾ, ಹೋಗಿ ಬಾ, ನಾಕು ದುಡ್ಡ

ಬರ್ತಾವು ಮನಿ ಖರ್ಚಿಗೆ, ಔಷಧಕ್ಕಾಗುತ್ತ, ಅಲ್ಲ ಆ ಜನರಿಗೆ ಸಂತೋಷ ಆಗುತ್ತ, ನೀನು ಹೋಗದ ಅವರನ್ನೂ ನಿರಾಸೆಗೊಳಿಸಿ ನೀನು ದುಃಖ ಮಾಡ್ತಾ ಕುಂತ್ರ ಪ್ರಯೋಜನವೇನು".

ಪತಿಯ ಆಧ್ಯಾತ್ಮಿಕ ಹಿತವಚನದಿಂದ ಕಾರಟಗಿಗೆ ಬಂದರು. ಅಲ್ಲಿ ರಕ್ತರಾತ್ರಿ ನಾಟಕ, ಭೀಮನ ಪಾತ್ರಕ್ಕೆ ಚಲನಚಿತ್ರ ನಟ ಸುಧೀರ ಬಂದಿದ್ರು. ಕ್ಯಾನವಾಸ್ ಮಾಡಿದ ನಾಟಕ, ಬಹಳ ಪ್ರಚಾರವೂ ಆಗಿತ್ತು. ಪತಿಯ ಒತ್ತಾಯದ ಮೇರೆಗೆ ಒಲ್ಲದ ಮನಸ್ಸಿನಿಂದ ಅಂಜಲಿದೇವಿ ಕಾರಟಗಿಗೆ ಬಂದಿದ್ರು. ದೇಹ ಕಾರಟಗಿಯಲ್ಲಿದ್ದರೂ, ಮನಸ್ಸು ಗದಗದಲ್ಲಿತ್ತು. ಪ್ಯಾಕ್ಟೀಸು ಮಾಡಿ ಎಲ್ಲರೂ ಯೋಗಕ್ಷೇಮ ಮಾತಾಡುತ್ತ ಕುಳಿತರು. ಸಪ್ಪಗೆ ಕುಳಿತ ಅಂಜಲಿದೇವಿಯವರನ್ನು ಕಂಡು ಸುಧೀರ, "ಅದ್ಯಾಕಮ್ಮ ಒಂಥರಾ ಇದ್ದೀರಿ" ಎಂದಾಗ, ಬುಕ್ ಮಾಡಲು ಹೋದವರು ಅವರ ಪತಿಯು ಅನಾರೋಗ್ಯದಿಂದ ಸೀರಿಯಸ್ಸಾಗಿ ಮಲಗಿದ್ದಾರೆಂದು ಹೇಳಿದರು. ಈ ವಿಷಯ ಬಾಯಿಂದ ಬಾಯಿಗೆ ಹರಡಿತು. ಇಂಥ ಸಂಕಟ ಸಮಯದಲ್ಲಿ ಬಂದು ಸಪ್ಪೆ ಮೋರೆ ಹಾಕಿ ಕುಳಿತ ಅಂಜಲಿದೇವಿಯವರಿಂದ ಇನ್ನೆಂತಹ ಅಭಿನಯವನ್ನು ನಿರೀಕ್ಷಿಸಬಹುದೆಂದು. ರಾತ್ರಿ ಊಟಕ್ಕೆ ಕರೆದರೂ ಹೋಗಲಿಲ್ಲ. ಮನಸ್ಸಿಗೆ ಸಮಾಧಾನವಿರಲಿಲ್ಲ ನಾಟಕದ ಕಲೆಕ್ಷನ್ ತುಂಬಾ ಚೆನ್ನಾಗಿ ಆಗಿತ್ತು. ಮೊದಲೇ ಟಿಕೆಟ್ ಮಾರಿದ್ದರು. ಅಂದು ಬರೀ ನೆಲದ ಟಿಕೆಟ್ ಮಾತ್ರ ಲಭ್ಯವಿತ್ತು.

ಕಾರಟಗಿ ಕೂಡ ಕಲಾವಿದರ, ಕಲಾಭಿಮಾನಿಗಳ ಊರು. ಹಿಂದೆ ಮೃಡದೇವ ಗವಾಯಿಗಳ ಕಂಪನಿ ನಷ್ಟದಲ್ಲಿದ್ದಾಗ ಆತ್ಮೀಯತೆಯಿಂದ ಬಂದು ಅಭಿನಯಿಸಿದ್ದರು. ಎಲೆವಾಳ ಸಿದ್ದಯ್ಯಸ್ವಾಮಿಗಳು-ಅಂಜಲಿದೇವಿಯವರ ಅಪೂರ್ವ ಸಂಗಮ ಕಾರಟಗಿಯಲ್ಲಾಗಿತ್ತು. ದೊಡ್ಡ ದೊಡ್ಡ ಕಂಪನಿಗಳು ಕಾರಟಗಿಗೆ ಬಂದು ಹೋಗಿವೆ. ಅದರಲ್ಲೂ ಅಂಜಲಿದೇವಿಯವರ ಹೆಸರು ಅತ್ಯಂತ ಖ್ಯಾತಿ ಹೊಂದಿತ್ತು. ಹಿಂದೆ ಅನೇಕ ಸಲ ಕಾರಟಗಿಗೆ ಬಂದು ಹೋದದ್ದಿದೆ. ಒಳ್ಳೆಯ ಹೆಸರಿನಿಂದ ಹೋದದ್ದಿದೆ. ಆದರೀಗ ಪತಿಯ ಸ್ಥಿತಿಯಿಂದ ಕೈಕಾಲುಗಳಲ್ಲಿ ಶಕ್ತಿಯೇ ಕುಂದಿದಂತಾಗಿತ್ತು. ರಾತ್ರಿ ಊರಿಗೆ ಫೋನ್ ಮಾಡಲು ಪತಿಯ ಸ್ಥಿತಿ ಗಂಭೀರವಾಗಿತ್ತು. ರಾತ್ರಿ ನಾಟಕ ಪ್ರಾರಂಭವಾಯಿತು. ಬಣ್ಣ ಹಚ್ಚಿಕೊಳ್ಳುವ ತನಕ ಅಂಜಲಿಯಾಗಿರುತ್ತಿದ್ದವರು ರಂಗಕ್ಕೆ ಬಂದ ಮೇಲೆ ದ್ರೌಪದಿಯೇ ಆಗಿಬಿಡುತ್ತಿದ್ದರು. ಕಾರಟಗಿಯಲ್ಲೂ ಹಾಗೇ ಆಯಿತು. ಪ್ರವೇಶಕ್ಕೆ ಹೋಗುವ ಮುನ್ನ ಪತಿಯ ನೆನಪೇ ಆಗಿತ್ತು. ನಂತರ ನಾಟಕ ಮುಗಿಯುವ ತನಕ ಯಾವ ನೆನಪೂ ಇಲ್ಲ. ದ್ವಾಪರದ ದ್ರೌಪದಿಯೇ ಆಗಿದ್ದರು. ಅಂದಿನ ಪಾತ್ರ ಅನೇಕ ರಂಗಪಂಡಿತರಿಗೆ ಮೆಚ್ಚಿಕೆಯಾಯಿತು. ಅಂಜಲಿದೇವಿಯವರ ಪಾತ್ರ ಈ ಸಲ ಖಂಡಿತಾ ಫೇಲಾಗುತ್ತದೆಂದು ಎಣಿಸಿದವರಿಗೆ ಆಶ್ಚರ್ಯ ಕಾದಿತ್ತು. ತಮಗರಿವಿಲ್ಲದೇ ಹೇಳಿದರಂತೆ ಅಂಜಲಿದೇವಿ ಕಲಾವಿದೆಯೆಂದು.

ನಾಟಕ ಮುಗಿಸಿದಾಗ ಮತ್ತೆ ಪತಿಯ ನೆನಪು ಮರುಕಳಿಸಿತು. ಆದಷ್ಟೂ ಬೇಗ ಊರು ಸೇರಬೇಕೆಂದು ಪೇಮೆಂಟ್ ತಗೊಂಡು ಬಸ್ ಏರಿದರು. ರಾತ್ರಿ ನಾಟಕ ಪ್ರಾರಂಭವಾಗುವ ಮುನ್ನ ಊರಿಗೆ ಫೋನ್ ಮಾಡಿದಾಗ ಗಂಡನ ತಂಗಿ ಅಣ್ಣನ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ ಎಂದು ತಿಳಿಸಿದ್ದಳು. ಮಧ್ಯಾಹ್ನ ಊರು ಸೇರಿದರು. ಹೋಗುವಾಗ ಧೈರ್ಯ ತುಂಬಿ ಹಿತವಚನ ಹೇಳಿ ಕಳಿಸಿದ ಪತಿ ಮೌನವಾಗಿ ಮಲಗಿದ್ದರು. ನಾಟಕ ಹೇಗಾಯಿತು ಯಾವಾಗ

ಬಂದ ಹುಡುಗಿ ಎಂದು ಕೇಳುವ ಸ್ಥಿತಿಯಲ್ಲಿರಲಿಲ್ಲ. ಎರಡು ಮೂರು ದಿನ ಹಗಲು ರಾತ್ರಿ ಎನ್ನದೆ ಪತಿಯ ಮಗ್ಗುಲಲ್ಲೇ ಕುಳಿತಿದ್ದರು. ಮುಚ್ಚಿದ ಕಣ್ಣು ತೆರೆಯಲೇ ಇಲ್ಲ. ಬರೀ ಉಸಿರಾಟ ಮಾತ್ರವಿತ್ತು. ಕೊನೆಗೆ ಅಂಜಲಿದೇವಿಯವರ ಬಾಳಲ್ಲಿ ಹಸಿರಾಗಿ ಬಂದ ನೀಲಕಂಠಪ್ಪನವರ ಉಸಿರು ೩೦.೦೩.೧೯೮೬ ರಂದು ನಿಂತಿತು. ಕಲಾದೇವಿಯ ಸಮಸ್ತ ಚೈತನ್ಯವೇ ಹೊರಟು ಹೋದಂತಾಯಿತು.

ನೀಲಕಂಠಪ್ಪ ಅಂಜಲಿದೇವಿಯವರನ್ನು ಎಷ್ಟು ಪ್ರೀತಿಸುತ್ತಿದ್ದರೂ ಅದಕ್ಕಿಂತಲೂ ಹೆಚ್ಚಾಗಿ ಅಂಜಲಿದೇವಿಯವರು ಅವರನ್ನು ಪ್ರೀತಿಸುತ್ತಿದ್ದರು. ಒಂದು ವಿಧದಲ್ಲಲ್ಲ, ಪತಿಯೆಂದು, ಮಾರ್ಗದರ್ಶಿ ಗುರುವೆಂದು, ಜೀವನ ಸಂಗಾತಿಯೆಂದು, ಬಾಳರಥದ, ಕಲಾರಥದ ಎರಡು ಚಕ್ರಗಳಾಗಿದ್ದರು ಸತಿಪತಿಗಳು. ಆದರಿಂದು ಒಂದು ಗಾಲಿ ಕಳಚಿಕೊಂಡಿತು. ಬಾಹ್ಯವಾಗಿ ಪತಿಯು ಕಾಣದಿದ್ದರೂ ಅವರ ಮಾರ್ಗದರ್ಶನ, ನಿರ್ದೇಶನ ಅಂಜಲಿದೇವಿಯವರ ರಕ್ತದ ಕಣಕಣದಲ್ಲಿಯೂ ಉಳಿಯಿತು.

ಮಗಳು ವಂದನಾ ಹವ್ಯಾಸಿ ಕಲಾತಂಡಗಳಲ್ಲಿ ಅತ್ಯಂತ ಬೇಡಿಕೆಯ ನಟಿಯಾಗಿದ್ದಳು. ಪತಿಯ ಮರಣಾನಂತರ ಅಂಜಲಿದೇವಿಯವರು ನಾಟಕ ರಂಗದಿಂದ ದೂರ ಸರಿಯತೊಡಗಿದರು. ರಾಯಚೂರು ಜಿಲ್ಲೆ, ಕೊಪ್ಪಳ ಜಿಲ್ಲೆಗಳಲ್ಲಿ ವಂದನಾಗೆ ಬಹಳ ಬೇಡಿಕೆಯಿತ್ತು. ತಾಯಿಯಂತೆ ಮಗಳು ಕೂಡ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ನಾಟಕಗಳಲ್ಲಿ ಜನಮೆಚ್ಚುವಂತೆ ಅಭಿನಯಿಸುತ್ತಿದ್ದಳು. ಬರೀ ಅಭಿನಯವೊಂದೇ ಅಲ್ಲ. ತಾಯಿಯಿಂದ ಬಳುವಳಿಯಾಗಿ ಬಂದಂತಹ ಕೋಗಿಲೆ ಕಂಠವೂ ತನ್ನ ಮಾಧುರ್ಯದಿಂದ ಜನರನ್ನು ಮೋಡಿ ಮಾಡುತ್ತಿತ್ತು. ವಂದನಾಳ ನಾಟಕಗಳನ್ನು ನೋಡುತ್ತಲೇ ಆಕೆಯನ್ನು ಪ್ರೀತಿಸಿದ ಗಂಗಾವತಿಯ ತರುಣನೊಬ್ಬ ಆಕೆಯನ್ನು ವರಿಸಲು ಇಚ್ಚೆಸಿದ. ಅಂಜಲಿದೇವಿ ಸಂತೋಷದಿಂದ ಒಪ್ಪಿ ಮಗಳ ಮದುವೆಯನ್ನು ಮಾಡಿದರು, ಅಳಿಯನ ಆಮಂತ್ರಣದ ಮೇರೆಗೆ ಗದುಗಿನಲ್ಲಿಯ ಮನೆಯನ್ನು ಮಾರಿ ಗಂಗಾವತಿಗೆ ಬಂದರು ೧೯೯೧ ರಲ್ಲಿ. ಆಗಿನಿಂದಲೂ ಬಾಡಿಗೆಯ ಮನೆಯಲ್ಲಿ ವಾಸವಾಗಿದ್ದಾರೆ.

ತಾವು ಬಹು ಹಿಂದೆ ಭೀಮಾಂಬಿಕೆಯ ನಾಟಕದಲ್ಲಿ ಪಾತ್ರ ವಹಿಸಿದಾಗ ಆ ಮಹಾತಾಯಿಯ ಒಂದು ಗದ್ದುಗೆಯನ್ನು ನಿರ್ಮಿಸಿ ದಿನವೂ ಪೂಜಿಸುತ್ತ ತಮ್ಮ ಜೀವಿತಾವಧಿಯ ಕೊನೆಯ ಗಳಿಗೆಯನ್ನು ಕಳೆಯಲು ಇಚ್ಚಿಸಿದ್ದರು. ಆ ಸುದಿನ ನವೆಂಬರ್ ಎರಡು ಸಾವಿರದ ಇಸವಿಯಿಂದ ಪ್ರಾಪ್ತವಾಯಿತು. ಗಂಡುಗಲಿ ಕುಮಾರರಾಮನ ರಾಜಧಾನಿಯಾದ ಮುಕ್ಕುಂಪಿಯ ಸಮೀಪ ಆತನ ಆರಾಧ್ಯ ದೇವತೆಯಾದ ಹೇಮಗುಡ್ಡದ ದುರ್ಗಾದೇವಿ ಮಂದಿರದ ಸಮೀಪ ಹೆಚ್.ಜಿ. ರಾಮುಲುನಗರದಲ್ಲಿ ಲೋಕಸಭಾ ಸದಸ್ಯರಾದ ಶ್ರೀ ಹೆಚ್.ಜಿ. ರಾಮುಲು ಅವರ ಸಹಕಾರದಿಂದ ಮಹಾತಾಯಿ ಭೀಮಾಂಬಿಕೆಯ ಗದ್ದುಗೆಯನ್ನು ಕೆಲ ಸ್ವಾಮಿಗಳ ಸನ್ನಿಧಿಯಲ್ಲಿ ವಿಧಿಬದ್ಧವಾಗಿ ಸ್ಥಾಪಿಸಿದ್ದಾರೆ.

ಕೂಲಿ ಕೆಲಸಗಾರರ ತಾಣವಾದ ಅಲ್ಲಿ ಧರ್ಮ ಪ್ರಜ್ಞೆ ಮೂಡಿಸಿ ಅಂಧಶ್ರದ್ಧೆಯನ್ನು, ಮೂಢನಂಬಿಕೆಯನ್ನು ಹೊಡೆದೋಡಿಸಲು ಇಚ್ಚೆಸಿದ್ದಾರೆ. ಪ್ರತಿ ಅಮಾವಾಸ್ಯೆಗೊಮ್ಮೆ ಬಂದು ಹೋಗುವ ಭಕ್ತರ ಸಲುವಾಗಿ ಉಚಿತ

ದಾಸೋಹ ವ್ಯವಸ್ಥೆಯನ್ನು ಮಾಡಿದ್ದಾರೆ. ಕಾವಿಯೆನ್ನುವುದು ಕಾಮಿತಗಳನ್ನು ಧಿಕ್ಕರಿಸಿದ ಸಂಕೇತವೆನ್ನುತ್ತಾರೆ. ಈಗ ಲೌಕಿಕದ ಎಲ್ಲ ಆಶೆ ಆಮಿಷಗಳೂ ಸಾಕಾಗಿವೆ. ಅಮ್ಮನ ಸೇವಾಭಾಗ್ಯವೊಂದೇ ಸಾಕು ಎನ್ನುತ್ತ ಕಾವಿಯ ಸೀರೆಯನ್ನುಟ್ಟಿದ್ದಾರೆ.

ಗದ್ದುಗೆಯ ಮೇಲೆ ಗರ್ಭಗುಡಿ, ಗುಡಿ ಮುಂತಾದ ನಿರ್ಮಾಣ ಕಾರ್ಯಗಳು ಭವಿಷತ್ಕಾಲದಲ್ಲಿ ಆಗಬೇಕಿದೆ. ಈ ಕೃತಿಯನ್ನು ಬರೆಯುವಾಗ ಗಂಗಾವತಿಗೆ ಫೋನಾಯಿಸಿದರೂ ಸಿಗುತ್ತಿರಲಿಲ್ಲ. ಮುಖತಃ ಭೇಟಿ ಕೂಡ ಸಾಧ್ಯವಾಗುತ್ತಿರಲಿಲ್ಲ. ಬೆಳಿಗ್ಗೆ ಎಂಟು ಗಂಟೆಗೆ ಸ್ನಾನ ಪೂಜೆ ಮುಗಿಸಿ ಗದ್ದುಗೆಯ ಹತ್ತಿರ ಹೋಗಿಬಿಡುತ್ತಿದ್ದರು. ಅಂಜಲಿದೇವಿಯವರ ಭೇಟಿ ಮಾಡಬೇಕೆಂದರೆ ಭೀಮಾಂಬಿಕೆಯ ಗುಡಿಗೆ ಹೋಗಿ ಬರಬೇಕಾಗಿತ್ತು. ಸಾಧುಸಂತರ ನಿರ್ಲಿಪ್ತ ಬದುಕು, ಜೀವಾತ್ಮ ಪರಮಾತ್ಮನಲ್ಲಿ ಐಕ್ಯವಾಗುವ ಬಗೆಯೇ ಬಯಲಲ್ಲಿ ಬಯಲಾಗುವುದು. ಬೆಳಕಲ್ಲಿ ಬೆಳಕಾಗುವುದು ಇದು ಈ ನೆಲದ ಅಧ್ಯಾತ್ಮ ಜೀವಿಗಳ ಕೊನೆಯ ಘಟ್ಟ.

## ನೆನಪಿನಂಗಳದಿಂದ

ಅರವತ್ತರ ಅಂಚಿನಲ್ಲಿರುವ ಅಂಜಲಿದೇವಿಯವರಿಗೆ ಹೇಳಿರೆಂದು ಮುಂದೆ ಕುಳಿತಾಗ ಯಾವ ಘಟನೆಗಳೂ ನೆನಪಾಗುವುದಿಲ್ಲ. ಹಾಗೇ ಮಾತನಾಡುತ್ತ ಕುಳಿತಾಗ ಮಾತಿಗೆ ಮಾತು ಬಂದಾಗ ಒಂದೊಂದು ಘಟನೆಗಳು ತಾನಾಗೇ ನೆನಪಾಗುತ್ತವೆ ಅವುಗಳನ್ನು ಅವರ ಭಾಷೆಯಲ್ಲಿ ನಿರೂಪಿಸುವ :

ಹಾಂ ವಾಣಿಶ್ರೀಯವರೇ, ದೊಡ್ಡ ಕಲಾವಿದರ ಜೊತೆ ಅಭಿನಯಿಸಬೇಕಾದರೆ ಮೈಯೆಲ್ಲಾ ಕಣ್ಣಾಗಿರಬೇಕು ನೋಡ್ರಿ. ಒಂದು ಸಲ ಹಿಂಗಾಯ್ತು, ಓಬಳೇಶ್ವರರು ತಮ್ಮ ಕಂಪನಿಗೆ ಕರಿಲಿಕ್ಕ ಬಂದ್ರು. ನಾನು ಎಷ್ಟೋ ಸಲ ಆ ಕಂಪನಿಗೆ ಹೋಗಿ ಬಂದಿದ್ದೆ. ಖಾದಿಸೀರೆ ನಾಟಕವಂತೂ ಆ ಕಂಪನಿಯ ಜನಪ್ರಿಯ ನಾಟಕ. ಎಲ್ಲಾ ನಟರೂ, ಸಂಗೀತಗಾರರೂ ನನ್ನನ್ನು ಪ್ರೀತಿಯಿಂದ ಕಾಣುತಿದ್ರು. ದೊಡ್ಡ ನಟಿ ಅನ್ನೋ ಲೇಬಲ್ ನನಗ ಹಾಕತಿದ್ರು. ಹಾಗೆಯೇ ಇರಬೇಕೆಂದು ಹೋದೆ. ಆದ್ರೆ ಅಲ್ಲಿನ ಸ್ಥಿತಿ ಗತಿಯೇ ಬೇರಾಗಿತ್ತು.

ಸ್ವಂತ ಕಂಪನಿ ಅಮರೇಶ್ವರ ನಾಟ್ಯಸಂಘವನ್ನು ನಿಲ್ಲಿಸಿದಾಗ ಆಗಾಗ ಬೇರೆ ಬೇರೆ ಕಂಪನಿಯಲ್ಲಿ ಮೃಡದೇವ ಗವಾಯಿಗಳು ನಟಿಸುತ್ತಿದ್ದರು. ಮೃಡದೇವ ಗವಾಯಿಗಳು ಜನಸಾಮಾನ್ಯರ ನಾಲಿಗೆಯಲ್ಲಿ ನಲಿದಾಡುತ್ತಿದ್ದುದು ಮುರುಡಯ್ಯನೆಂಬ ಹೆಸರಿನಲ್ಲಿ. ಎಂಥ ಅಭಿನಯ ಅವರದು. ಈಗ ಅವರೆದುರು ನಟಿಸಬೇಕಾದಂತಹ ಪರಿಸ್ಥಿತಿ ನನಗ ಬಂದಿತ್ತು. ಅದೊಂದು ಯೋಗಾಯೋಗವೆಂಬುದು ನನ್ನ ಅನಿಸಿಕೆ. ಆದರೆ ಮನದಲ್ಲಿ ಅಷ್ಟೇ ಅಳುಕು. ಇವತ್ತು ಸಿನಿಮಾ ಪ್ರಪಂಚದಲ್ಲಿ ರಾಜಕುಮಾರರು ಹೇಗೆ ಪ್ರಸಿದ್ಧಿ ಪಡೆದಿದ್ದಾರೋ ಹಾಗೆಯೇ ಆಗಿನ ಸಮಯದಲ್ಲಿ ಕೆಲವೇ ನಟರಲ್ಲಿ ಆ ನಟರ ಅಗ್ರ ಪಂಕ್ತಿಯಲ್ಲಿ ಮೃಡದೇವ ಗವಾಯಿಗಳೂ ಕೂಡ ರಾರಾಜಿಸುತ್ತಿದ್ದರು. ಅಂಥ ಮೇರು ನಟರವರು.

ಸರಿ, ಒಂದು ವಾರದ ಒಪ್ಪಂದಕ್ಕೆ ನಾನು ಹೋಗಿದ್ದೆ. ಆದರೆ ನಾಟಕ ಒಂದು ವಾರಕ್ಕೆ ಕೊನೆಗೊಳ್ಳಲಿಲ್ಲ. ಒಂದೇ ನಾಟಕ ಐವತ್ತೊಂದು ಪ್ರಯೋಗವಾಯ್ತು ಹುಬ್ಬಳ್ಳಿಯ ಗಜಾನನ ಥೇಟರನಲ್ಲಿ. ನಾಟಕ 'ಕಲ್ಬುರ್ಗಿ ಶ್ರೀ ಶರಣಬಸವೇಶ್ವರ ಮಹಾತ್ಮೆ'. ಅದರಲ್ಲಿ ಬಸವೇಶ್ವರರ ಪಾತ್ರವನ್ನು ಮೃಡದೇವ ಗವಾಯಿಗಳು ವಹಿಸಿದ್ರು. ಅವರ ಸತಿಯ ಪಾತ್ರದಲ್ಲಿ ನಾನು ನಟಿಸುತ್ತಿದ್ದ. ಅದಾಗಲೇ ರೇಣುಕಾ ನಾಟಕದ ಪರಶುರಾಮನ ಪಾತ್ರದಲ್ಲಿ ಅವರು ಕರ್ನಾಟಕದಾದ್ಯಂತ ಹೆಸರುವಾಸಿಯಾಗಿದ್ದರು. ಹುಬ್ಬಳ್ಳಿಯಲ್ಲಿಯೇ ಅವರ ಕಂಪನಿಯಿಂದ ರೇಣುಕಾ ನಾಟಕ ನೂರಾರು ಪ್ರಯೋಗಗಳನ್ನಾಡಿತ್ತು. ಹುಬ್ಬಳ್ಳಿಯ ತುಂಬಾ ಮುರುಡಯ್ಯನವರ ಅಭಿಮಾನಿಗಳೇ..

ಕಲ್ಬುರ್ಗಿ ಶರಣಬಸವೇಶ್ವರ ಪಾತ್ರದಲ್ಲೂ ಕೂಡ ಅಷ್ಟೇ ಲೀಲಾಜಾಲವಾಗಿ, ಸಹಜವಾಗಿ ಅಭಿನಯಿಸುತ್ತಿದ್ದರು. ಎಷ್ಟೋ ಸಲ ಸ್ಟೇಜ್ ಮೇಲೆ ಪ್ರೇಕ್ಷಕರು ಬಂದು ಮೃಡದೇವ ಗವಾಯಿಗಳ ಕಾಲಿಗೆ ನಮಸ್ಕರಿಸಿದ್ದುಂಟು. ಭಕ್ತಿಯ ಪಾತ್ರದಲ್ಲಿ ಸ್ವತಃ ಶರಣಬಸವೇಶ್ವರರೇ ಕಂಡಂತಾಗುತ್ತಿತ್ತು. ಆ ಮನುಷ್ಯ ಪಾತ್ರದಲ್ಲಿ ಅಷ್ಟೊಂದು ತನ್ಮಯರಾಗುತ್ತಿದ್ದರು. ಇಂಥ ಮೇರುನಟರ ಜೊತೆ ನಟಿಸುವಾಗ ನಾನೂ ಕೂಡ ಅವರ ಸರಿಸಮವಾಗಿ ನಟಿಸಬೇಕಾಗುತ್ತಿತ್ತು. ಹೀಗಾಗಿ ದೊಡ್ಡ ದೊಡ್ಡ ಕಲಾವಿದರಿಂದ ನಾನು ಕೂಡ ಬಹಳಷ್ಟನ್ನು ನೋಡಿ ಕಲಿತಿದ್ದೇನೆ. ಈ ಕಲೆ ಅನ್ನೋದು ಮಹಾಸಾಗರವಿದ್ದಂತೆ. ಎಷ್ಟೇ ಪಾತ್ರ ಮಾಡಲಿ, ಎಂತಹದೇ ಪಾತ್ರ ಮಾಡಲಿ ಅದರಲ್ಲಿ ಕಲಿಯುವುದು ಇನ್ನೂ ಇದ್ದೇ ಇರುತ್ತದೆ. 'ನೋಡಿ ಕಲಿ, ಮಾಡಿ ತಿಳಿ' ಎನ್ನುವಂತೆ ಈ ಕಲಾಬದುಕು. ಹೆಚ್ಚು ಕಮ್ಮಿ ಈ ಘಟನೆಯೂ ಕೂಡ ನನ್ನ ನೆನಪಿನಾಗ ಶಾಶ್ವತವಾಗಿ ಇರುವಂತಹುದು ಎಂದು ಧನ್ಯತೆಯನ್ನು ಪ್ರಕಟಿಸುತ್ತ ಭಾವ ತುಂಬಿ ಹೇಳಿ ಇನ್ನೊಂದು ಘಟನೆಗೆ ಬಂದರು.

ಒಂದು ಸಲ ಪಡೇಸೂರ ಕಂಪನಿಯಲ್ಲೂ ಕೂಡ ಹಿಂಗಾತು. ಹುಬ್ಬಳ್ಳಿಯಲ್ಲಿ ಹಡೆದವ್ವ ನಾಟಕ ಆಡತಿದ್ವಿ. ಅದಾಗಲೇ ಬಹುಶಃ ನೂರಾ ಒಂದು ಪ್ರಯೋಗ ದಾಟಿತ್ತು. ಹಿಂದೆ ಗದಗ ಕ್ಯಾಂಪಿನಾಗ ನೂರಾ ಒಂದನೆಯ ಪ್ರಯೋಗಕ್ಕೆ ಆಗಿನ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರು ಆಗಮಿಸಿ ಎಲ್ಲಾ ಕಲಾವಿದರಿಗೂ ಸರ್ಟಿಫಿಕೆಟ್ ಕೊಟ್ಟಿದ್ರು. ನಂತರ ಕಲಾರಂಗದ ಗುರುಗಳಾದ ಶಿವಯೋಗಿ, ಡಾಕ್ಟರ್ ಪುಟ್ಟರಾಜ ಗವಾಯಿಗಳೂ ಕೂಡ ಆಗಮಿಸಿದ್ರು. ಹುಬ್ಬಳ್ಳಿಯಾಗಿನ ಐವತ್ತೊಂದನೆಯ ಪ್ರಯೋಗಕ್ಕೂ ಕೂಡ ಗದುಗಿನ ಅಜ್ಜಾ ಅವರು ಬಂದು ಎಲ್ಲರನ್ನೂ ಆಶೀರ್ವದಿಸಿ ಸನ್ಮಾನಿಸಿ ಹೋಗಿದ್ರು, ನಾಟಕ ಯಶಸ್ವಿಯಾಗಿ ಹೌಸ್‌ಫುಲ್ಲಾಗಿ ಓಡುತ್ತಿತ್ತು. ನಾಟಕ ಇನ್ನೇನು ಪ್ರಾರಂಭ ಆಗಬೇಕಿತ್ತು, ಅಷ್ಟರಾಗ ಸಂಗೀತ ಕಲಾವಿದರ ಹತ್ತಿರ ಸ್ವಲ್ಪ ಗಲಾಟೆಯಾಯ್ತು. ನೀನು ಸರಿ ನಾನು ಸರಿ ಅಂತ ಸರಿದು ಕೆಲವು ಹೊಸಾ ಖುರ್ಚಿ ಹಾಕಿ ಅಲ್ಲಿ ಕುಂದ್ರಸಿದ್ರು. ನಾಂದಿ ಮುಗಿಯುವುದ್ರಾಗ ಒಂದು ಕಾರು ಬಂದು ನಿಂತ ಸಪ್ಪಳಾಗಿತ್ತು. ನಾವು ಅದರ ಕಡಿಗೆ ಅಷ್ಟೊಂದು ಗಮನ ಕೊಟ್ಟಿರಲಿಲ್ಲ. ಜಿ.

ಮೊದಲನೇ ಸೀನು ನಾಯಕ ರಾಜು ಬಂದು ಒಳ್ಳೆಯ ಹಾಡನ್ನು ಹಾಡಿ ರಂಜಿಸಿ ಪ್ರೇಕ್ಷಕರನ್ನು ರಂಜಿಸಿ ಹೋದ, ಆ ನಾಯಕನ ಪಾತ್ರದಲ್ಲಿ ನಮ್ಮೆಜಮಾನ್ರು ನೀಲಕಂಠಪ್ಪನವರು ಅಭಿನಯಿಸಿದ್ರು. ನನ್ನದು ಹಡೆದವ್ವ ನಾಟಕದಾಗ

ಹಾಸ್ಯಪಾತ್ರ. ಅದರ ಹೆಸರು ಸೀತಾ ಅಂತ ಇರಬೇಕು. ಹಾಂ ಹೌದು, ಸೀತಾಳ ಪಾತ್ರ. ನಾನು ಕೂಡ ಹಾಸ್ಯ ಪಾತ್ರದಲ್ಲಿ ಚೆನ್ನಾಗಿ ಮಾಡುತ್ತಿದ್ದೆ. ಈ ಮಾತು ನಂದಲ್ಲ. ಜನರೇ ಹೇಳತಿದ್ರು. ಅಂಜಲಿದೇವಿ ಯಾವ ಪಾತ್ರ ಕೊಟ್ರೂ ಅದ್ಭುತವಾಗಿ ಮಾಡ್ತಾಳಪ್ಪಾ ಅಂತ ಅಂತಿದ್ರು. ಹಿಂಗಾ ನಾಲ್ಕೈದು ದೃಶ್ಯಗಳು ಮುಗಿದಿರಬೇಕು. ಮುಂದೆ ಕುಳಿತ ಒಬ್ಬೊಬ್ಬ ನಟರೂ ಥೇಟರ್ ಮೇಲೆ ಬಂದುಬಿಟ್ಟು ನಟರ ಆ ಅಭಿನಯ ಕೌಶಲ್ಯವನ್ನು ಬಾಯಿ ತುಂಬಾ ಹೊಗಳಲಿಕ್ಕ ಹತ್ತಿದ್ರು. ಪ್ರೇಕ್ಷಕರ ಗುಂಪಿನಲ್ಲಿ ಶಿಳ್ಳೆ, ಕರತಾಡನ ಆಗಲಿಕ್ಕ ಹತ್ತಿತು. ಕೊನೆಗೆ ಹೀರೋ ಪಾತ್ರ ಮಾಡಿದವರು ವೇದಿಕೆಗೆ ಬರಬೇಕು ಅಂತ ಅನೌನ್ಸ್ ಮಾಡಿದ್ರು. ಹಾಗೇ ನಮ್ಮೆಜಮಾನರ ಅಭಿನಯವನ್ನು ಕೊಂಡಾಡುತ್ತ ವಾಹ್ 'ಎಂಥ ನಟರಪ್ಪ ಏನು ಉತ್ತರ ಕರ್ನಾಟಕದ ಕಲಾವಿದರು, ಎಂತಹ ಕಂಠ' ಎಂದು ಬಾಯಿ ತುಂಬಾ ಹೊಗಳಿ ನಮ್ಮೆಜಮಾನರನ್ನು ತಬ್ಬಿಕೊಂಡು ಅಪ್ಪಿಕೊಂಡಿದ್ದರು. ಹೀಗೆ ಅಪ್ಪಿಕೊಂಡವರು ಬೇರೆ ಯಾರೂ ಅಲ್ಲ ಇಂದಿನ ಕರ್ನಾಟಕ ರತ್ನ ಡಾ.ರಾಜಕುಮಾರರವರು. ನನಗಂತೂ ನಂಬಲಿಕ್ಕೆ ಆಗಲಿಲ್ಲ. ಸ್ಟೇಜಿನ ಮೇಲೆ ನಿಂತ ಇತರ ಕಲಾವಿದರೆಂದರ ಹಾಸ್ಯಚಕ್ರವರ್ತಿ ಅಂತ ಸಿನಿಮಾದಾಗ ಹೆಸರಾದ ಟಿ. ಎನ್. ಬಾಲಕೃಷ್ಣ, ನರಸಿಂಹರಾಜು, ರಮಾದೇವಿ, ಬಿ. ಜಯಾ ಆಮೇಲೆ ಎಲ್ಲಾ ಶ್ಲಾಘನೆ ಮುಗಿದ ಮೇಲೆ ರಾಜಕುಮಾರರು ಸ್ಟೇಜಿನ ಮೇಲೆ ಒಬ್ಬೊಬ್ಬರನ್ನೇ ಕರೆದು ಸನ್ಮಾನಿಸಿ ಮಾತನಾಡಿದರು.

ಬೆಂಗಳೂರಿಂದ ಕಿತ್ತೂರ ಕಡೆಗೆ ಸಿನಿಮಾ ಶೂಟಿಂಗ್‌ಗಾಗಿ ನಡದಿದ್ವಿ. ನೂರು ಪ್ರಯೋಗ ದಾಟಿದ ಜನಭರಿತ ನಾಟಕ ಅಂತ ಬೋರ್ಡ್ ನೋಡಿದ್ವಿ, ನಾನು ಕೂಡ ಮೂಲತಃ ರಂಗಭೂಮಿ ಕಲಾವಿದನಾಗಿದ್ದರಿಂದ ಅದರಲ್ಲೂ 'ಹಡೆದವ್ವ' ನಾಟಕದ ಪ್ರಸಿದ್ಧಿ ಆಗಲೇ ಕೇಳಿದ್ದರಿಂದ ನಾಟಕ ನೋಡಬೇಕೆನಿಸಿತು.ಹೀಗಾಗಿ ಆಮಂತ್ರಣವಿಲ್ಲದೆ ಬಂದುಬಿಟ್ಟೆ. ಸಿನಿಮಾದಾಗ ಹೆಜ್ಜೆ ಹೆಜ್ಜೆಗೂ ಕಟ್ ಅಂತಾರ. ಅದು ಒಂಥರಾ ಪರಾವಲಂಬಿ ಜೀವನ, ನಿರ್ದೇಶಕ ಹೇಳಿದಾಂಗ ಕೇಳಬೇಕು. ಇಲ್ಲಿ ಹಾಗಲ್ಲ. ಒಮ್ಮೆ ನಿರ್ದೇಶಕ ಹೇಳಿದಾಂಗ ಕೇಳಿ ಅಭಿನಯಿಸಿದ್ರ ಸಾಕು. ಮೂರು ತಾಸು ಯಾರೂ ಕಟ್ ಅನ್ನೋಲ್ಲ. ಅವರವರ ಅಭಿನಯ ಸಾಮರ್ಥ್ಯದಿಂದಲೇ ಅದನ್ನು, ಆ ಪಾತ್ರವನ್ನು, ಸರಿದೂಗಿಸಬೇಕು. ಅದಕ್ಕಾಗಿ ರಂಗಭೂಮಿಯೇ ಶ್ರೇಷ್ಠ. ಇದ್ರಾಗ ಎಲ್ಲಾ ಪಾತ್ರಗಳೂ ನನಗಿಷ್ಟವಾದವು. ವಿಶೇಷವಾಗಿ ನಾಯಕನ ಪಾತ್ರದಲ್ಲಿ ನೀಲಕಂಠಪ್ಪನವರ ಅಭಿನಯಹಾಡು, ಹಾಸ್ಯಪಾತ್ರದಲ್ಲಿನ ಅಂಜಲಿದೇವಿಯವರ ಅಭಿನಯ-ಹಾಡು ಮನಕ್ಕೆ ಮುದ ನೀಡಿದವು ಎಂದು ಹೇಳಿದಾಗ ಪ್ರೇಕ್ಷಕರ ಕರತಾಡನ ಮುಗಿಲಿಗೆ ಮುಟ್ಟಿತ್ತು. ನನಗಂತೂ ವಿಚಿತ್ರ ಅನುಭವವಾಯಿತು. ಯಾವ ವ್ಯಕ್ತಿಯನ್ನು ಕಾಣಲು ತುದಿಗಾಲ ಮೇಲೆ ಜನರು ನಿಂತಿರುವರೋ ಅಂಥ ಮೇರು ಕಲಾವಿದ ಡಾ.ರಾಜಕುಮಾರವರ ಬಾಯಿಂದ ಹೊಗಳಿಸಿಕೊಂಡ ನಮ್ಮ ಬಾಳು ಧನ್ಯ ಎನಿಸಿತು.

ಕೊನೆಗೆ ಮಾತು ಮುಗಿಸುವ ಮುನ್ನ ಅವರೊಂದು ಮಾತು ಹೇಳಿ ಹೋದರು. ಈ ಕಲಾವಿದರೆಲ್ಲಾ ನನಗೆ ಸೋದರ ಸಂಬಂಧಿಗಳೇ, ನೀವು ಯಾವಾಗಲಾದರೂ ಮದ್ರಾಸಿಗೆ ಬಂದರೆ, ನಿಮ್ಮ ಮನೆಗೆ ಅಂದರೆ ಈ ರಾಜಕುಮಾರನ ಮನೆಗೆ ಬಂದು ಹೋಗ್ರಿ, ಮರೆಯಬಾರದು ಎಂದು ಹೇಳಿ, ಪ್ರೇಕ್ಷಕರ ಕೋರಿಕೆಯಂತೆ ಎಲ್ಲಾ ಸಿನಿಮಾ

ಕಲಾವಿದರೂ ಚಿತ್ರದಲ್ಲಿನ ಒಂದೊಂದು ಸಂಭಾಷಣೆಯನ್ನು ಹೇಳಿ, ಅವರ ಅನುಮತಿಯನ್ನು ಪಡೆದು ಚಿತ್ರೀಕರಣದ ಸಲುವಾಗಿ ಅವಸರವಾಗಿ ಹೋಗಬೇಕಿದೆ. ಬೆಳಗಿನ ಜಾವದಲ್ಲೇ ಶೂಟಿಂಗ್ ಇದೆಯೆಂದು ನಿರ್ಗಮಿಸಿದರು. ಇದೂ ಕೂಡ ನೆನಪಿನಾಗ ಉಳಿಯುವಂಥಾದ್ದೇ.

ನಾವು ನೋಡ್ತೀವಂದ್ರೂ ಸಿಗದಂಥಾ ಮಹಾನ್ ಕಲಾವಿದರು ನಾವಿದ್ದಲ್ಲಿಗೇ ಬಂದು, ಅದೂ ನಮ್ಮ ಅಭಿನಯ ನೋಡಿ ಹೊಗಳಿ ಪ್ರೋತ್ಸಾಹಿಸಿದರು ಅಂದ್ರೆ ಅದು ನಮ್ಮ ಭಾಗ್ಯವಲ್ಲದೆ ಇನ್ನೇನು.

ಕಾರಟಗಿನಲ್ಲಿ ಶಿವರಾತ್ರಿ ನಾಟಕಕ್ಕೆ ಬುಕ್ ಆಗಿದ್ದೆ. ಅದು ಕ್ಯಾನವಾಸ್ ಮಾಡಿ ಹಣ ಕೂಡಿಸಿದಂಥಾ ನಾಟಕ, ಆಮೇಚೂರವರು ಮಾಡಿದ್ರು. ಒಂದೇ ಒಂದು ಪ್ರಯೋಗ ಅದು. ಸಿನಿಮಾ ನಟಿಯರು ಅದ್ರಾಗ ಪಾತ್ರ ಮಾಡಿದ್ರು. ಅವರು ಯಾರಂದ್ರ, ಹಾಂ ಶ್ರೀಲಲಿತಾ ಮತ್ತು ಆಕಿ ತಂಗಿ, ಜನರು ಸಿಕ್ಕಾಪಟ್ಟೆ ಸೇರಿದ್ರು. ಸಿನಿಮಾದವರು ಕೂಡ ಚಂದುಳ್ಳೀ ನಟಿಯರು. ಆದ್ರೆ ಏನಾತು ಅಂದ್ರೆ ದೃಶ್ಯಕ್ಕೆ ಶ್ರೀಲಲಿತಾ ಬಂದಾಗ ವಿಪರೀತ ಚಪ್ಪಾಳೆ ಶೀಳು ಹಾಕಿದ್ರು ಅಭಿಮಾನದಿಂದ. ನಂತರ, ಜನರು ಗದ್ದಲ ಮಾಡಾಕಹತ್ತಿದ್ರು. ಯಾಕಂದ್ರ ಸಿನಿಮಾ ನಟಿಯರಾರೂ ಮಾತೇ ಕಲಿತಿದ್ದಿಲ್ಲ. ಹಿಂದೆ ಜೋರಾಗಿ ಪ್ರಾಮ್ಸ್ ಮಾಡುತಿದ್ರು. ಆದ್ರೂ ಅದು ನನ್ನದಾ ಮಾತು, ಡೈಲಾಗು ಅನ್ನೋದು ಸಹಿತ ಆ ನಟಿಯರಿಗೆ ಗೊತ್ತಿದ್ದಿಲ್ಲ. ಹೀಂಗ ಗದ್ದ ಆತು. ಜನಾ ಕೂಗಾಡಲಿಕ್ಕೆ ಹತ್ತಿದ್ರು. ನನ್ನ ದೃಶ್ಯ ಬಂದಾಗ ವಿಪರೀತ ಚಪ್ಪಾಳೆ ಹಾಕಿ ಅಭಿಮಾನ ಪ್ರಕಟಿಸ್ತಾ ಇದ್ರು. ಹಾಂ ಇವರಪಾ ನಟರು, ಹೀಂಗ ನಂತರ ನನಗೆ ಹಾಡಿಗಾಗಿ ಪರಮಾಯಿಷ್ ಬರತೊಡಗಿದವು. ನಾನು ಕೂಡ ಅವರ ಅಭಿಲಾಷೆಯಂತೆ ಅನೇಕ ಹಾಡು ಹಾಡಿದೆ. ನಂತರ ಅಭಿಮಾನಿಗಳಲ್ಲಿ ನಾನೇ ಪ್ರಾರ್ಥಿಸಿದೆ. ದಯವಿಟ್ಟು ಅವರ ಸೀನಿನಲ್ಲಿ ಗದ್ಲಾ ಮಾಡಬ್ಯಾಡ್ರಿ ಅಂತ. ಇಷ್ಟು ಅಂದಿದ್ದಾ ತಡಾ ಒಬ್ಬ ಮನುಷ್ಯ 'ಸಿನಿಮಾದವರು ಮಾತಾ ಕಲ್ತಿಲ್ಲಲ್ರಿ' ಅಂದ ಕೂಡಲೇ ನಾನು ನೋಡಪಾ ಅವರೂ ಕೂಡ ದೊಡ್ಡ ಕಲಾವಿದರು. ಹಗಲುರಾತ್ರಿ ಬಿಡುವಿಲ್ಲದೆ ಶೂಟಿಂಗಿನಾಗ ಮಾತು ಕಲಿಯೋದು ಆಗಿರೋದಿಲ್ಲ. ಇದನ್ ಒಪ್ಪಿಕೊಂಡಿವಿ ಅಂತ ಅನಿವಾರ್ಯವಾಗಿ ಬಿಡಬಾರದು, ನಿಮಗೆ ನಿರಾಶೆ ಮಾಡಬಾರದು ಅಂತ ಬಂದಾರ. ಈ ಅಂಜಲಿದೇವಿಗಿಂತಲೂ ಬಹಳ ಎತ್ತರದ ಕಲಾವಿದರು ಅವರು. ನಮಗೆ ಸಿನಿಮಾ ಇಲ್ಲ ಶೂಟಿಂಗ್ ಇಲ್ಲಾ. ಹಿಂಗಾಗಿ ನಾನು ಡೈಲಾಗ್ ಕಲ್ತಿನಿ. ನನಗೂ ಶೂಟಿಂಗ್ ಇದ್ರೆ ಹಿಂಗಾ ಆಗುತ್ತಿತ್ತು. ದಯವಿಟ್ಟು ಸಹಕಾರ ಕೊಡಿ ಅಂತ ಕೈಮುಗಿದೆ. ಜನರು ನನ್ನ ಮಾತಿಗೆ ಸ್ಪಂದಿಸಿದರು. ನಾನು ಒಳಗೆ ಬಂದಾಗ ಸಿನಿಮಾ ನಟಿಯರು ನನ್ನನ್ನು ಅಪ್ಪಿಕೊಂಡರು.

ಆದ್ರ ಮುಂದಿನ ದೃಶ್ಯಗಳು ಆಗಲೇ ಇಲ್ಲ. ಅವತ್ತು ಬರೀ ನನ್ನ ಪರಮಾಯಿಷಿ ಹಾಡುಗಳಲ್ಲೇ ನಾಟಕ ಬೆಳಗಿತು.

ಒಮ್ಮೆ ಶಿವಲಿಂಗಯ್ಯ ಶಾಸ್ತ್ರಿಗಳ ಕಂಪನಿ ಶಿವಲಿಂಗೇಶ್ವರ ನಾಟ್ಯಸಂಘ ಸಂಕನೂರ ಆ ಕಂಪನಿಗೆ 'ಬಸ್ ಹಮಾಲ' ನಾಟಕಕ್ಕೆ ಹೋಗಿದ್ದೆ. ಅದು ಗಜೇಂದ್ರಗಡ ಕ್ಯಾಂಪಿಗೆ. ನನ್ನದು ನಾಯಕಿಯ ಪಾತ್ರ, ದಿನೇಶ ಅವರದು ಖಳನಾಯಕನ ಪಾತ್ರ. ಬಸ್ ಹಮಾಲ ನಾಟಕದಾಗ ನಾನು ನೂರಾರು ಸಲ ನಟಿಸಿದ್ದೆ. ಹಿಂಗಾಗಿ ಇಡೀ ನಾಟಕಾನ ನನಗೆ ಕಂಠಪಾಠವಾಗಿತ್ತು. ಇಲ್ಲಿ ಒಂದು ವಿಚಾರ ಹೇಳಬೇಕಂದ್ರ, ಹಿಂದಕ್ಕೆ ನಾವು ನಾಟಕ

ಒಪ್ಪಿಕೊಂಡಾಗ ನಮ್ಮ ಪಾತ್ರದ ಮಾತು ಕಲಿತಿದ್ದಿಲ್ಲ. ಮೊದಲು ಸಮಗ್ರವಾಗಿ ಒಂದೆರಡು ಸಲ ನಾಟಕ ಓದತಿದ್ವಿ. ನಂತರ ನಮ್ಮ ಪಾತ್ರ ಸಂಪೂರ್ಣವಾಗಿ ಮನನ ಮಾಡಿಕೊಂಡು ಆ ನಂತರ ಡೈಲಾಗ್ ಕಲಿತಿದ್ವಿ.

ಈಗಿನವರು ಹಾಂಗಲ್ಲ ನಾಟಕ ಒಪ್ಪಿಕೊಳ್ಳತಾರ, ತಮ್ಮ ಮಾತಷ್ಟ ಕಲಿತಾರ. ಇನ್ನು ಕೆಲ ನಟಿಯರು ಮಾತೇ ಕಲಿಯುವಾಂಗಿಲ್ಲ. ಇದು ಹೀಂಗಾಗಬಾರದು. ಪಾತ್ರಕ್ಕೆ ನ್ಯಾಯ ಒದಗಿಸಬೇಕಂದ್ರ ಕವಿಯ ಇಡೀ ನಾಟಕ ಓದಬೇಕು. ನಂತರ ಎಲ್ಲಾ ಪಾತ್ರದ ವಿಚಾರ ತಿಳಿದು ನಮ್ಮ ಮಾತು ನಾವು ಕಲಿಬೇಕು. ಅಂದ್ರ ನಾಟಕ ಸಕ್ಸಸ್ ಆಗುತ್ತ.

ಬಸ್ ಹಮಾಲ ನಾಟಕದಲ್ಲಿ ನನ್ನ ಅಭಿನಯವನ್ನು, ಸಂಭಾಷಣೆ ಹೇಳುವ ಪರಿ ಕಂಡು ದಿನೇಶ ಅವರು ಬೆರಗಾಗಿ ಹೋದರು. ಕೆಲವು ಸಲ ಮುಂದಿನ ಸಂಭಾಷಣೆ ದಿನೇಶ ಅವರು ಪ್ರೇಕ್ಷಕರಿಗೆ ತಿಳಿಯದ ಹಾಗೆ ಎತ್ತಿಕೊಡುತ್ತಿದ್ದೆ. ನಾಟಕ ಬಿಟ್ವಾಗ ನಾನು ನಿನಗೆ ಋಣಿಯಮ್ಮ ಅಂದಿದ್ರು. ಅಂದರೆ ಇದರ ಅರ್ಥ ನಾನು ಮಾತು ಎತ್ತಿಕೊಡದಿದ್ರೆ ಅವರು ಪಾತ್ರ ಸರಿಯಾಗಿ ಮಾಡುತ್ತಿರಲಿಲ್ಲವೆಂದಲ್ಲ. ಇಡೀ ನಾಟಕವನ್ನು ಓದಿ ಸಂದರ್ಭಕ್ಕೆ ತಕ್ಕ ಹಾಗೆ ಖಂಡಿತಾ ಅಭಿನಯಿಸಿ ಯಶಸ್ವಿಯಾಗುತ್ತಾರೆ. ಆದರೂ ಶೂಟಿಂಗ್ ಗಡಿಬಿಡಿಯಲ್ಲಿ ಡೈಲಾಗ್ ಕಲಿತಿರುವುದಿಲ್ಲ. ಯಾವ ನಟರೇ ಆಗಲಿ ಆ ಕಥೆ, ಸಂಭಾಷಣೆ ಎಲ್ಲಾ ಮನದಟ್ಟಾದಾಗ ಮಾತ್ರ ಆ ಪಾತ್ರವನ್ನು ಯಶಸ್ವಿಯಾಗಿ ಮಾಡಲು ಸಾಧ್ಯ ಎಂಬುದು ಮಾತ್ರ ಅಷ್ಟೇ ಸತ್ಯ.

ಗದಗದಿಂದ ಈಚೆ ಯಾವ ಕಂಪನಿಗಳೇ ಆಗಲಿ ಹಾಡುಗಳಲ್ಲಿ ಮಾತ್ರ ರಂಗಭೂಮಿಯ ಛಾಯೆ ಎದ್ದು ಕಾಣುತ್ತದೆ. ಮರಾಠೀ ರಂಗಸಂಗೀತ ಬಹಳ ಮಾಧುರ, ಹಾಡುಗಳ ಲಯಗಳಂತೂ ಯಾವಾಗಲೂ ಗುನುಗುತ್ತಿರಬೇಕು ಹಾಗಿರುತ್ತವೆ. ನಮ್ಮ ಯಜಮಾನರಿಗೂ ಮರಾಠೀ ಹಾಡುಗಳ ಪ್ರಭಾವ ಬಹಳಷ್ಟಾಗಿತ್ತು. ಮರಾಠಿಯ ನೃತ್ಯ ತಮಾಷಾ, ಗ್ರೂಪ್ ಡಾನ್ಸ್, ಆ ನೆಲ ಜಲ ನಾಡುನುಡಿಯ ಸಂಸ್ಕೃತಿಯ ಪ್ರತೀಕವಾಗಿರುತ್ತವೆ. ಎಷ್ಟೋ ಕವಿಗಳು ಅಂದರೆ ನಾಟಕಕಾರರು ಮರಾಠೀ ರಂಗಭೂಮಿಯಿಂದ ಪ್ರಭಾವಿತರಾಗಿದ್ದಾರೆ. ಬಹಳ ಹಿಂದೆ ಮರಾಠಿ ರಂಗಭೂಮಿಯು ಕನ್ನಡ ರಂಗಭೂಮಿಯಿಂದ ಪ್ರಭಾವಿತವಾಗಿತ್ತು.

## ಅನುಬಂಧ

| | |
|---|---|
| ಹೆಸರು | ಜಿ. ಎನ್. ಅಂಜಲಿದೇವಿ (ಗದಗ ನೀಲಕಂಠಪ್ಪ ಅಂಜಲಿದೇವಿ) |
| ತಂದೆ | ತಿಪ್ಪಣ್ಣ, ಖ್ಯಾತ ಮೃದಂಗ ಕಲಾವಿದ ಹಾಗೂ ಶಾರದಾ ನಾಟ್ಯಸಂಘ, ಅದೋನಿ ಕಂಪನಿಯ ಮಾಲಿಕ |
| ತಾಯಿ | ನರಸಮ್ಮ, ಕಂಪನಿಯ ಆಶ್ರಯದಾತೆ |
| ಜನನ | ೧೦. ೦೩. ೧೯೪೦ |
| ಸಹೋದರಿಯರು | ನಾಗರತ್ನಮ್ಮಕವಲಿ ಚನ್ನಬಸಪ್ಪ-ಬ್ಯಾಡಗಿ ಗೋಕಾಕ ಕಂಪನಿಯ ಪ್ರಸಿದ್ದ ಕಲಾವಿದೆ.<br>ಸೀತಮ್ಮ- ಶಾರದಾ ನಾಟ್ಯಸಂಘದ ಖ್ಯಾತ ಕಲಾವಿದ. ಸಂಗೀತ ನಿರ್ದೇಶಕಿ, ಹಾರ್ಮೋನಿಯಮ್ ವಾದನದಲ್ಲಿ ಪ್ರಖ್ಯಾತಿ ಪಡೆದವರು.<br>ಸುಭದ್ರಮ್ಮ ಪಡೇಸೂರ ಕಂಪನಿಯ ಕಲಾವಿದೆ<br>ಲಕ್ಷ್ಮಿ - ಯಾವ ಕಂಪನಿಗೂ ಹೋಗಲಿಲ್ಲ. ಚಿಕ್ಕಂದಿನಲ್ಲೇ ತೀರಿದಳು.<br>(ಅಂಜಲಿದೇವಿ-ಎಲ್ಲರಿಗಿಂತ ಕಿರಿಯವಳು, ಕಲಾವಿದೆ) |
| ಅಭ್ಯಾಸ | ಏಳನೆಯ ತರಗತಿ |
| ವಿವಾಹ | ರಂಗನಟ ಸಂಗೀತಗಾರ, ನೀಲಕಂಠಪ್ಪನವರೊಡನೆ<br>ಶ್ರೀಸಿದ್ಧಲಿಂಗೇಶ್ವರ ನಾಟ್ಯಸಂಘ ಪಡೇಸೂರ ಅವರ ಸಂಗೊಳ್ಳಿ ರಾಯಣ್ಣ ನಾಟಕದ-೧೨ನೆಯ ಪ್ರಯೋಗದಲ್ಲಿ ೧೯೬೩ ರಲ್ಲಿ ಗದಗ ಕ್ಯಾಂಪಿನಲ್ಲಿ. |
| ಮಗಳು | ಜಿ. ವಂದನಾ ಕಲಾವಿದೆ. ಜನನ ೧೯೬೪ರಲ್ಲಿ |
| ರಂಗಪ್ರವೇಶ | ೧೯೪೬ ರಲ್ಲಿ ೬ನೆಯ ವಯಸ್ಸಿನಲ್ಲಿ 'ಸತ್ಯವಾನ ಸಾವಿತ್ರಿ' ನಾಟಕದ ಬಾಲ ಸತ್ಯವಾನನಾಗಿ. |
| ಪತಿ ತೀರಿಕೊಂಡಿದ್ದು | ೩೦, ೦೩. ೧೯೮೬ |

### ಅಭಿನಯಿಸಿದ ನಾಟಕಗಳು ಹಾಗೂ ಕಂಪನಿಗಳು

೧ ಶಾರದಾ ನಾಟ್ಯ ಸಂಘ, ಅದೋನಿ, ಸ್ವಂತ ಕಂಪನಿ

ಪ್ರೇಮಜ್ಯೋತಿ, ಸತ್ಯವಾನ ಸಾವಿತ್ರಿ, ಜಗಜ್ಯೋತಿ ಬಸವೇಶ್ವರ, ಶಿವಜಲಂಧರ, ಛಲವಂತ

೨. ಶಾರದಾ ನಾಟ್ಯಸಂಘ, ಗೋಕಾಕ-(ಗೋಕಾಕ ಬಸವಣ್ಣಪ್ಪನ ಕಂಪನಿ)-ರಕ್ತರಾತ್ರಿ, ಕುರುಕ್ಷೇತ್ರ

೩. ಸಿದ್ಧಲಿಂಗೇಶ್ವರ ನಾಟ್ಯಸಂಘ, ಪಡೇಸೂರ

ಸಂಗೊಳ್ಳಿ ರಾಯಣ್ಣ, ಮನಗೆದ್ದ ಮಡದಿ, ಅತ್ತೆಸೊಸೆ,

ಬೆಳದಿಂಗಳು, ಬೂದಿಮುಚ್ಚಿದ ಕೆಂಡ, ಸತಿಯ ಸೌಭಾಗ್ಯ, ಹಡೆದವ್ವ

೪. ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯಸಂಘ, ಸುಳ್ಳ

ರಕ್ತರಾತ್ರಿ, ಹೇಮರಡ್ಡಿ ಮಲ್ಲಮ್ಮ, ಕಿತ್ತೂರ ಚನ್ನಮ್ಮ

೫. ಭಾರತಿ ನಾಟ್ಯಸಂಘ, ಸೂಡಿ

ರಕ್ತರಾತ್ರಿ, ಬಂಜೆತೊಟ್ಟಿಲು, ತಾಯಿ ಕರುಳು, ತಾಯಿಯಿಲ್ಲದ ತವರು, ಹಡೆದವ್ವ, ಕೊಲೆಗಾರ ಯಾರು

೬. ಶಿವಲಿಂಗೇಶ್ವರ ನಾಟ್ಯಸಂಘ, ಸಂಕನೂರ

ರೇಣುಕಾ ಮಹಾತ್ಮೆ, ಸತ್ಯಹರಿಶ್ಚಂದ್ರ, ಬಂಜೆತೊಟ್ಟಿಲು, ದಾರಿದೀಪ

೭. ದೊಡ್ಡವಾಡ ಕಂಪನಿ

ಬಸ್ ಹಮಾಲ, ಅಣ್ಣ ತಂಗಿ, ಮಲಮಗಳು, ವಾತ್ಸಲ್ಯ

೮. ಓಬಳೇಶ್ವರ ಕಂಪನಿ - ಖಾದಿಸೀರೆ

೯. ಇಟಗಿ ಭೀಮಾಂಬಿಕಾ ನಾಟ್ಯಸಂಘ, ಇಟಗಿ - ಭೀಮಾಂಬಿಕಾ ಮಹಾತ್ಮ

ಹವ್ಯಾಸಿ ತಂಡಗಳಲ್ಲಿ ರಕ್ತರಾತ್ರಿ, ಕುರುಕ್ಷೇತ್ರ, ಹೇಮರೆಡ್ಡಿ ಮಲ್ಲಮ್ಮ, ಬಾಲಚಂದ್ರ, ಅಕ್ಷಯಾಂಬರ, ಟೀಪು ಸುಲ್ತಾನ, ಸತ್ಯಹರಿಶ್ಚಂದ್ರ, ಬಾಣಸಿಗ ಭೀಮ, ನರವೀರ ಪಾರ್ಥ, ಅಪರಾಧಿನಿ, ಜೀವನಯಾತ್ರೆ, ರತ್ನಮಾಂಗಲ್ಯ, ಭಕ್ತಸುಧನ್ವ, ಹೆಣ್ಣಿನ ಜೀವನ, ಮಾತಂಗಕನ್ಯಾ, ಅಣ್ಣತಮ್ಮ, ವಾತ್ಸಲ್ಯ, ವೀರಧನಂಜಯ, ಅಣ್ಣತಂಗಿ, ಪಾಶುಪತಾಸ್ತ್ರ, ಸೌಭಾಗ್ಯಲಕ್ಷ್ಮಿ, ಮಲಮಗಳು, ಉತ್ತರಭೂಪ, ನೆಲ್ಲೂರ ನಂಬೆಕ್ಕ, ಭಕ್ತಮಾರ್ಕಂಡೇಯ, ದೈವಚಿತ್ರ, ಅಗ್ನಿಕಮಲ, ವೀರ ಅಭಿಮನ್ಯು, ಕುಲಪುತ್ರ, ಆದರ್ಶಪ್ರೇಮ, ಸ್ತ್ರೀರತ್ನ, ಹೂವು ಮುಳ್ಳು, ಮುಳ್ಳುಮಲ್ಲಿಗೆ, ಚಿತ್ರಾಂಗದಾ, ಛಲವಂತ.

## ಪ್ರಶಸ್ತಿ ಸನ್ಮಾನಗಳು

ಮುಂಬಯಿ-ಪುಣೆಗಳಲ್ಲಿ ಸಂಘ ಸಂಸ್ಥೆಗಳಿಂದ ಉತ್ತಮ ಅಭಿನೇತ್ರಿ ಪ್ರಶಸ್ತಿ, ಪ್ರಧಾನಿ ಇಂದಿರಾ ಗಾಂಧಿಯವರಿಂದ ರಕ್ತರಾತ್ರಿ ನಾಟಕ ದೆಹಲಿಯಲ್ಲಿ ವೀಕ್ಷಣೆ ಹಾಗೂ 'ಕರ್ನಾಟಕ ಕೋಗಿಲೆ' ಪ್ರಶಸ್ತಿ ಪ್ರದಾನ.

೧೯೯೮ ರ ಗಂಗಾವತಿಯಲ್ಲಿನ ರಂಗೋತ್ಸವದಲ್ಲಿ ಸನ್ಮಾನ.


೧೯೯೯ ರ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ.



' ಮಾತಂಗ ಕನ್ಯಾ ' ನಾಟಕದಲ್ಲಿ ಅಂಜಲಿದೇವಿ



' ಕುರುಕ್ಷೇತ್ರ ' ನಾಟಕದಲ್ಲಿ ಕೃಷ್ಣನಾಗಿ ಅಂಜಲಿದೇವಿ



ಸ್ತ್ರೀಯರೇ ಅಭಿನಯಿಸಿದ ' ರಕ್ತರಾತ್ರಿ ' ನಾಟಕದಲ್ಲಿ ಅಶ್ವತ್ಥಾಮನಾಗಿ ಅಂಜಲಿದೇವಿ



' ಕುರುಕ್ಷೇತ್ರ ' ನಾಟಕದಲ್ಲಿ ಅಂಜಲಿದೇವಿ



ಚಿತ್ರಾಂಗದಾ ' ನಾಟಕದಲ್ಲಿ ಚಿತ್ರಾಂಗದೆಯಾಗಿ



ರಂಗೋತ್ಸವ 98 ರಲ್ಲಿ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ




ರಂಗನಟ ಮೃಡದೇವ ಗವಾಯಿಗಳ ಸ್ಮರಣೆಗಾಗಿ ಗಂಗಾವತಿಯಲ್ಲಿ ಜರುಗಿದ ರಂಗೋತ್ಸವ 98 ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಲೀಲಾದೇವಿ ಆರ್. ಪ್ರಸಾದರಿಂದ ಸನ್ಮಾನ



ವಿಜಾಪುರದಲ್ಲಿ ನಡೆದ ಶತಮಾನದ ರಂಗಸಂಭ್ರಮ 99 ರ ನಾಟಕ ಅಕಾಡೆಮಿ ಪ್ರಶಸ್ತಿ ಎಂ. ಎಸ್. ಸತ್ಯು ಅವರಿಂದ

## ಕರ್ನಾಟಕ ನಾಟಕ ಅಕಾಡೆಮಿ

## ಅಧ್ಯಕ್ಷರು ಮತ್ತು ಸದಸ್ಯರು

೧. ಶ್ರೀ ಸಿ.ಜಿ. ಕೃಷ್ಣಸ್ವಾಮಿ, ಬೆಂಗಳೂರು

ಅಧ್ಯಕ್ಷರು

೨. ಪ್ರೊ. ಸಿದ್ದಲಿಂಗ ಪಟ್ಟಣಶೆಟ್ಟಿ, ಧಾರವಾಡ

೩. ಶ್ರೀ ಚೆನ್ನವೀರ ಝಳಕಿ, ಬಿಜಾಪುರ

೪. ಶ್ರೀ ಪಿ. ಮುನಿರೆಡ್ಡಿ, ಮದ್ದೇರಿ

೫. ಶ್ರೀಮತಿ ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ

೬. ಶ್ರೀ ಶಿವರಾಂ, ಮಂಡ್ಯ

೭. ಶ್ರೀ ಸಿ.ಎಂ. ನರಸಿಂಹಮೂರ್ತಿ, ಚಾಮರಾಜನಗರ

೮. ಶ್ರೀ ಶಂಕ್ರಯ್ಯ ಘಂಟಿ, ಗುಲ್ಬರ್ಗಾ

೯. ಶ್ರೀ ಎಸ್. ವಿ. ಪಾಟೀಲ, ಗುಂಡೂರು

೧. ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಧಾರವಾಡ

೧೧. ಶ್ರೀ ಚಿಂದೋಡಿ ಶಂಭುಲಿಂಗಪ್ಪ, ದಾವಣಗೆರೆ

೧೨. ಶ್ರೀ ಹೆಚ್. ಎಂ. ಮಯಾಬ್ರಹ್ಮಾಚಾರ್, ಬೆಂಗಳೂರು

೧೩. ಶ್ರೀ ಕೆ. ವಿ. ನಾಗರಾಜಮೂರ್ತಿ, ಬೆಂಗಳೂರು

೧೪. ಶ್ರೀ ಕಾಸರಗೋಡು ಚಿನ್ನಾ, ಕಾಸರಗೋಡು

೧೫. ಶ್ರೀ ಟಿ. ರಘು, ಬೆಂಗಳೂರು

೧೬. ಶ್ರೀ ಎಂ. ಸಂಪಂಗಿ, ಬೆಂಗಳೂರು

೧೭. ಶ್ರೀ ಎಚ್.ಎಸ್. ನೀಲಕಂಠ, ಬೆಂಗಳೂರು

೧೮. ಶ್ರೀಮತಿ ಎಸ್. ಮಾಲತಿ, ಸಾಗರ

೧೯. ಶ್ರೀ ಸಿ.ಕೆ. ಗುಂಡಣ್ಣ, ಬೆಂಗಳೂರು

೨. ಶ್ರೀಮತಿ ಪಂಕಜ ರವಿಶಂಕರ್, ಬೆಂಗಳೂರು

೨೧. ಶ್ರೀ ಕಾಗೋಡು ಅಣ್ಣಪ್ಪ, ಸಾಗರ

೨೨. ಶ್ರೀ ಎಚ್.ಎಸ್. ಉಮೇಶ್, ಮೈಸೂರು

೨೩. ಶ್ರೀ ಮಾ. ನರಸಿಂಹಮೂರ್ತಿ, ಬೆಂಗಳೂರು

೨೪. ಶ್ರೀ ಐ.ಕೆ. ಬೊಳುವಾರ್, ಪುತ್ತೂರು

೨೫. ಶ್ರೀ ಹೂಲಿಶೇಖರ್, ಅಂಬಿಕಾನಗರ

೨೬. ಶ್ರೀ ಬಿ. ಟಿ. ಮುನಿರಾಜಯ್ಯ ರಿಜಿಸ್ಟ್ರಾರ್

೨೭. ಆರ್. ಎಸ್. ದಳವಾಯಿ

ಅರ್ಥಸದಸ್ಯರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ